ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ವಿಷಯ : ಪ್ರಥಮ ಭಾಷೆ ಕನ್ನಡ

# ಏಳನೇ ತರಗತಿ

# ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ





**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**
ಬನಶಂಕರಿ 3ನೇ ಹಂತ, ಬೆಂಗಳೂರು - 560085
ಮತ್ತು
**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ**

| ಪರಿಕಲ್ಪನೆ ಮತ್ತು ಮಾರ್ಗದರ್ಶನ | |
|---|---|
| ಶ್ರೀಮತಿ ರಶ್ಮಿ ಮಹೇಶ್ V, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | |
| **ಶ್ರೀಮತಿ. ಡಾ. ಕೆ. ವಿದ್ಯಾಕುಮಾರಿ, ಭಾ.ಆ.ಸೇ**<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ , ಬೆಂಗಳೂರು | **ಶ್ರೀಮತಿ ಅನಿತಾ ನಾಜರೆ**<br>ನಿರ್ದೇಶಕರು,<br>DSERT, ಬೆಂಗಳೂರು |
| **ಡಯಟ್ ಸಹಕಾರ** | |
| ಪ್ರಾಂಶುಪಾಲರು<br>ಯೋಗೇಶ್ ಕೆ<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>(ಡಯಟ್) ಮಂಡ್ಯ. | **ನೋಡಲ್ ಅಧಿಕಾರಿ**<br>ನಿರ್ಮಲ ವಿ<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>(ಡಯಟ್) ಮಂಡ್ಯ. |
| **ಸಂಯೋಜನೆ** | |
| ಶ್ರೀಮತಿ ರಾಧಾ P,<br>ಹಿರಿಯ ಸಹಾಯಕ ನಿರ್ದೇಶಕರು,<br>DSERT, ಬೆಂಗಳೂರು | |
| **ರಚನಾ ಸಂಪನ್ಮೂಲ ತಂಡ** | **ಪರಿಷ್ಕರಣಾ ಸಂಪನ್ಮೂಲ ತಂಡ** |
| 1. ಶ್ರೀಮತಿ ಶಿಲ್ಪ ಎನ್<br>ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ತೊರೆಶೆಟ್ಟಹಳ್ಳಿ ಮದ್ದೂರು ತಾಲ್ಲೂಕು | 1. ಶ್ರೀಮತಿ ಶಿಲ್ಪ ಎನ್<br>ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೊರೆಶೆಟ್ಟಹಳ್ಳಿ, ಮದ್ದೂರು ತಾಲ್ಲೂಕು |
| 2. ಶ್ರೀಮತಿ ಧನಲಕ್ಷ್ಮಿ<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು | **2.** ಶ್ರೀಮತಿ ಧನಲಕ್ಷ್ಮಿ<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು |
| 3.ಶ್ರೀ ಗಿರೀಶ್ ನಾಯಕ್<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆ ಆರ್ ಸಾಗರ, ಶ್ರೀರಂಗಪಟ್ಟಣ ತಾಲೂಕು | 3.ಶ್ರೀ ಗಿರೀಶ್ ನಾಯಕ್<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆ ಆರ್ ಸಾಗರ, ಶ್ರೀರಂಗಪಟ್ಟಣ ತಾಲೂಕು |
| 4.ಶ್ರೀ ಮಹೇಶ್ ಬಿ ಎಂ<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊನಗಹಳ್ಳಿ, ಮಳವಳ್ಳಿ, ತಾಲೂಕು | |
| 5.ಶ್ರೀ ಕೀರ್ತಿ ಬಿ ವಿ<br>ಸಹ ಶಿಕ್ಷಕರು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಳ್ಳೇನಹಳ್ಳಿ, ಪಾಂಡವಪುರ ತಾಲೂಕು | |
| 6. ಶ್ರೀ ಸಂತೋಷ್<br>ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುರಹಟ್ಟಿ, ಪಾಂಡವಪುರ ತಾಲ್ಲೂಕು | ಪರಿಶೀಲಕರು<br>ಶ್ರೀಮತಿ ಪ್ರೀತಿ ಹೆಗಡೆ,ಸ,ಶಿ<br>ಕೆ,ಪಿ,ಎಸ್ ಹೆಗ್ಗನಹಳ್ಳಿ,<br>ಬೆಂಗಳೂರು ಉತ್ತರ ಜಿಲ್ಲೆ |
| ಮಾರ್ಗದರ್ಶಕರು | ಪರಿಶೀಲಕರು |
| ಡಾ. ಚಂದ್ರಶೇಖರ್ ಜಿ,ಆರ್<br>ಉಪನ್ಯಾಸಕರು, ಡಯಟ್ ಮಂಡ್ಯ. | ಯಶೋಧ ಎಂ ಎಸ್.<br>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಇಟ್ಟಮಡು<br>ಬೆಂಗಳೂರು ದಕ್ಷಿಣ ಜಿಲ್ಲೆ |

## ಶುಭಹಾರೈಕೆ

'ಬದಲಾವಣೆಯ ಶಿಕ್ಷಣ, ಭವಿಷ್ಯದ ನಿರ್ಮಾಣ'

ಜಗತ್ತು ನಿತ್ಯ ಪರಿವರ್ತನಾಶೀಲವಾದದ್ದು, ಇಂದು ನಾವು ಮಕ್ಕಳಿಗೆ 21ನೇ ಶತಮಾನದ ಕೌಶಲಗಳನ್ನು ಗಳಿಸಿಕೊಳ್ಳುವಂತೆ ಮಾಡುವ ಮೂಲಕ ಚೈತನ್ಯಶೀಲ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ನಮ್ಮದಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಯ ಬದುಕಿನಲ್ಲಿ ಭಾಷಾ ಕಲಿಕೆ ಮಹತ್ವದ ಪಾತ್ರ ವಹಿಸುತ್ತದೆ. ಭಾಷಾ ಕಲಿಕೆಯು ಕೇವಲ ಹೊಸ ಶಬ್ದಗಳನ್ನು ಮತ್ತು ವ್ಯಾಕರಣ ನಿಯಮಗಳನ್ನು ಕಲಿಯುವುದಷ್ಟೇ ಅಲ್ಲ, ಅದು ಜನಜೀವನ ಮತ್ತು ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಬೆಸೆಯುವ ಕೊಂಡಿಯಾಗಿದೆ. ಅಷ್ಟೇ ಅಲ್ಲದೇ ಅದು ಒಂದು ಹೊಸ ಸಂಸ್ಕೃತಿ, ಆಲೋಚನಾ ಶೈಲಿ ಮತ್ತು ಜೀವನದ ಹೊಸ ದೃಷ್ಟಿಕೋನವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ವಿಮರ್ಶಾತ್ಮಕ ಚಿಂತನೆ, ಸೃಜನಾತ್ಮಕ ಅಭಿವ್ಯಕ್ತಿ, ಉತ್ತಮ ಸಂವಹನ ಕೌಶಲ ಹಾಗೂ ಜೀವನ ಕೌಶಲಗಳನ್ನು ಗಳಿಸಿಕೊಳ್ಳುವುದಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡಬೇಕಿದೆ. ಅಲ್ಲದೇ, ಈ ಕಲಿಕೆಯ ಪಯಣದಲ್ಲಿ ಭಾಷಾ ಕೌಶಲಗಳು ಹಾಗೂ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಗಳಿಸಿಕೊಂಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಕೂಡ ಬಹಳ ಮುಖ್ಯ.

ಈ ನಿಟ್ಟಿನಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ **"ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ"** ಯನ್ನು ರಚಿಸಲಾಗಿದೆ. ವಿದ್ಯಾರ್ಥಿಯ ಭಾಷಾ ಗ್ರಹಿಕೆ, ಕಲಿಕೆ, ಬಳಕೆ, ಚಿಂತನೆ ಎಂಬುದರ ಹಿಂದಿರುವ ಮೂಲಭೂತ ಆಲೋಚನೆಗಳು ಮತ್ತು ಸಿದ್ಧಾಂತಗಳನ್ನು ಅವಲೋಕಿಸಿ, ಭಾಷಾ ಪಠ್ಯಕ್ರಮದ ಗುರಿಗಳು, ಸಾಮರ್ಥ್ಯಗಳು ಹಾಗೂ ಕಲಿಕಾಫಲಗಳನ್ನು ಆಧರಿಸಿದಂತೆ ತರಗತಿವಾರು, ಪ್ರಸ್ತುತ ಉಪಕ್ರಮವನ್ನು ಯೋಜಿಸಲಾಗಿದೆ.

ಸದರಿ ಉಪಕ್ರಮದಲ್ಲಿ ಪರಿಕಲ್ಪನಾ ತಿಳುವಳಿಕೆ, ಭಾಷಾ ಪ್ರಾವೀಣ್ಯತೆ, ಮೌಲ್ಯ ಆಧಾರಿತ ಪ್ರಶ್ನೆಗಳು ಮತ್ತು ಸ್ಥಳೀಯ ಸನ್ನಿವೇಶಕ್ಕೆ ವಿಶೇಷ ಒತ್ತು ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳು ಸಹಾನುಭೂತಿ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯೊಂದಿಗೆ ಜ್ಞಾನವನ್ನು ಅನ್ವಯಿಸಲು ಕಲಿಯುತ್ತಾರೆ. ಈ ಸಂಪನ್ಮೂಲವು ಸ್ವ-ಮೌಲ್ಯಮಾಪನ ಮತ್ತು ತರಗತಿ ಅಭ್ಯಾಸಕ್ಕೆ ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಭಾಷಾ ಕಲಿಕೆಯು ಸಂವಹನದ ಗಡಿಗಳನ್ನು ಮೀರಿ, ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಮತ್ತು ಜಗತ್ತನ್ನು ವಿಶಾಲ ಮನೋಭಾವದಿಂದ ನೋಡಲು ನೆರವಾಗುವ ಅತ್ಯುತ್ತಮ ದೃಷ್ಟಿಕೋನವನ್ನು ಒದಗಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲಗಳನ್ನು ಸಮರ್ಥವಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ಇಲ್ಲಿ ಸೂಚಿಸಿರುವ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ಕಲಿಕಾ ಫಲಗಳಿಗೆ ಆಧರಿಸಿ ಪ್ರತೀ ಅಧ್ಯಾಯಕ್ಕೂ ರೂಪಿಸಿದ್ದು, ಶಿಕ್ಷಕರು ಇವುಗಳ ತಾತ್ವಿಕತೆಯನ್ನು ಅರ್ಥೈಸಿಕೊಂಡು ಪರಿಣಾಮಕಾರಿಯಾಗಿ ತರಗತಿ ಪ್ರಕ್ರಿಯೆ ಮತ್ತು ಮೌಲ್ಯಾಂಕನ ಪ್ರಕ್ರಿಯೆ ನಿರ್ವಹಿಸಲು ಸಹಕಾರಿಯಾಗುತ್ತವೆ. ಈ ಪ್ರಶ್ನೆಕೋಠಿಯನ್ನು ಶಿಕ್ಷಕರು ತರಗತಿ ಪ್ರಕ್ರಿಯೆಯಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಹಂತ-ಹಂತವಾಗಿ ನಿರಂತರವಾಗಿ (CCE) ಬಳಸಬೇಕಾಗುತ್ತದೆ.

ಈ ಮೂಲಕ ಭಾಷೆಯನ್ನು ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ, ಆತ್ಮವಿಶ್ವಾಸ ಮತ್ತು ಭಾಷಾ ಬಳಕೆಯ ಗುಣಮಟ್ಟವನ್ನು ಇನ್ನಷ್ಟು ವೃದ್ಧಿಸಲಿ ಎಂಬುದು ನಮ್ಮ ಹಾರೈಕೆ. ಈ ಉಪಕ್ರಮವನ್ನು ಅಭಿವೃದ್ಧಿಪಡಿಸಲು ಸಹಕರಿಸಿದ ಪಠ್ಯಕ್ರಮ ತಜ್ಞರು, ವಿಷಯ ತಜ್ಞರು, DIET ಬೋಧಕವರ್ಗ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ, ಬೆಂಗಳೂರು

# ಶಿಕ್ಷಕರಿಗೆ ಮಾರ್ಗಸೂಚಿಗಳು

1. ಎಲ್ಲ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಇಲಾಖೆಯ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಮೊದಲಿಗೆ ಪಠ್ಯಕ್ರಮದ ಗುರಿಗಳು ಮತ್ತು ಸಾಮರ್ಥ್ಯಗಳ ಬಗ್ಗೆ ಸ್ಪಷ್ಟವಾಗಿ ಅರಿತುಕೊಳ್ಳಬೇಕು.

2. ಮಕ್ಕಳು ಆಯಾ ತರಗತಿ ಹಾಗೂ ವಿಷಯವಾರು ಸಾಧಿಸಬೇಕಾದ ಕಲಿಕಾಫಲಗಳಿಗೆ ಪೂರಕವಾಗಿ ಇಲ್ಲಿ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ನೀಡಲಾಗಿದೆ. ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳು ಕಲಿಕಾಫಲಗಳನ್ನು ಸಾದಿಸಲು ಪೂರಕವಾಗಿ ಇವುಗಳನ್ನು ಸಂದರ್ಭೋಚಿತವಾಗಿ ಬಳಸುವುದು.

3. ತರಗತಿ ಪ್ರಕ್ರಿಯೆಯಲ್ಲಿ ಹಂತ ಹಂತವಾಗಿ ಕಲಿಕಾಫಲ ಆಧಾರಿತ ಚಟುವಟಿಕೆಗಳನ್ನು ಬಳಸುವ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳುವುದು ಹಾಗೂ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಲಿಕಾಫಲ ಆಧಾರಿತ ಪ್ರಶ್ನಾಕೋಠಿಯಲ್ಲಿ ನೀಡಿರುವ ಎಲ್ಲ ಪ್ರಶ್ನೆಗಳನ್ನೂ ಅಭ್ಯಾಸ ಮಾಡಿಸುವುದು.

4. ಕಲಿಕೆಯಲ್ಲಿ ನಿಧಾನಗತಿಯಲ್ಲಿರುವ ಮಕ್ಕಳಿಗೆ ಅವರವರ ಕಲಿಕಾ ಅಂತರವನ್ನು ಗುರುತಿಸಿ ಸೂಕ್ತ ಚಟುವಟಿಕೆಗಳನ್ನು ಕೈಗೊಳ್ಳುವುದು.

5. ಈ ಸಲದ ಪ್ರಶ್ನಾಕೋಠಿಯು ಜ್ಞಾನ, ಗ್ರಹಿಕೆ, ಅನ್ವಯ, ಅಭಿವ್ಯಕ್ತಿ, ಪ್ರಶಂಸೆ, ವಿಮರ್ಶಾತ್ಮಕತೆ ಹಾಗೂ ಹೈಯರ್ ಆರ್ಡರ್ ಪ್ರಶ್ನೆಗಳನ್ನು ಒಳಗೊಂಡಿದೆ. ಹೈಯರ್ ಆರ್ಡರ್ ಪ್ರಶ್ನೆಗಳು ಹೋಲಿಕೆ, ಸಾಮ್ಯತೆ ಮತ್ತು ವ್ಯತ್ಯಾಸ, ವಿಶ್ಲೇಷಣಾ ಸಾಮರ್ಥ್ಯ, ಮೌಲ್ಯಮಾಪನ ಮತ್ತು ಸೃಜನಶೀಲತೆಯಂತಹ ಆಯಾಮಗಳನ್ನು ಒಳಗೊಂಡಿರುತ್ತದೆ.

6. ಕೇವಲ ಅಂಕಗಳನ್ನು ನಮೂದಿಸುವುದಕ್ಕಾಗಿ, ಅಥವಾ ಪಠ್ಯವಸ್ತುವನ್ನು ಪೂರ್ಣಗೊಳಿಸುವುದಕ್ಕಾಗಿ ಕಲಿಕಾ ಫಲಾಧಾರಿತ ಮೌಲ್ಯಾಂಕನವನ್ನು ಜಾರಿಗೊಳಿಸದೇ, ನಮ್ಮ ಶಾಲೆಯ ಮಕ್ಕಳ ಸಾಮರ್ಥ್ಯ ವೃದ್ಧಿಗಾಗಿ ಹಾಗೂ ಕೌಶಲಗಳ ಪ್ರಾಪ್ತಿಗಾಗಿ ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನಾಕೋಠಿಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದು.

7. ನಮ್ಮ ಶಾಲೆಗೆ ಬರುವ ಮಕ್ಕಳು ಎಲ್ಲಾ ವಿಷಯಗಳಲ್ಲೂ ನಿಗದಿತ ಸಾಮರ್ಥ್ಯಗಳಿಸುವುದಕ್ಕಾಗಿ ಕಲಿಕಾನುಭವಗಳನ್ನು ನೀಡುವ ಹಾಗೂ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕರಿಸುವ ನಿಟ್ಟಿನಲ್ಲಿ ಚಿಂತಿಸಿ ಪ್ರತಿಯೊಬ್ಬರೂ ಈ ಶೈಕ್ಷಣಿಕ ಉಪಕ್ರಮವನ್ನು ಕಾರ್ಯಗತಗೊಳಿಸಬೇಕಿದೆ.

8. ಆಯಾಯ ತರಗತಿಯಲ್ಲಿ ಕಲಿಕೆಯನ್ನು ಅನುಕೂಲಿಸುತ್ತಿರುವ ವಿಷಯವಾರು ಶಿಕ್ಷಕರು ತಮ್ಮ ತಮ್ಮ ವಿಷಯಗಳ ಪ್ರಶ್ನಾಕೋಠಿಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಮಕ್ಕಳಲ್ಲಿ ಅಪೇಕ್ಷಿತ ಕಲಿಕಾಫಲಗಳ ಸಾಧನೆಗಾಗಿ ಶ್ರಮಿಸುವುದು.

9. ಇಲಾಖೆಯ ವೆಬ್ ಸೈಟ್ ಅಲ್ಲಿ ಲಭ್ಯವಿರುವ ಕಲಿಕಾಫಲ ಆಧಾರಿತ ಸಾಮಗ್ರಿಗಳನ್ನು ಕೂಲಂಕಷವಾಗಿ ಅವಲೋಕಿಸುವುದು ಹಾಗೂ ಅವುಗಳನ್ನು ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸುವುದು.

# ಭಾಷೆ-ಕನ್ನಡ- ಕಲಿಕಾ ಫಲಗಳು

## (7ನೇ ತರಗತಿ)

| Curricular Goals<br>ಪಠ್ಯಕ್ರಮ ಗುರಿ | Competency<br>ಸಾಮರ್ಥ್ಯಗಳು | Learning outcome<br>ಕಲಿಕಾ ಫಲಗಳು |
|---|---|---|
| CG-1: ಭಾಷಾ ಕೌಶಲಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಸಂವಹನ (ವಿವರಣೆ, ವಿಶ್ಲೇಷಣೆ ಮತ್ತು ಪ್ರತಿಕ್ರಿಯೆ) ನಡೆಸುವ ಸಾಮರ್ಥ್ಯವನ್ನು ಬೆಳೆಸುವುದು. | C-1.1: ಪಠ್ಯವನ್ನು (ಸುದ್ದಿ, ಪತ್ರಿಕೆ, ವರದಿ, ಸಂಪಾದಕೀಯ) ಗಮನವಿಟ್ಟು ಆಲಿಸಿದ ನಂತರ ಅಥವಾ ಓದಿದ ನಂತರ ಅಲ್ಲಿನ ಮುಖ್ಯ ಅಂಶಗಳನ್ನು ಗುರುತಿಸುವುದು ಮತ್ತು ಸಾರಾಂಶೀಕರಿಸುವುದು. | 1.ಮೌಖಿಕ ಪ್ರಸ್ತುತಿಗಳನ್ನು ವಿಮರ್ಶಾತ್ಮಕವಾಗಿ ಆಲಿಸುತ್ತಾರೆ. ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ ಹಾಗೂ ಭಿನ್ನ ದೃಷ್ಟಿಕೋನಗಳನ್ನು ನೀಡುತ್ತಾರೆ. |
| | | 2. ತಾವು ಓದಿದ/ಕೇಳಿದ ಪಠ್ಯದಲ್ಲಿ ಕಂಡು ಬರುವ ಪದಗಳ ಆಯ್ಕೆ ಮತ್ತು ಬಳಕೆ, ಪಠ್ಯದಲ್ಲಿ ವ್ಯಕ್ತವಾದ ಲೇಖಕರ ಆಶಯ, ಉದ್ದೇಶ ಮತ್ತು ವಿಚಾರಗಳನ್ನು ಗುರುತಿಸುತ್ತಾರೆ. |
| | C-1.2: ವಿವಿಧ ರೀತಿಯ ಸಂದರ್ಶನಗಳನ್ನು (ರಚನಾತ್ಮಕ ಮತ್ತು ರಚನಾತ್ಮಕವಲ್ಲದ) ಆಲಿಸುವುದು ಮತ್ತು ಸಂದರ್ಶನಗಳನ್ನು ಯೋಜಿಸಿ ಅನುಷ್ಠಾನಗೊಳಿಸುವುದು. | 3.ರಚನಾತ್ಮಕವಲ್ಲದ ಸಂದರ್ಶನಗಳನ್ನು ಆಲಿಸುತ್ತಾರೆ ಮತ್ತು ಅವುಗಳನ್ನು ಯೋಜಿಸುತ್ತಾರೆ. |
| | C-1.3: ಸಾಮಾಜಿಕ ಅನುಭವಗಳು ಮತ್ತು ಸಾಮಾಜಿಕ ಕಾಳಜಿಗಳ ಬಗೆಗೆ ಆಳವಾದ ಪ್ರಶ್ನೆಗಳನ್ನು (ಮುಕ್ತ/ನಿರ್ಬಂಧಿತ, ಔಪಚಾರಿಕ/ಅನೌಪಚಾರಿಕ, ಸಂದರ್ಭಕ್ಕೆ ಸೂಕ್ತವಾದ ಮತ್ತು ಸೂಕ್ಷ್ಮತೆಯಿಂದ ಕೂಡಿದ) ಕೇಳುವುದು. | 4. ವಿಷಯಕ್ಕೆ ಪೂರಕವಾಗಿ ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸುತ್ತಾರೆ ಮತ್ತು ಪರಿಷ್ಕರಿಸುತ್ತಾರೆ. |
| | C-1.4: ವಿಭಿನ್ನ ಓದುಗರು ಮತ್ತು ವಿಭಿನ್ನ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತ ಭಾಷಾ ಶೈಲಿ ಮತ್ತು ಭಾಷಾ ಪ್ರಯೋಗದೊಂದಿಗೆ ವಿವಿಧ ರೀತಿಯ ಪತ್ರಗಳು, ಪ್ರಬಂಧಗಳು ಮತ್ತು ವರದಿಗಳನ್ನು ಬರೆಯುವುದು. | 5. ವಿವಿಧ ಅನುಭವಗಳನ್ನು ಆಧರಿಸಿ ಪ್ರಬಂಧ, ವರದಿ, ಲೇಖನಗಳನ್ನು ಬರೆಯುತ್ತಾರೆ. ಹಾಗೂ ಅವುಗಳನ್ನು ಸೂಕ್ತವಾದ ಚಿತ್ರ, ಗ್ರಾಫ್, ಫ್ಲೋ ಚಾರ್ಟ್ ಗಳ ಮೂಲಕ ಪ್ರಸ್ತುತಿಪಡಿಸುತ್ತಾರೆ |
| | C-1.5: ವಿಭಿನ್ನ ಕೇಳುಗರು, ವೀಕ್ಷಕರು ಮತ್ತು ವಿಭಿನ್ನ ಉದ್ದೇಶಗಳಿಗಾಗಿ ಆಡಿಯೋ, ವಿಡಿಯೋ ಅಥವಾ ಎರಡನ್ನೂ ಒಳಗೊಂಡ ಕಂಟೆಂಟ್ (ವಿಷಯ ವಸ್ತು) ರಚಿಸುವುದು. | 6. ಇ-ಮೇಲ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳಲ್ಲಿನ ಬರವಣಿಗೆಯ ಮೂಲ ರಚನೆಯನ್ನು ಅರ್ಥಮಾಡಿಕೊಳ್ಳುತ್ತಾರೆ. |
| | | 7. ತಮ್ಮ ಸ್ವಂತ ಆಲೋಚನೆ/ವಿಚಾರಗಳನ್ನು ಪಾಡ್‌ಕಾಸ್ಟ್‌ಗಳು (Podcasts) ಮತ್ತು ಸಾಕ್ಷ್ಯಚಿತ್ರಗಳ (Documentaries) ರೂಪದಲ್ಲಿ ಹೊರತರಲು ಯೋಜಿಸುತ್ತಾರೆ. |

| | | |
|---|---|---|
| CG.2: ವಿವಿಧ ರೀತಿಯ ಸಾಹಿತ್ಯಿಕ ಪ್ರಕಾರಗಳನ್ನು ವಿವಿಧ ಮೂಲಗಳಿಂದ ಅನ್ವೇಷಿಸುವ ಮೂಲಕ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಆಸ್ವಾದಿಸುವು ಮತ್ತು ಗೌರವಿಸುವುದು. | C-2.1: ವಿವಿಧ ಕಾಲಘಟ್ಟ ಹಾಗೂ ವಿಭಿನ್ನ ಸಂಸ್ಕೃತಿಯ ಸಾಹಿತ್ಯ ಪ್ರಕಾರಗಳನ್ನು (ಗದ್ಯ, ಪದ್ಯ, ನಾಟಕ) ಹಾಗೂ ಬರವಣಿಗೆ ಶೈಲಿಗಳನ್ನು (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ಗುರುತಿಸುವುದು ಮತ್ತು ಆಸ್ವಾದಿಸುವುದು. | 8. ವಿವಿಧ ಪ್ರಕಾರದ ಬರವಣಿಗೆಯಲ್ಲಿ ಬಳಸಲಾದ ಪದಗಳು ಮತ್ತು ವಾಕ್ಯಗಳ ವೈಶಿಷ್ಟ್ಯವನ್ನು ಆಸ್ವಾದಿಸುತ್ತಾರೆ.<br>9. ಬರೆವಣಿಗೆಯ ವಿಭಿನ್ನ ಶೈಲಿಗಳಲ್ಲಿ (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ಬರೆಯುವುದನ್ನು ಅಭ್ಯಾಸ ಮಾಡುತ್ತಾರೆ. |
| | C-2.2: ವೈವಿಧ್ಯಮಯ ಸಾಹಿತ್ಯವನ್ನು ಓದುವ ಮೂಲಕ ಸಾಹಿತ್ಯಿಕ ಅಲಂಕಾರಗಳನ್ನು (ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ) ಪ್ರತಿಮೆ, ಅನುಪ್ರಾಸ, ನುಡಿಗಟ್ಟು, ಗಾದೆ ಮತ್ತು ಒಗಟುಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು. | 10. ತರಗತಿಯ ಪಠ್ಯ ಮತ್ತು ಅಪರಿಚಿತ ಪಠ್ಯಗಳಲ್ಲಿನ ವಿವಿಧ ಅಲಂಕಾರಗಳ ನಡುವಿನ ವ್ಯತ್ಯಾಸಗಳನ್ನು ಹೋಲಿಸಿ ಅರ್ಥೈಸುತ್ತಾರೆ.<br>11. ತರಗತಿ ಪಠ್ಯದಲ್ಲಿನ ನುಡಿಗಟ್ಟುಗಳು, ಗಾದೆಗಳು ಮತ್ತು ಒಗಟುಗಳ ರಚನಾತ್ಮಕ ವ್ಯತ್ಯಾಸಗಳನ್ನು ಅರ್ಥೈಸುತ್ತಾರೆ. |
| | C-2.3: ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ವಿವಿಧ ಆಯಾಮಗಳ ಕುರಿತು ತಮ್ಮ ಆಲೋಚನೆ ಮತ್ತು ವಿಮರ್ಶೆಗಳನ್ನು ಭಾಷಣ ಹಾಗೂ ಬರವಣಿಗೆಯ ಮೂಲಕ ಅಭಿವ್ಯಕ್ತಪಡಿಸುವುದು. | 12. ಜಾನಪದ ಕಥೆಗಳು, ಕರಕುಶಲ ವಸ್ತುಗಳು, ವಾಸ್ತುಶಿಲ್ಪ, ಕಲೆ ಮತ್ತು ನೃತ್ಯಗಳ ಕುರಿತು ತಮ್ಮ ಆಲೋಚನೆಗಳನ್ನು ಸಂಘಟಿತ ರೂಪದಲ್ಲಿ ಬರೆಯುತ್ತಾರೆ. |
| CG-3: ಮೂಲಭೂತ ಭಾಷಾ ಘಟಕಗಳನ್ನು (ಪದ ಮತ್ತು ವಾಕ್ಯ ರಚನೆ) ಗುರುತಿಸುವ ಮತ್ತು ಅವುಗಳನ್ನು ಮೌಖಿಕ ಹಾಗೂ ಲಿಖಿತವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. | C-3.1: ವಿವಿಧ ಪ್ರಕಾರದ ಸಾಹಿತ್ಯ ಪಠ್ಯಗಳಲ್ಲಿ ವ್ಯಕ್ತವಾಗಿರುವ ವಾಕ್ಯ ರಚನೆ, ಲೇಖನ ಚಿಹ್ನೆಗಳು, ಕಾಲ-ಲಿಂಗ-ವಚನ, ನಾಮಪದ, ಕ್ರಿಯಾಪದಗಳಂತಹ ಮೂಲಭೂತ ಭಾಷಾ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಬರೆಯುವಾಗ ಅವುಗಳನ್ನು ಅನ್ವಯಿಸುವುದು. | 13. ಸಂಕೀರ್ಣ ಮತ್ತು ಮಿಶ್ರ ವಾಕ್ಯಗಳೂ ಸೇರಿದಂತೆ ಜಟಿಲ ವಾಕ್ಯ ರಚನೆ, ಲೇಖನ ಚಿಹ್ನೆಗಳು, ಕಾಲ-ಲಿಂಗ-ವಚನ, ನಾಮಪದ, ಕ್ರಿಯಾಪದಗಳಂತಹ ಮೂಲಭೂತ ಭಾಷಾ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ತಮ್ಮ ಬರವಣಿಗೆಯಲ್ಲಿ ಪರಿಣಾಮಕಾರಿಯಾಗಿ ಬಳಸುತ್ತಾರೆ<br>14. ನಾಮಪದ, ಕ್ರಿಯಾಪದ, ನಾಮವಿಶೇಷಣ, ಕ್ರಿಯಾವಿಶೇಷಣ, ಸರ್ವನಾಮ ಮತ್ತು ಅವ್ಯಯಗಳಂತಹ ವ್ಯಾಕರಣಾಂಶಗಳನ್ನು ತಮ್ಮ ಬರೆವಣಿಗೆಯಲ್ಲಿ ಬಳಸುತ್ತಾರೆ. |
| | C-3.2: ಸೂಕ್ತವಾದ ಶೈಲಿ ಮತ್ತು ಭಾಷಾ ಬಳಕೆಯೊಂದಿಗೆ ಗದ್ಯ, ಪದ್ಯ ಮತ್ತು ನಾಟಕಗಳನ್ನು ರಚಿಸುವುದು. | 15. ಓದುಗ ಮತ್ತು ಬರವಣಿಗೆಯ ಉದ್ದೇಶವನ್ನು ಕೇಂದ್ರೀಕರಿಸಿ ಸೂಕ್ತ ಭಾಷಾ ರಚನೆ ಮತ್ತು ಶೈಲಿಯೊಂದಿಗೆ ಸ್ವತಂತ್ರವಾದ ಗದ್ಯ, ಪದ್ಯ, ನಾಟಕಗಳನ್ನು ಬರೆಯುತ್ತಾರೆ; |
| CG-4 ವಿಮರ್ಶೆಗಳನ್ನು ಬರೆಯಲು ಮತ್ತು ಆಕರಗಳನ್ನು (References)ಹುಡುಕಲು ಗ್ರಂಥಾಲಯವನ್ನು ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. | C-4.1: ವಿವಿಧ ಪ್ರಕಾರದ ( ಕಾಲ್ಪನಿಕ ಮತ್ತು ಕಾಲ್ಪನಿಕವಲ್ಲದ- Fiction and non fiction) ಪುಸ್ತಕಗಳನ್ನು ಓದುವುದ ಅವುಗಳಿಗೆ ಪ್ರತಿಕ್ರಿಯಿಸುವುದು ಹಾಗೂ ವಿಮರ್ಶಿಸುವುದು. | 16.ಕಾಲ್ಪನಿಕ ಮತ್ತು ಕಾಲ್ಪನಿಕವಲ್ಲದ ಪಠ್ಯಗಳನ್ನು ಓದುತ್ತಾರೆ ಹಾಗೂ ಅವುಗಳನ್ನು ಪರಸ್ಪರ ಹೋಲಿಸಿ ಸಣ್ಣ ಟಿಪ್ಪಣಿಗಳನ್ನು ಬರೆಯುತ್ತಾರೆ |
| | C-4.2: ಯೋಜನೆಗಳು ( ಪ್ರಾಜೆಕ್ಟ್ ) ಮತ್ತು ಇತರೆ ಚಟುವಟಿಕೆಗಳ ಪರಾಮರ್ಶನಕ್ಕಾಗಿ ಪುಸ್ತಕಗಳು ಮತ್ತು ಇತರ ಮಾಧ್ಯಮ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವುದು. | 17.ಗ್ರಂಥಾಲಯದಲ್ಲಿರುವ ಕ್ಯಾಟಲಾಗ್ ಸಹಾಯದಿಂದ ತಮ್ಮ ಯೋಜನೆ ಮತ್ತು ಚಟುವಟಿಕೆಗಳಿಗೆ ಪೂರಕವಾದ ಪುಸ್ತಕಗಳನ್ನು ಹುಡುಕಿ ಬಳಸುತ್ತಾರೆ. |

| | | |
|---|---|---|
| CG-5: ಕನ್ನಡ ಭಾಷೆಯ ವಿಶಿಷ್ಟ ಲಕ್ಷಣಗಳಾದ ವರ್ಣಮಾಲೆ, ಲಿಪಿ-ಧ್ವನಿಗಳು,ಪ್ರಾಸ,ಶ್ಲೇಷೆ ಮತ್ತು ಆ ಭಾಷಾ ಜಾಯಮಾನದ ನಾಣ್ಣುಡಿ, ನುಡಿಗಟ್ಟು ಹಾಗೂ ಭಾಷಾ ಆಟಗಳನ್ನು ಆಸ್ವಾದಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. | C-5.1:ಕನ್ನಡಭಾಷೆಯಲ್ಲಿನ ಧ್ವನಿ ,ಲಿಪಿ,ಸ್ವರ ವ್ಯಂಜನಗಳುಆಭಾಷೆಯಲ್ಲಿಹೇಗೆ ಬಳಕೆಯಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು. | 18.ಎರಡು ಭಿನ್ನ ಭಾಷೆಗಳ ( ಕನ್ನಡ-ಇಂಗ್ಲಿಷ್) ಧ್ವನಿ ಮತ್ತು ಲಿಪಿಗಳನ್ನು ಹೋಲಿಸುತ್ತಾರೆ. |
| | | 19. ಕರ್ನಾಟಕದಲ್ಲಿರುವ ಭಾಷಾ ವೈವಿಧ್ಯತೆಯನ್ನು ಗುರುತಿಸುತ್ತಾರೆ ಮತ್ತು ಅವುಗಳನ್ನು ಆಲಿಸಿ ಅರ್ಥಮಾಡಿಕಕೊಳ್ಳುತ್ತಾರೆ. |
| | CG-5.2:ಶ್ಲೇಷೆಗಳು(PUNS), ಪ್ರಾಸ, ಅನುಪ್ರಾಸ,ಗಾದೆ, ನಾಣ್ಣುಡಿ ಹಾಗೂ ನುಡಿಗಟ್ಟುಗಳನ್ನು ಬಳಸುವ ಮೂಲಕ ಭಾಷಣ ಮತ್ತು ಬರೆವಣಿಗೆಯನ್ನು ಹೆಚ್ಚು ಆಸಕ್ತಿದಾಯಕ ಹಾಗೂ ಆನಂದದಾಯಕಗೊಳಿಸುವುದು. | 20.ತಮ್ಮ ಭಾಷಣಗಳಲ್ಲಿ ಶ್ಲೇಷೆ,ಪ್ರಾಸ, ಗಾದೆ, ನುಡಿಗಟ್ಟು ಹಾಗೂ ನಾಣ್ಣುಡಿಗಳನ್ನು ಬಳಸುತ್ತಾರೆ |
| | CG-5.3 : ಭಾಷಾ ಕಲಿಕೆಯನ್ನು ಚೈತನ್ಯ ಶೀಲಗೊಳಿಸುವುದಕ್ಕೆ ಪೂರಕವಾಗಿ ಭಾಷಾ ಆಟಗಳನ್ನು ಪರಿಚಿಯಿಸುವುದು ಉದಾಹರಣೆಗೆ ಒಗಟು, ಗಾದೆ, ಅಂತ್ಯಾಕ್ಷರಿ,ಅಕ್ಷರ ಪಲ್ಲಟ,( Spoonerisms) ದ್ವಿಮುಖಿ ಪದ ( Palindromes) ಪದಬಂಧ ರಚನೆ ಇತ್ಯಾದಿ. | 21ಭಾಷಾ ಸೃಜನಶೀಲತೆಯನ್ನು ಪ್ರದರ್ಶಿಸುವ ಒಗಟು, ಗಾದೆ,ಅಕ್ಷರ ಪಲ್ಲಟ( Spoonerisms) ದ್ವಿಮುಖಿ ಪದ ( Palindromes) ಮೊದಲಾದ ಭಾಷಾ ಆಟಗಳನ್ನು ಅರ್ಥಮಾಡಿಕೊಳ್ಳುತ್ತಾರೆ. |
| | | 22. ಪದಬಂಧಗಳು ಮತ್ತು ಸವಾಲಿನ ಒಗಟುಗಳನ್ನು ಬಿಡಿಸುತ್ತಾರೆ. |

## ಪರಿವಿಡಿ


| | | ಪುಟಸಂಖ್ಯೆ | |
|---|---|---|---|
| ಕ್ರ.ಸಂ | ಪಾಠದ ಹೆಸರು | ಪ್ರಶ್ನೆಗಳು | ಉತ್ತರಗಳು |
| | **ಪಠ್ಯ ಭಾಗ** | | |
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | 1-5 | 79 - 81 |
| 2 | ಸೀನಶೆಟ್ಟರು ನಮ್ಮ ಟೀಚರು | 6 - 11 | 82 - 85 |
| 3 | ಹಿಲ್ಯನ್ ಹೆಡ್ ಚಳವಳಿ | 11- 16 | 86 -89 |
| 4 | ಮೈಲಾರ ಮಹದೇವ | 16 -20 | 90 - 93 |
| 5 | ಪರಿಸರ ಸಮತೋಲನ | 21 -25 | 94 - 99 |
| 6 | ಚಗಳಿ ಇರುವೆ | 26 - 30 | 100 - 104 |
| 7 | ಬಿಲ್ಲ ಹಬ್ಬ | 31 -37 | 105 - 110 |
| 8 | ಸಂಕ್ರಾಂತಿಯಂದು ಸುಖ-ದುಃಖ | 38 - 41 | 111 - 113 |
| | **ಪದ್ಯಭಾಗ** | | |
| 1 | ಹುತ್ತರಿ ಹಾಡು | 42-46 | 114 - 117 |
| 2 | ಸ್ವಾತಂತ್ರ್ಯ ಸ್ವರ್ಗ | 47 -51 | 118 - 120 |
| 3 | ಭಾಗ್ಯದ ಬಳೆಗಾರ | 52 - 55 | 121 -123 |
| 4 | ವಚನಗಳ ಭಾವ ಸಂಗಮ | 56 - 60 | 124 - 130 |
| 5 | ಹಚ್ಚೇವು ಕನ್ನಡದ ದೀಪ | 61 -63 | 131- 132 |
| 6 | ಬಿಡುಗಡೆಯ ಹಾಡು | 64 - 66 | 133 - 136 |
| 7 | ತಿರುಕನ ಕನಸು | 697 -72 | 137 - 140 |
| 8 | ಅಭಿಮನ್ಯು ಪರಾಕ್ರಮ | 73 -88 | 141 - 144 |

# ಗದ್ಯಭಾಗ (ಪ್ರಶ್ನೆಗಳು)

## ಗದ್ಯಪಾಠ – 1

## ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

| | ಕ್ಲಿಷ್ಟತೆಯ ಮಟ್ಟ | ಪ್ರಶ್ನೆ ಸಂಖ್ಯೆ |
|---|---|---|
| 1 | ಸುಲಭ | 27 |
| 2 | ಸಾಧಾರಣ | 21 |
| 3 | ಕಠಿಣ | 08 |
| | **ಒಟ್ಟು** | **56** |

| | ಉದ್ದಿಷ್ಟಗಳು | ಶೇಕಡ |
|---|---|---|
| 1. | ಜ್ಞಾನ | 15% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 15% |
| | **ಒಟ್ಟು** | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 60% |
| ಭಾಷಾ ಚಟುವಟಿಕೆಗಳು | 40% |
| **ಒಟ್ಟು** | **100 %** |

**I. ಹೊಂದಿಸಿ ಬರೆಯಿರಿ.** **[ 1-ಅಂಕ ]**

| **1.** ಅ | ಆ | |
|---|---|---|
| ೧. ರವಿ | ಅನ್ವರ್ಥನಾಮ | (ಸುಲಭ) [ LO 13 ] |
| ೨. ನದಿ | ವಿಶೇಷಣ | (ಸುಲಭ) [ LO 13 ] |
| ೩ .ಜಾಣ | ಅಂಕಿತನಾಮ | (ಸುಲಭ) [ LO 13 ] |
| ೪. ದೊಡ್ಡ | ರೂಢನಾಮ | (ಸುಲಭ) [LO 13 ] |
| ೫. ಪುಟ್ಟಜ್ಜಿ | ಹುಲಿಗೂ ಯುವಕನಿಗೂ | (ಸುಲಭ) [ LO-2 ] |
| ೬. ಕಾಡು | ಜಿಂಕೆ | (ಸುಲಭ) [ LO-2 ] |
| ೭. ಚುಕ್ಕಿ | ಸೊಪ್ಪುಸೆದೆ, ಬೇರು, ತೊಗಟೆ | (ಸುಲಭ) [ LO-2 ] |
| ೮. ಮದ್ದು | ಕಥೆ | (ಸುಲಭ) [ LO-2 ] |
| ೯. ಹಳ್ಳದ ದಂಡೆ | ಹುಲಿ, ಚಿರತೆ, ಕಾಡುಕೋಣ. | (ಸುಲಭ) [ LO-2 ] |
| ೧೦. ಜಗಳ | ಊರು ಬೆಳೆಯಿತು | (ಸುಲಭ) [ LO-2 ] |

**II. ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ** **[ 1 ಅಂಕ]**

**2.** ಹಾಡ್ನತೆ - (ಸುಲಭ) [ LO-14 ]
**3.** ಭೀತಿ - (ಸುಲಭ) [ LO-14 ]
**4.** ಪ್ರಾಣಿಗಿಂಡಿ - (ಸುಲಭ) [ LO-14 ]
**5.** ಸಾಂತ್ವನ - (ಸುಲಭ) [ LO-14 ]
**6.** ಪೊರೆ - (ಸುಲಭ) [ LO-14 ]
**7.** ತೊಗಟೆ - (ಸುಲಭ) [ LO-14 ]
**8.** ಮದ್ದು - (ಸುಲಭ) [ LO-14 ]
**9.** ಯಾವತ್ತಾರ - (ಸುಲಭ) [ LO-14 ]
**10.** ಪಲಾಯನ - (ಸುಲಭ) [ LO-14 ]

**III. ಆವರಣದಲ್ಲಿ ಸೂಚಿಸಿದಂತೆ ಉತ್ತರಿಸಿ.** **[ 1- ಅಂಕ]**

**11.** ಹುಡುಗಿಯು ಪೂಜೆಗೆ ಐದು ಹೂಗಳನ್ನು ತಂದಳು.

(ಈ ವಾಕ್ಯದಲ್ಲಿರುವ ಸಂಖ್ಯಾ ವಾಚಕ ಪದ ಗುರುತಿಸಿ ) ಬರೆಯಿರಿ. (ಸುಲಭ) [ LO-14 ]

**12.** ಅವರು ಮನೆಯಿಂದ ಶಾಲೆಗೆ ಬಂದರು.(ಈ ವಾಕ್ಯದಲ್ಲಿರುವ ಸರ್ವನಾಮ ಪದ ಗುರುತಿಸಿ ಬರೆಯಿರಿ. (ಸುಲಭ) [ LO-14 ]

**13.** ಅಮ್ಮ ನೀಡಿದ ಹಣ್ಣು ತುಂಬಾ ಸಿಹಿಯಾಗಿತ್ತು.(ಈ ವಾಕ್ಯದಲ್ಲಿರುವ ವಿಶೇಷಣವನ್ನು ಗುರುತಿಸಿ ಬರೆಯಿರಿ. (ಸುಲಭ) [ LO-14 ]

**14.** ವೈದ್ಯರು ರೋಗಿಗೆ ಮದ್ದು ನೀಡಿದರು.(ಈ ವಾಕ್ಯದಲ್ಲಿರುವ ಕ್ರಿಯಾಪದ ಗುರುತಿಸಿ ಬರೆಯಿರಿ. (ಸುಲಭ) [ LO-14 ]

**IV. ಒಂದು ವಾಕ್ಯದಲ್ಲಿ ಉತ್ತರಿಸಿ.** **[ 1– ಅಂಕ]**

**15.** ಪುಟ್ಟಜ್ಜಿ ಹೇಳಿದ ತರಾವರಿ ಕಥೆಗಳನ್ನು ಹೆಸರಿಸಿ. (ಸುಲಭ) [ LO-1]

**16.** ಯುವಕ ಯಾರನ್ನು ಬಿಟ್ಟುಕೊಡಲಾರೆ ಎಂದು ಹೇಳಿದ. ? (ಸುಲಭ) [ LO- 2]

**17.** ಜಿಂಕೆ ಯುವಕನನ್ನು ಹೇಗೆ ಉಪಚರಿಸಿತು. ? (ಸುಲಭ) [ LO- 3]

**18.** ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು? (ಸುಲಭ ) [ LO-1]

**19.** ಪುಟ್ಟಜ್ಜಿಯ ಬಳಿ ಹುಡುಗ ಯಾವ ಕಥೆ ಹೇಳಬೇಕೆಂದು ಕೇಳಿದನು? (ಸುಲಭ). [ LO- 2]

**20.** ಯುವಕ ಮನೆಯ ಮುಂದೆ ಏನು ಮಾಡಿದನು? (ಸಾಧಾರಣ) [ LO-4]

**21.** ಹುಲಿ ಸೋತು ಏನು ಮಾಡಿತು? (ಸುಲಭ)[ LO-4]

**22.** ಯುವತಿ ಕರೆದುಕೊಂಡು ಹೋಗುತ್ತೇನೆ ಎಂದಾಗ ಚುಕ್ಕಿ ಏನು ಮಾಡಿತು? (ಸಾಧಾರಣ) [ LO-1]

**23.** ಹಳ್ಳದ ದಂಡೆಯ ಮೇಲಿನ ಊರು ಏನಾಯಿತು? (ಸುಲಭ) .[ LO-13]

**V. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ** **[2 – ಅಂಕ]**

**24.** ಯುವಕ ಕಾಡಿನಲ್ಲಿ ಹೇಗೆ ಮನೆ ನಿರ್ಮಿಸಿದನು? (ಸಾಧಾರಣ) [ LO- 2]

**25.** ಹುಲಿಗೂ ಮತ್ತು ಯುವಕನಿಗೂ ನಡೆದ ಕಾಳಗದ ಬಗೆಗೆ ಬರೆಯಿರಿ. (ಸಾಧಾರಣ) [ LO- 3]

**26.** ಯುವಕ ಯುವತಿಯ ನಡುವೆ ಜಿಂಕೆಯ ಬಗೆಗೆ ನಡೆದ ಸಂಭಾಷಣೆ ವಿವರಿಸಿ. (ಸಾಧಾರಣ) [ LO-4]

**27.** ಡಿಸೋಜರವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ. (ಸಾಧಾರಣ) [ LO-4]

**28.** ಹಳ್ಳ ಹರಿದು ಊರ ಜನರಿಗೆ ಏನು ಮಾಡಿದೆ? (ಸಾಧಾರಣ) [ LO- 2]

**29.** ಜಿಂಕೆಯನ್ನು ನೋಡಿದ ಯುವತಿ ಏನು ಮಾಡಿದಳು? (ಸಾಧಾರಣ) [ LO-13]

**VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **[ 3 – ಅಂಕ ]**

**30.** ನಿಮಗೆ ತಿಳಿದಿರುವ ಯಾವುದಾದರೂ ಒಂದು ಹಾಡ್ಗತೆಯನ್ನು ಬರೆಯಿರಿ. (ಕಠಿಣ) [ LO-5]

**31.** ಸಣ್ಣ ಕಥೆ ಹಾಗೂ ಹಾಡ್ಗಗೆ ಇರುವ ವ್ಯತ್ಯಾಸ ತಿಳಿಸಿ. (ಕಠಿಣ) [ LO-4]

**32.** ಈ ಪಾಠದಲ್ಲಿ ಬಂದಿರುವ ವ್ಯಕ್ತಿಗಳು ಹಾಗೂ ಪ್ರಾಣಿಗಳ ಹೆಸರನ್ನು ಬರೆಯಿರಿ. (ಸುಲಭ) [ LO-1]

**33.** ಸಾಕುಪ್ರಾಣಿ ಕಾಡು ಪ್ರಾಣಿಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ. (ಕಠಿಣ) [ LO-1]

**34.** ಯುವಕ ಮತ್ತು ಕಾಡು ಪ್ರಾಣಿಗಳ ಒಡನಾಟ ಹೇಗಿತ್ತು? (ಕಠಿಣ) [ LO-1]

**35.** 'ಮನಸ್ಸಿದ್ದರೆ ಮಾರ್ಗ' ಈ ನೀತಿ ವಾಕ್ಯದ ಬಗ್ಗೆ ನಿಮ್ಮದೇ ಮಾತುಗಳಲ್ಲಿ ವಿವರಿಸಿ. (ಕಠಿಣ) [ LO-13]

**36.** ನಿನಗೆ ತಿಳಿದಿರುವ ಯಾವುದಾದರೂ ಒಂದು ಕಥೆ ಹೇಳಿರಿ. (ಕಠಿಣ) [ LO-5]

**37.** ನೀವು ಈ ಪಾಠದಲ್ಲಿ ಕಲಿತ ಎರಡು ನೀತಿಯನ್ನು ಹೇಳಿರಿ. (ಸಾಧಾರಣ) [ LO-5]

**VII. ಈ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಬರೆಯಿರಿ. [2- ಅಂಕ]**

**38.** "ಯಾವುದಾದರೊಂದು ಹಾಡನ್ನತೆ ಹೇಳು". (ಸಾಧಾರಣ) [ LO- 3]

**39.** "ಏಯ್! ಯುವಕ, ಈ ಜಿಂಕೆ ನನ್ನ ಆಹಾರ." (ಸಾಧಾರಣ) [ LO- 3]

**40.** "ಇದು ನಾವು ಸಾಕಿಕೊಂಡ ಜಿಂಕೆ". (ಸಾಧಾರಣ) [ LO- 3]

**41.** "ನಾನು ಚುಕ್ಕಿಯನ್ನು ಬಿಟ್ಟು ಇರಲಾರೆ". (ಸಾಧಾರಣ) [ LO- 3]

**VIII. 42. ಕೆಳಗೆ ನೀಡಿರುವ ಕತೆಯಲ್ಲಿ ಕೆಲವು ಪದಗಳನ್ನು ಬಿಟ್ಟು ಆ ಜಾಗದಲ್ಲಿ ಖಾಲಿ ಬಿಡಲಾಗಿದೆ. ಬಿಟ್ಟ ಸ್ಥಳದಲ್ಲಿ ಇರಬೇಕಾದ ಪದಗಳನ್ನು ಕಥೆಯ ಕೆಳಗೆ ಆವರಣದಲ್ಲಿ ನೀಡಲಾಗಿದೆ. ಸೂಕ್ತ ಪದ ಆರಿಸಿ ಬರೆಯಿರಿ [ 1- ಅಂಕ] (ಕಠಿಣ) [ LO- 2]**



ಒಂದು ಕಾಡಿನಲ್ಲಿ ಒಂದು ________ಪಾರಿವಾಳ ವಾಸವಾಗಿತ್ತು. ಒಮ್ಮೆ ಪಾರಿವಾಳ ಮರದ ಮೇಲೆ ಕುಳಿತಿರುವಾಗ ಮರದ ಕೆಳಗಿದ್ದ ಕೊಳದ ______ ಇರುವೆಯೊಂದು ಬಿದ್ದು _______ಉಳಿಸಿಕೊಳ್ಳಲು ಒದ್ದಾಡುತ್ತಿತ್ತು. ಇದ ಕಂಡ______ವು ಮರದ _______ಕೀಳುತ್ತಾ ಕೊಳದಲ್ಲಿ ಹಾಕಿತು. _________ಯು, ಆ ಕಡ್ಡಿಯನ್ನು ಏರಿ ನಿಧಾನವಾಗಿ _____ಸೇರಿತು. ಇದಕ್ಕಾಗಿ______ಯು ___________ಕ್ಕೆ ಧನ್ಯವಾದ ಹೇಳಿತು.

| |
|---|
| ಪುಟ್ಟ, ನೀರಿನಲ್ಲಿ,ಪ್ರಾಣ, ಪಾರಿವಾಳ, ಕಡ್ಡಿಗಳನ್ನು, ಇರುವೆ, ದಡ, ಇರುವೆ, ಪಾರಿವಾಳ |

**IX. ಗೆರೆ ಎಳೆದ ಪದಗಳನ್ನು ವಿವೇಚಿಸಿ ವೃತ್ತದ ಒಳಗೆ ಬರೆಯಿರಿ. [ 1 – ಅಂಕ ]**

**ಅ**.)

**43.** ಒಂದು <u>ದೊಡ್ಡ</u> ಆನೆ ನಮ್ಮ ಊರಿಗೆ ಬಂದಿತ್ತು. (ಸುಲಭ) [ LO - 14 ]

**44.** ವಿಜಯಳು ತುಂಬಾ ಜಾಣೆ. (ಸುಲಭ) [ LO - 14 ]

**45.** ಮೂರ್ತಿಯು ಕೆಂಪು ಅಂಗಿಯನ್ನು ಧರಿಸಿದ್ದನು. (ಸುಲಭ) [ LO - 14 ]

**ಆ)**

**46.** ವೇಣು ಮನೆಯ ಹಿರಿಯ ಮಗ. (ಸುಲಭ) [ LO - 14 ]

**47.** ಒಂದು ವಾರಕ್ಕೆ ಏಳು ದಿನಗಳು. (ಸುಲಭ) [LO-14]

**48.** ರವಿಯು ಹತ್ತು ರೂಪಾಯಿ ಕೊಟ್ಟು ಹಣ್ಣನ್ನು ಕೊಂಡನು.
(ಸುಲಭ) [ LO - 14 ]

**49.** ದಿಕ್ಕುಗಳು ಒಟ್ಟು ಎಂಟು. (ಸಾಧಾರಣ) [ LO - 14 ]

**50.** ಈ ಸೀರೆಯ ಬೆಲೆ ನಾಲ್ಕು ಸಾವಿರ ರೂಪಾಯಿಗಳು. (ಸಾಧಾರಣ) [LO-14]

**X. .ಅ) ಈ ಕೆಳಗಿನ ದಿಕ್ಕುಗಳ ಹೆಸರನ್ನು ಬರೆಯಿರಿ. [ 1 – ಅಂಕ ]**

**51.** ಮೂಡಣ (ಸಾಧಾರಣ) [ LO - 14 ]

**52.** ಪಡುವಣ (ಸಾಧಾರಣ) [ LO - 14 ]

**53.** ತೆಂಗಣ (ಸಾಧಾರಣ) [ LO - 14 ]

**54.** ಬಡಗಣ (ಸಾಧಾರಣ) [ LO - 14 ]

**55.** **ಆ.**ನಿಮ್ಮ ಮನೆಯ ಸುತ್ತಲಿನಲ್ಲಿ ಕಥೆ ಹೇಳುವ ಅಜ್ಜಿಯರ ಹೆಸರುಗಳನ್ನು ಪಟ್ಟಿ ಮಾಡಿ, ಅವರು ಹೇಳಿರುವ ಕಥೆಯನ್ನು ತರಗತಿಯಲ್ಲಿ ಚರ್ಚಿಸಿರಿ **[ 4 – ಅಂಕ]** (ಸಾಧಾರಣ) [ LO-9]



**56.** ನೀನು ಕೇಳಿರುವ ಕಥೆಯ ವಿಧಗಳನ್ನು ಬರೆಯಿರಿ.ಪ್ರತಿಯೊಂದಕ್ಕೂ ಉದಾಹರಣೆಯೊಂದಿಗೆ ವಿಷದೀಕರಿಸಿ [ 5 -ಅಂಕ] (ಕಠಿಣ) [ LO-9]

*** *** **

## ಗದ್ಯಪಾಠ - 2

# ಸೀನ ಸೆಟ್ಟರು ನಮ್ಮ ಟೀಚರು

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 26 |
| 2 | ಸಾಧಾರಣ | 23 |
| 3 | ಕಠಿಣ | 8 |
| **ಒಟ್ಟು** | | **57** |

| | ಉದ್ದಿಷ್ಟಗಳು | ಶೇಕಡ |
|---|---|---|
| 1. | ಜ್ಞಾನ | 40% |
| 2. | ತಿಳುವಳಿಕೆ | 20% |
| 3. | ಅಭಿವ್ಯಕ್ತಿ | 20% |
| 4. | ಪ್ರಶಂಸೆ | 20% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 60 % |
| ಭಾಷಾ ಚಟುವಟಿಕೆಗಳು | 40% |
| **ಒಟ್ಟು** | **100 %** |

**I. ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸೂಕ್ತ ಆಯ್ಕೆಗಳನ್ನು ಆರಿಸಿ ಬರೆಯಿರಿ. [1- ಅಂಕ]**

**1.** "ಇವರು ಇವತ್ತಿನಿಂದ ನಿಮ್ಮ ಟೀಚರು, ಇವರು ನಿಮಗೆಲ್ಲ ಏನೆಲ್ಲ ಕಲಿಸಿ ಕೊಡುತ್ತಾರೆ ನೋಡ್ತಾ ಇರಿ" ಈ ಮಾತನ್ನು ಹೇಳಿದವರು. (ಸುಲಭ) [ LO-1 ]

ಅ) ಮಾಂಡವಿ ಟೀಚರ್ ಆ) ತುಂಗಾ

ಇ) ಸೀನ ಸೆಟ್ಟರು. ಈ) ಯಶೋಧ

**2.** "ಹಂಗಾರೆ ಸೀನಸಿಟ್ಟರು ಇನ್ನು ನಮ್ಮ ಟೀಚರು" ಎಂಬಲ್ಲಿ ಬಂದಿರುವ ಸರ್ವನಾಮ ಪದ. (ಸುಲಭ) [ LO-14 ]

ಅ) ಸೀನ ಸೆಟ್ಟರು ಆ) ಇನ್ನೂ

ಇ) ಟೀಚರು. ಈ) ನಮ್ಮ

**3.** "ಎಂಥ ಮಗ ಆರಾಮ? ಅವ್ವ ಅಪ್ಪಯ್ಯ ಚಂದ ಅದಾರ? "ಎಂಬಲ್ಲಿ ಗೆರೆ ಎಳೆದ ಪದದ ನಾನಾರ್ಥಪದ. (ಸುಲಭ) [ CG-3,C-1.1, LO-1]

ಅ) ಚೆನ್ನಾಗಿ,ತೆರಿಗೆ. ಆ) ಚೆನ್ನಾಗಿ ಮರ.

ಇ) ಚೆನ್ನಾಗಿ ಚಂದ್ರ. ಈ) ಚೆನ್ನಾಗಿ ಶಶಿ

**4.** ಮೂರು ಎಕರೆ ಜಮೀನಿನಲ್ಲಿ ಸೀನಿನ ಸೆಟ್ಟರು ಬೆಳೆಯುತ್ತಿದ್ದ ಬೆಳೆ. (ಸುಲಭ) [ LO-2]

ಅ) ರಾಗಿ. ಆ) ಸಾಸಿವೆ.

ಇ) ಕಡಲೆ. ಈ) ಭತ್ತ

**5.** ನಾಟಿ ಮುಗಿದ ಮೇಲೆ ಇನ್ನು ಯಾವಾಗ ಹೊಡೆ ಹೊರಟಿತೋ? ಎಂಬಲ್ಲಿ ಹೊಡೆ ಪದದ ಅರ್ಥ. (ಸುಲಭ) [ LO-2]

ಅ) ಬೆತ್ತದ ಏಟು. ಆ) ಕಾಳು ತುಂಬುವ ಮೊದಲು ಕಾಣುವ ಪೈರಿನ ತುದಿ.

ಇ) ಪೈರಿನ ಸಸಿ ನೆಡುವುದು ಈ) ಒಣಗಿದ ಸಸಿಯ ತುದಿ

**6.** ಶ್ರೀಮತಿ ಗಾಯತ್ರಿ ಯವರು ಬರೆದ ಮಕ್ಕಳ ಸೃಜನಶೀಲ ಕಲಿಕೆ ಸುತ್ತ ಹೆಣೆದ  ಕಾದಂಬರಿ.

(ಸುಲಭ) [ LO-2]

ಅ) ತೊತ್ತೋಚಾನ್.    ಆ) ಗೆಳೆಯರಿಗಾಗಿ ಪರಿಸರ.

ಇ) ತುಂಗಾ.    ಈ) ಗಂಗ

**7.** ಕೆಳಗಿನವುಗಳಲ್ಲಿ ಒಬ್ಬ ಒಳ್ಳೆಯ ಶಿಕ್ಷಕನ ಗುಣ ಯಾವುದು? (ಸುಲಭ) [ LO-1 ]

ಅ} ಸ್ವತಃ ಕಲಿಯುವುದು

ಆ} ಕಲಿಯುತ್ತಾ ಕಲಿಸುವುದು

ಇ} ಸೃಜನಾತ್ಮಕವಾಗಿ ಕಲಿಯುವುದು.

ಈ} ಮೇಲಿನ ಎಲ್ಲವೂ

**II. ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.** **[ 1- ಅಂಕ]**

**8.** ಲಪ್ಪಟೆ ಪದದ ಅರ್ಥ ಬರೆಯಿರಿ. (ಸುಲಭ) [ LO-1 ]

**9.** ಅಮ್ಮ ಅಂಗಡಿಗೆ ಹೊರಟರು,ಅವರು ಒಂದು ಚೀಲವನ್ನು ಹಿಡಿದಿದ್ದರು.

( ಇದರಲ್ಲಿ ಸರ್ವನಾಮ ಪದಕ್ಕೆ ಗೆರೆ ಎಳೆಯಿರಿ) (ಸುಲಭ) [ LO-14 ]

**10.** ಕೆಳಗಿನ ಶಿಶುಪ್ರಾಸವನ್ನು,ಸೂಕ್ತ ಪ್ರಾಸ ಪದದೊಂದಿಗೆ ಪೂರ್ಣಗೊಳಿಸಿ. (ಸಾಧಾರಣ) [ LO-20]

ಸೂರ್ಯನು ಮೇಲೆ _______

ಬೆಳಕನು ನಮಗೆ ________

ಬೆಳಿಗ್ಗೆ ಬೇಗ ________

ಖುಷಿಯಿಂದ ನಾವು __________

**11.** ವಾಸ್ತವ ಪದದ ವಿರುದ್ಧಾರ್ಥಕ ಪದ ಬರೆಯಿರಿ. (ಸುಲಭ) [ LO-14 ]

**12.** ಸೀನಸೆಟ್ಟರು ತುಂಬಾ ಕೋಪಿಷ್ಠರಾಗಿದ್ದರು. ಈ ಹೇಳಿಕೆ ಸರಿ / ತಪ್ಪು ತಿಳಿಸಿ. (ಸುಲಭ) [ LO-2 ]

**13.** ಕೃಷಿ ಈ ಪದಕ್ಕೆ ಸರಳ ವಾಕ್ಯ ರಚಿಸಿರಿ. **[ 4- ಅಂಕ ]**

**14.** ಅನ್ನ ಉದಕ ಊಟವೀಯುವುದೇ ಮಣ್ಣು (ಕಠಿಣ) [ LO-16 ]

ಬಣ್ಣ ಬಂಗಾರ,ಬೊಕ್ಕಸವೆಲ್ಲ ಮಣ್ಣು

ಉನ್ನತವಾದ ಪರ್ವತವೆಲ್ಲ ಮಣ್ಣು

ಕಣ್ಣು ಮೂರುಳ್ಳವನ ಕೈಲಾಸ ಮಣ್ಣು ( ರಚನೆ; ಪುರಂದರದಾಸರು)

ಈ ಕೀರ್ತನೆಯನ್ನು  ಸಾರಾಂಶೀಕರಿಸಿ

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ: [ 1- ಅಂಕ]**

**15.** ಟೀಚರ್ ಯಾರನ್ನು ಪರಿಚಯಿಸಿದರು? (ಸುಲಭ) [ LO-2 ]

**16.** ಸೀನಸೆಟ್ಟರು ಜಮೀನಿನಲ್ಲಿ ಏನನ್ನು ಪರಿಚಯಿಸಿದರು? (ಸುಲಭ) [ LO-2 ]

**17.** ಮಕ್ಕಳು ಏನು ಹಾಕಿಕೊಂಡು ಗದ್ದೆಗೆ ಇಳಿದರು? (ಸುಲಭ) [ LO-2 ]

**18.** ಹಾಲಪ್ಪನ ಕಾಲನ್ನು ಏನು ಕಚ್ಚಿತು? (ಸುಲಭ) [ LO-2 ]

**19.** ಮನೆಯ ಅಟ್ಟ ಮಕ್ಕಳಿಗೆ ಯಾವ ಟವರ್ ಅಗಿ ಪರಿವರ್ತಿತಗೊಂಡಿತು? (ಸುಲಭ) [ LO-2 ]

**20.** ಸೀನಸೆಟ್ಟರನ್ನು ನೋಡಿದಾಗ ಮಕ್ಕಳಲ್ಲಿ ಮೂಡಿದ ಅಭಿಪ್ರಾಯವೇನು? (ಸುಲಭ) [ LO-2 ]

**21.** ತುಂಗಾಳನ್ನು ಸೀನಸೆಟ್ಟರು ಮಾತಾಡಿಸಿದ ರೀತಿ ಹೇಗಿತ್ತು? (ಸುಲಭ) [ LO-2 ]

**22.** ಮಾಂಡವಿ ಟೀಚರ್ ಮಕ್ಕಳಿಗೆ ಕೃಷಿ ಪರಿಚಯಿಸುವುದರ ಹಿಂದಿನ ಉದ್ದೇಶವೇನಾಗಿತ್ತು?

(ಸಾಧಾರಣ) [ LO-2 ]

**23.** ಕೃಷಿಯಲ್ಲಿ "ನಾಟಿ" ಎಂದರೇನು ವಿವರಿಸಿ. .(ಸಾಧಾರಣ) [LO-4 ]

**24.** " ಸೀನಸೆಟ್ಟರು ನಮ್ಮ ಟೀಚರು " ಪಾಠವನ್ನು ಯಾವ ಕೃತಿಯಿಂದ ಆರಿಸಲಾಗಿದೆ?

(ಸಾಧಾರಣ) [ LO-2 ]

**IV.**

**25. ನೀಡಿರುವ ಚಿತ್ರಕ್ಕೆ ಸೂಕ್ತ ಶೀರ್ಷಿಕೆಯನ್ನು ಹಾಗೂ ಅದನ್ನು ಕುರಿತ ವರದಿ ತಯಾರಿಸಿ ಮತ್ತು ನಿಮ್ಮ ಗ್ರಂಥಾಲಯದಲ್ಲಿ ಕೃಷಿ ಸಂಬಂಧಿತ ಪುಸ್ತಕಗಳನ್ನು ಹುಡುಕಿ "ರೈತರ ಬದುಕು " ಎಂಬುದರ ಬಗ್ಗೆ ಸಣ್ಣ ಲೇಖನ ಬರೆಯಿರಿ . ಶಿಕ್ಷಕರು ನೀಡಿರುವ SCAN CODE ಬಳಸಿ ದೃಶ್ಯಾವಳಿಯನ್ನು ವೀಕ್ಷಿಸಲು ಅನುವು ಮಾಡುವುದು. (ಸಾಧಾರಣ) [LO- 17 ]**

**[ 4 – ಅಂಕ]**



[ಸೂಚನೆ : ಶಿಕ್ಷಕರು ಈ **SCAN CODE** ನ್ನು ಬಳಸಿ ಮಕ್ಕಳಿಗೆ ಲಭ್ಯವಿರುವ ಸಾಧನಗಳ ಮೂಲಕ ವೀಡಿಯೋ ವೀಕ್ಷಿಸಲು ಸಹಕರಿಸುವುದು ]

**[ 2 – ಅಂಕ]**

**26.** ಬೆಳೆ,ಮಳೆ,ಕಳೆ,ಕೊಳೆ ಪದಗಳನ್ನು ಬಳಸಿಕೊಂಡು ಕಿರುಕವನ ರಚಿಸಿರಿ. (ಸಾಧಾರಣ) [LO 15]

**27.** ಸೀನ ಸೆಟ್ಟರು ನಮ್ಮ ಟೀಚರು ಪಾಠದಲ್ಲಿ ನಿನಗೆ ಯಾವ ಪಾತ್ರ ಮೆಚ್ಚುಗೆಯಾಗುತ್ತದೆ ಏಕೆ?

(ಸಾಧಾರಣ)[ LO-1 ]

**28.**

| |
|---|
| ಅವರು,ಇವರು,ಅವನು,ನೀನು,ಅದು,ನಾವು,ನೀನು,ಇವಳು,ಇವರು |

ಈ ಪದಗಳನ್ನು ಉತ್ತಮ ಮಧ್ಯಮ ಪ್ರಥಮ ಪುರುಷ ಸರ್ವನಾಮಗಳಾಗಿ ವಿಂಗಡಿಸಿ ಬರೆಯಿರಿ.

(ಸಾಧಾರಣ) [ LO - 14 ]

**V. ಕೆಳಗಿನ ಪ್ರಶ್ನೆ ಗಳಿಗೆ ಉತ್ತರಿಸಿ.** **[ 4- ಅಂಕ ]**

**ಅ )**



**29.** ನೀಡಿರುವ ಚಿತ್ರದ ಬಗ್ಗೆ ಗಮನಿಸಿದ್ದೀರಾ? ಈ ಸನ್ನೀವೇಶವನ್ನು ಕುರಿತು ನಿನ್ನ ಅಭಿಪ್ರಾಯವನ್ನು ಐದು ವಾಕ್ಯಗಳಲ್ಲಿ ಬರೆಯಿರಿ. (ಕಠಿಣ) [ LO=1]

**30.** "ಹಳ್ಳಿ ಜೀವನವು ನಗರ ಜೀವನಕ್ಕಿಂತ ಉತ್ತಮವಾದದ್ದು" ಹೇಗೆಂದು ಸಮರ್ಥಿಸಿರಿ. (ಕಠಿಣ) [ LO=1]

**31.** ಈ ಕೆಳಗಿನ ಚಿತ್ರದಲ್ಲಿರುವ ರೈತರಿಗೆ ಹೆಸರು ನೀಡಿ ಅವರು ಏನು ಮಾತನಾಡುತ್ತಿರಬಹುದು ಎಂಬುದನ್ನು ಸಂಭಾಷಣೆಯ ರೂಪದಲ್ಲಿ ಮುಂದುವರೆಸಿ. (ಕಠಿಣ) [ LO=1]




**ಆ)** **[ 2 – ಅಂಕ ]**

**32.** "ರೈತ ಅನ್ನದಾತ ನಮಗೆಲ್ಲಾ ಉಪಕಾರಿ" ಎಂಬ ಮಾತನ್ನು ಸಮರ್ಥಿಸಿ. (ಕಠಿಣ) [ LO-5]

**33.** .ಸೀನ ಸೆಟ್ಟರ ವೇಷ ಹೇಗಿತ್ತು? (ಸಾಧಾರಣ) [LO-2]

**34.** ಹಾಲಪ್ಪನಿಗೆ ಹಾವು ಕಚ್ಚಿದಾಗ ಸೀನಸೆಟ್ಟರು ಏನು ಹೇಳಿದರು ? (ಸಾಧಾರಣ) [LO-2]

**35.** ಮಕ್ಕಳು ಸಸಿ ಕಿತ್ತ ಬಗೆ ಹೇಗಿತ್ತು? (ಸಾಧಾರಣ) [,LO-2]

**36.** ಮನೆಯಲ್ಲಿ ಕೃಷಿ ಅನುಭವವಿದ್ದರೂ ಸಹ ಸೀನಸೆಟ್ಟರ ಕೃಷಿ ಪಾಠಕ್ಕೆ ಮಕ್ಕಳೇಕೆ ಸಂಭ್ರಮಿಸಿದರು? (ಸಾಧಾರಣ) [ LO-4]

**37.** ಮಕ್ಕಳ ಬೇಸಾಯಕ್ಕಾಗಿ ಮಾಂಡವಿ ಟೀಚರ್ ಯಾವ ತಯಾರಿಯನ್ನು ಮಾಡಿದ್ದರು?

(ಸಾಧಾರಣ) [ LO-2]

**38.** ಯಶೋಧ ಕಂಡು ಹಿಡಿದ ಹಾಡಿನಂತೆಯೇ, ನೀನೂ ಸಹ ಒಂದು ಹಾಡನ್ನು ಸೃಜಿಸು:

(ಕಠಿಣ) [ LO-15]

**VI. ನೀಡಿರುವ ನಾಟಕದ ಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.** [ LO-16]

**[ 38– 1 , 39-2, 40 – 4 ಅಂಕ ]**



**ರಾಮ :** ( ಆಲೋಚನೆಯಲ್ಲಿಂದ ಎದ್ದು ) "ಲಕ್ಷ್ಮಣ ಹನುಮಾನ್ ! ಇಂದು ನಾನು ನನ್ನ ಪತ್ನಿ ಸೀತೆಯನ್ನು ಮರಳಿ ಕರೆತರುವುದಾಗಿ ನಿರ್ಧರಿಸಿದ್ದೇನೆ.ರಾವಣನ ಅಹಂಕಾರ ಕೊನೆಗೊಳ್ಳಬೇಕು.".

**ಲಕ್ಷ್ಮಣ :** ಅಣ್ಣಾ, ನಾವೆಲ್ಲಾ ಸಿದ್ದರಾಗಿದ್ದೇವೆ.ನಿನ್ನ ಆಜ್ಞೆ ಯನ್ನು ಕಾಯುತ್ತಿದ್ದೇವೆ.

**ಹನುಮಾನ್:** ಪ್ರಭು,ನಾನಾಗಲೇ ಲಂಕೆಗೆ ಹಾರಿ ಹೋಗಿ ಸೀತಾಮಾತೆಯನ್ನು ಹುಡುಕಿಬಂದಿದ್ದೇನೆ.ಅವರು ಸುರಕ್ಷಿತವಾಗಿದ್ದಾರೆ ಆದರೆ ಕಷ್ಟದಲ್ಲಿದ್ದಾರೆ.

**ರಾಮ:** ಅಯ್ಯೋ ! ದುರ್ವಿಧಿಯೇ,ನನ್ನ ಸೀತೆಗೆ ಸಂದೇಶವನ್ನು ತಲುಪಿಸಬೇಕು.ಹಾಗೆ ರಾವಣನಿಗೆ ಹೇಳು. ನಾನು ಶಾಂತಿಯಿಂದ ಮಾತಾಡಲು ಸಿದ್ದನು.ಆದರೆ ಸೀತೆಯನ್ನು ಬಿಡದಿದ್ದರೆ ಯುದ್ದ ಮಾಡಲು ಸಿದ್ದ.

( ರಾಮನು ತನ್ನ ದೂತನಿಗೆ ಸಂದೇಶ ನೀಡುತ್ತಾನೆ)

**ರಾಮ:** ದೂತಾ ಈ ಸಂದೇಶವನ್ನು ರಾವಣನಿಗೆ ತಲುಪಿಸು ಅವನು ಈ ಸಮಯದಲ್ಲಿ ನಿರ್ಧಾರ ಮಾಡದಿದ್ದರೆ, ಅವನ ಧ್ವಂಸ ಖಚಿತ.

**ದೂತ** : ಜೈ ಶ್ರೀರಾಮ,ನಾನು ತಕ್ಷಣವೇ ಹೊರಡುತ್ತೇನೆ.

( ದೂತ ಹೊರಡುತ್ತಾನೆ,ರಾಮ ಲಕ್ಷಣ ಹನುಮಾನ್ ಗಂಭೀರವಾಗಿ ನಿಂತಿರುತ್ತಾರೆ)

**ಹನುಮಾನ್**: ಪ್ರಭು, ನೀವು ಧರ್ಮದ ಮಾರ್ಗದಲ್ಲಿದ್ದೀರಿ ,ಆದರೂ ಯುದ್ದ ಮಾಡುವ ಮಾತು ನಿಮ್ಮಿಂದ ಬರುತ್ತಿದೆ, ನನಗೆ ಆಶ್ಚರ್ಯವಾಗುತ್ತಿದೆ. ಆದರೂ ಸೀತೆಮಾತೆಯನ್ನು ಕರೆತರಲು ಯುದ್ದ ಮಾಡಲು ನಾವೂ ಸಿದ್ದರಿದ್ದೇವೆ.

**ರಾಮ:** ಧರ್ಮ ಮತ್ತು ನ್ಯಾಯಕ್ಕಾಗಿ ಕೂಡಾ ಶಕ್ತಿಯ ಬಳಕೆ ಎಚ್ಚರಿಕೆಯಿಂದ ಆಗಬೇಕು. ಹಾಗಾಗಿ ಯುದ್ದ ಅನಿವಾರ್ಯವಾಗಿದೆ ಹನುಮ ಎಂದನು.

**39.** ಸೀತೆಯನ್ನು ಅಪಹರಿಸಿದವರು ಯಾರು ? (ಸುಲಭ) [ LO-16]

**40.** ಯುದ್ಧವು ಯಾವಾಗ ಅನಿವಾರ್ಯವಾಗುತ್ತದೆ? (ಸಾಧಾರಣ) [ LO-16]

**41.** ಮೇಲಿನ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. (ಕಠಿಣ) [ LO-16]

**VII. ಈ ಮಾತನ್ನು ಯಾರು ಯಾರಿಗೆ ಹೇಳಿದರು? ಬರೆಯಿರಿ . [2- ಅಂಕ ]**

**42.** "ಹಂಗಾರೆ ಸೀನ ಸೆಟ್ರು ನಮ್ಮ ಟೀಚರು." (ಸಾಧಾರಣ) [ LO-2]

**43.** '"ಮುಂಚೆ ಸಸಿಗಳನ್ನು ಕೀಳಾಣ." (ಸಾಧಾರಣ) [LO-2]

**44.** " ಇವತ್ತು ಪೂರಾ ಕಿತ್ತೇ ಹೋಗಾಣ." (ಸಾಧಾರಣ) [ LO-2]

**45.** "ಕೈ ಎಲ್ಲಿಗ್ ಹೋತು." (ಸಾಧಾರಣ) [ LO-2]

**46.** "ಎಂತಾ,ಮಗಾ ಅರಾಮ"? (ಸಾಧಾರಣ) [ LO-2]

**VIII. ಖಾಲಿ ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ನೀಡಿದ ಸೂಕ್ತ ಪದಗಳಿಂದ ತುಂಬಿರಿ**

**(ಅವರು, ನಾನು , ಅವಳು, ತನ್ನ, ಅದು ನಮ್ಮ) [ 1- ಅಂಕ]**

**47.** _________ ಹಾಡುತ್ತಿದ್ದಳು. (ಸುಲಭ) [ LO-14 ]

**48.** . __________ ಏಕೆ ಇಲ್ಲಿಗೆ ಬಂದಿತ್ತು? (ಸುಲಭ) [ LO-14 ]

**49.** ಬೆಂಗಳೂರಿನಲ್ಲಿ ______ ಈಗಲೂ ವಾಸವಿದ್ದಾರೆಯೇ? (ಸುಲಭ) [ LO-14 ]

**50.** ________ ನೆನ್ನೆ ಇಲ್ಲಿಗೆ ಬಂದೆ.ಈಗ ಹೊರಡುತ್ತೇನೆ. (ಸುಲಭ) [ LO-14 ]

**51.** ನಾವು _____ ಪಾಡಿಗೆ ಇರುತ್ತೇವೆ. (ಸುಲಭ) [ LO-14 ]

**52.** _______ ಮನಸ್ಸಿನಲ್ಲಿದ್ದುದ್ದನ್ನು ಹೇಳಿ ಹೊರಟುಬಿಟ್ಟ. (ಸುಲಭ) [ LO-14 ]

**IX. ಕೆಳಗಿನ ಭಾಷಾ ರೂಪವನ್ನು ಕರ್ನಾಟಕದ ವಿವಿಧ ಪ್ರಾದೇಶಿಕ ರೂಪಗಳಾಗಿ ವಿಂಗಡಿಸಿ. [ 1 – ಅಂಕ]**

**53.** ನಮ್ ಊರಿಗ, ಸಾಹೇಬ್ರು ಬರಕ್ ಹತ್ತಾರ, ಗೊತ್ತೇನ್ ನಿನಗ.! (ಸಾಧಾರಣ) [ LO- 19]

**54.** ನಮ್ ಊರ್ಗೆ, ಸಾಹೇಬ್ರು ಬತ್ತಾವ್ರೇ, ಗೊತ್ತಾ ನಿನ್ಗೆ!. (ಸಾಧಾರಣ) [ LO- 19]

**55.** . ನಮ್ಮ ಊರಿಗೆ, ಸಾಹೇಬರು ಬರುತ್ತಿದ್ದಾರೆ.ಗೊತ್ತುಂಟ ನಿಮಗೆ! (ಸಾಧಾರಣ) [ LO- 19]

**X.**

**56. ಶಿಕ್ಷಕರ ಸಹಾಯದಿಂದ ನಿಮ್ಮ ಊರಿನಲ್ಲಿ ಸ್ಥಳೀಯವಾಗಿ ಲಭ್ಯವಿರುವ ಪ್ರಸಿದ್ಧ ಕಲಾವಿದರು / ಗಣ್ಯರು / ಸಾಧಕರು /ಪ್ರಶಸ್ತಿ ಪುರಸ್ಕೃತರನ್ನು ಶಾಲೆಗೆ ಆಹ್ವಾನಿಸಿ ಅವರೊಂದಿಗೆ ಪುಟ್ಟ ಸಂದರ್ಶನವೊಂದನ್ನು ಆಯೋಜಿಸಿ. [ 4- ಅಂಕ ] (ಕಠಿಣ) LO-1.3 ]**

**57. ಮೊಬೈಲ್ ಫೋನ್ ಮತ್ತು ಪುಸ್ತಕದ ನಡುವೆ ನಡೆಯುವ ಸಂಭಾಷಣೆಯನ್ನು ಕಲ್ಪಿಸಿಕೊಂಡು ರಚಿಸಿ,ಕೊನೆಯಲ್ಲಿ ಯಾರ ವಾದ ಹೆಚ್ಚು ಸಮರ್ಥನೀಯ ಎಂಬುದನ್ನು ವಿಶ್ಲೇಷಿಸಿ ಬರೆಯಿರಿ. [ 4- ಅಂಕ ] (ಕಠಿಣ) [LO-16 ]**

## ಗದ್ಯ ಪಾಠ-೩

## ಹಿಲ್ಟನ್ ಹೆಡ್ ಚಳುವಳಿ

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 33 |
| 3 | ಕಠಿಣ | 24 |
| ಒಟ್ಟು | | 67 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 20% |
| 2. | ತಿಳುವಳಿಕೆ | 55% |
| 3. | ಅಭಿವ್ಯಕ್ತಿ | 15% |
| 4. | ಪ್ರಶಂಸೆ | 10% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 65% |
| ಭಾಷಾ ಚಟುವಟಿಕೆಗಳು | 35% |
| ಒಟ್ಟು | 100 % |

### I. ಒಂದು ವಾಕ್ಯದಲ್ಲಿ ಉತ್ತರಿಸಿ. [ 1- ಅಂಕ ]

1. 'ಹಿಲ್ಟನ್ ಹೆಡ್ ಚಳುವಳಿ' - ಈ ಗದ್ಯಭಾಗವನ್ನು ಬರೆದವರು ಯಾರು ? ( ಸುಲಭ ) [LO-2]
2. ಲೇಖಕರು ಯಾವ ವರ್ಷ ಅಮೆರಿಕಾಗೆ ಹೋಗಿದ್ದರು ? (ಸುಲಭ) [,LO-2]
3. ಹಿಲ್ಟನ್ ಹೆಡ್ ದ್ವೀಪ ಯಾವ ಸಾಗರದಲ್ಲಿದೆ ? (ಸುಲಭ) [LO-2]
4. ಅಮೆರಿಕದಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳನ್ನು ಏನೆನ್ನುತ್ತಾರೆ ? (ಸುಲಭ) [LO-2]
5. ಶಶಿಧರ ವಿಶ್ವಾಮಿತ್ರರ ಮುಖ್ಯವಾದ ಕೃತಿಗಳಾವುವು ? (ಸಾಧಾರಣ)[LO-2]
6. ಯಾವ ದೇಶವನ್ನು ಸಾಹುಕಾರರ ನಾಡು ಎಂದು ಕರೆಯುತ್ತಿದ್ದರು ? (ಸಾಧಾರಣ) [LO-2]
7. ಹಿಲ್ಟನ್ ಹೆಡ್ ನಲ್ಲಿ ಬಂದಿಳಿಯುವ ಶ್ರೀಮಂತರ ಉಡುಗೆ ತೊಡುಗೆ ಹೇಗಿತ್ತು ? (ಸುಲಭ) [LO-2]
8. ಹಿಲ್ಟನ್ ಹೆಡ್ ದ್ವೀಪದಲ್ಲಿ ಏನೇನು ಕ್ರೀಡೆಗಳನ್ನು ಆಯೋಜಿಸಲಾಗುತ್ತಿತ್ತು ? (ಸಾಧಾರಣ) [LO-2]
9. ಶಶಿಧರ ವಿಶ್ವಾಮಿತ್ರರ ಆತ್ಮಕಥೆ ಯಾವುದು ? (ಸುಲಭ) [LO-2]
10. ಯಾವ ಆಟವನ್ನು ಶ್ರೀಮಂತರ ಆಟವೆಂದು ಕರೆಯಲಾಗುತ್ತದೆ ? (ಸುಲಭ) [LO-2]
11. ಕಡಲ ತಡಿಯ ಲೈಟ್ ಹೌಸನ್ನೇರಿದರೆ ಯಾವ ಚಿತ್ರಣವು ಕಾಣಸಿಗುತ್ತದೆ ? (ಸಾಧಾರಣ) [LO-2]
12. ಹಿಲ್ಟನ್ ಹೆಡ್ ನಲ್ಲಿರುವ ಸ್ಮಾರಕ ಯಾವುದು ? (ಸುಲಭ). [LO-2]
13. ಯಾವ ಮರದ ಬಳಿ ಜನರು ಪರಿಸರ ಸಂರಕ್ಷಣೆಗೆ ಒಗ್ಗೂಡಿದ್ದರು ? (ಸುಲಭ) [LO-2]
14. . ಹಿಲ್ಟನ್ ಹೆಡ್ ದ್ವೀಪದಲ್ಲಿ ಏನೇನು ಕ್ರೀಡೆಗಳನ್ನು ಆಯೋಜಿಸಲಾಗುತ್ತಿತ್ತು? (ಸಾಧಾರಣ) [LO-2]

### II. ಈ ಆಂಗ್ಲ ಪದಗಳಿಗೆ ಕನ್ನಡ ಪದ ಬರೆಯಿರಿ. [ 1- ಅಂಕ ]

15. ಲಕ್ಸುರಿ - (ಕಠಿಣ) [ LO-18 ]
16. ಲಿಬರ್ಟಿ - (ಕಠಿಣ) [ LO-18 ]
17. ಐಡಿಯಾ - (ಕಠಿಣ) [ LO-18 ]
18. ಸೀಬೀಚ್ - (ಕಠಿಣ) [ LO-18 ]
19. ಇಂಜಿನಿಯರಿಂಗ್ - (ಕಠಿಣ) [ LO-18 ]

**20.** ಗಾಲ್ಫ್ ಕೋರ್ಸ್ (ಕಠಿಣ) [ LO-18 ]

**21.** ಸ್ಟೇ ಹೋಂ (ಕಠಿಣ) [ LO-18 ]

**22.** ಸ್ಕಲ್ ಕ್ಯಾಪ್ (ಕಠಿಣ) [ LO-18 ]

**23.** ಪ್ರೆಸಿಡೆಂಟ್ (ಕಠಿಣ) [ LO-18 ]

**III. ವಿರುದ್ಧ ಪದ ಬರೆಯಿರಿ. [ 1 – ಅಂಕ]**

**24.** ಆಗಮನ X (ಸಾಧಾರಣ ) [LO-14]

**25.** ಸುಂದರ X (ಸಾಧಾರಣ ) [ LO - 14 ]

**26.** ಲಾಭ X (ಸಾಧಾರಣ ) [ LO - 14 ]

**27.** ಚುರುಕು X (ಸಾಧಾರಣ )[LO-14]

**28.** ಪುರಾತನ X (ಸಾಧಾರಣ ) [ LO - 14 ]

**29.** ಸುಪ್ರಸಿದ್ಧ X (ಸಾಧಾರಣ ) [LO-14]

**30.** ಸಾಧಾರಣ X (ಸಾಧಾರಣ) [ LO - 14 ]

**31.** ಆಸಕ್ತಿ X (ಸಾಧಾರಣ) [LO-14]

**IV. ಈ ಕೆಳಗಿನ ಪದಗಳ ಅರ್ಥ ಬರೆಯಿರಿ. [ 1 – ಅಂಕ]**

**32.** ಪಚ್ಚೆ - (ಸಾಧಾರಣ ) [ LO-19 ]

**33.** ಬಡ್ಡೆ - (ಸಾಧಾರಣ ) [ LO-19 ]

**34.** ಪರ್ಯಾವರಣ - (ಸಾಧಾರಣ) [LO-19 ]

**35.** ಅಭಿಯಂತರ - (ಸಾಧಾರಣ) [LO-19 ]

**36.** ಧೂಳಿಪಟ - (ಸಾಧಾರಣ ) [LO-19 ]

**37.** ಪುರಾಭಿವೃದ್ಧಿ - (ಸಾಧಾರಣ ) [LO-19 ]

**38.** ಆಹುಟ - (ಸಾಧಾರಣ ) [LO-19 ]

**39.** ಅತಿಕ್ರಮಣ - ( ಸಾಧಾರಣ ) [LO-19 ]

**V. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ. [ 1– ಅಂಕ]**

**40.** ಒಬ್ಬ ____________ಗೆ ಪರ್ಯಾವರಣದ ಸುಖ ದುಃಖಗಳಿಗೆ ಮನಸ್ಸು ಕೊಡುವ ಇಂಬಾಯಿತು.

( ನೆಲದಲ್ಲಾಳಿಗೆ,ವಕೀಲನಿಗೆ, ವೈದ್ಯನಿಗೆ ) (ಸಾಧಾರಣ ) [ LO-8 ]

**41.** _________ ಮರಗಳನ್ನು ಕಡಿಯಲೇಕೂಡದು ಎನ್ನುವ ಚಳುವಳಿ ಆರಂಭವಾಯಿತು.

( ಆಲದ,ಮಾವಿನ, ಓಕ್ ) (ಸಾಧಾರಣ ) . [ LO-8 ]

**42.** ಓಕ್ ಮರದ ಸಾನ್ನಿಧ್ಯದಲ್ಲೇ ಎಷ್ಟೋ _____ಗಳಾಗಿವೆಯಂತೆ!

( ಕೊಲೆ, ವಿವಾಹ, ಜಗಳ ) (ಸುಲಭ) (ಸುಲಭ) [ LO-8 ]

43. _________ ದಶಕದಲ್ಲಿ ಪರಿಸರ ಸಂರಕ್ಷಣೆಗಾಗಿ ಜನ ಒಗ್ಗೂಡಿ ಪಣತೊಟ್ಟಿದ್ದು ಈ ಮರದಲ್ಲಿಯೇ.

(ಐವತ್ತರ, ಅರವತ್ತರ, ಎಪ್ಪತ್ತರ ) (ಸಾಧಾರಣ ) [ LO-8 ]

44. ಯುರೋಪಿಯನ್ನರ ಆಗಮನವಾದ ಮೇಲೆ ಅಮೇರಿಂಡಿಯನ್ನರ ಸಮುದಾಯವು _______ ಆಯಿತು.

( ಅಭಿವೃದ್ಧಿ, ಶಿಕ್ಷಿತ, ಧೂಳೀಪಟ ) (ಸಾಧಾರಣ ) [ LO-8 ]

45. ಅಟ್ಲಾಂಟಿಕ್ ಸಾಗರವು ಅಮೆರಿಕದ_________________ ಭಾಗದಲ್ಲಿದೆ.

( ಪೂರ್ವ, ಉತ್ತರ, ಪಶ್ಚಿಮ) (ಸಾಧಾರಣ ) [ LO-8 ]

46. ವಿಧಿ ಇಲ್ಲದೆ ಕೊನೆಗೆ _____________________ಮೊರೆ ಹೋಗಬೇಕಾಯಿತು.

( ಧನಿಕರ, ಅಮೆರಿಕ ಅಧ್ಯಕ್ಷರ, ನ್ಯಾಯಾಲಯದ) (ಸಾಧಾರಣ ) [ LO-8 ]

47. ಕಟ್ಟಡಗಳಿಗೆ ತೋರುತ್ತಿದ್ದ_________________ ಶ್ರದ್ಧೆಯನ್ನೇ ಜನ ಪರಿಸರಕ್ಕೂ ನೀಡತೊಡಗಿದರು.

( ಪಾರಂಪರಿಕ, ಅಭಿಯಂತರ, ರಾಜಕೀಯ) (ಸಾಧಾರಣ ) [ LO-8 ]

48. ದ್ವೀಪದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಮೊದಲು ಎಲ್ಲರೂ ಸೇರಿ____________ ನಡೆಸಿದರು.

(ಮಂತ್ರಾಲಯ, ಜಾಥ, ಪ್ರತಿಭಟನೆ) (ಸಾಧಾರಣ ) [ LO-8 ]

49. ಹೋರಾಟ ಮುಂದುವರಿದ ಬಳಿಕ ಹಿಲ್ಟನ್ ಹೆಡ್ _____________ ಕಂಗೊಳಿಸ ತೊಡಗಿತು.

(ನಂದನವರದಂತೆ, ಅಭಯಾರಣ್ಯದಂತೆ, ರಾಜಧಾನಿಯಂತೆ) (ಸಾಧಾರಣ ) [ LO-8 ]

VI. **ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **[ 2-- ಅಂಕ]**

50. ಯುರೋಪಿಯನ್ನರು ಬಂದ ಮೇಲೆ ಹಿಲ್ಟನ್ ಹೆಡ್ ನಲ್ಲಿ ಏನೇನು ಬದಲಾವಣೆಗಳಾದವು ?

(ಸಾಧಾರಣ) [LO-2]

51. ಹಿಲ್ಟನ್ ಹೆಡ್ ಚಳವಳಿ ಈ ಗದ್ಯಭಾಗದಲ್ಲಿ ಬಂದಿರುವ ಆಂಗ್ಲ ಪದಗಳನ್ನು ಸಂಗ್ರಹಿಸಿ ಬರೆಯಿರಿ.(ಸುಲಭ)

52. ಹಿಲ್ಟನ್ ಹೆಡ್ ಮೊದಲು ಹೇಗಿತ್ತು ? (ಕಠಿಣ) [LO-2]

53. ಹಿಲ್ಟನ್ ಹೆಡ್ ನ ಸ್ಮಾರಕ ಮರದ ಬಗ್ಗೆ ಬರೆಯಿರಿ. (ಕಠಿಣ) [LO-2]

54. ಹಿಲ್ಟನ್ ಹೆಡ್ ದ್ವೀಪದಲ್ಲಿ ಏನೇನು ಕಟ್ಟಡಗಳು ನಿರ್ಮಾಣಗೊಂಡವು? (ಸಾಧಾರಣ) [LO-2]

55. ಹಿಲ್ಟನ್ ಹೆಡ್ ನಲ್ಲಿ ಪರಿಸರ ಹೋರಾಟ ಹೇಗೆ ಪ್ರಾರಂಭವಾಯಿತು? (ಕಠಿಣ) [LO-2]

**VII. ಸೂಚನೆಯಂತೆ ಉತ್ತರಿಸಿ.** **[ 2– ಅಂಕ]**

**ಅ)**

56. ಕೆಳಗಿನ ಪದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸಿ. (ಸಾಧಾರಣ) [LO-14 ]

೧. ಭರಾಟೆ

೨. ಸುಧಾರಣೆ

೩ .ಸಾರ್ವಭೌಮ

೪ .ದೌಲತ್ತು

೫. ಹೋಯ್ಲಾಟ

೬.ಪಣತೊಡು

೭.ಅಭಿಮಾನಿ

**57.** ಇರುವೆಯು ಬಂದಿತು

ಇರುವೆ ಗೂಡಿನಲ್ಲಿ ಇದೆ.

ಇರುವೆ ಗೂಡಿಗೆ ಬಂದಿದ್ದು.

ನೀಡಿರುವ ವಾಕ್ಯಗಳಲ್ಲಿ ಅಡಿಗೆರೆ ಹೇಳಿದ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರಿಸಿ.

(ಸಾಧಾರಣ) [ LO-14 ]

**ಆ) [ 4– ಅಂಕ]**

**58.** ಈ ಪಾಠದಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯಗಳ ಸಹಿತವಾಗಿರುವ ಪದಗಳನ್ನು ಪಟ್ಟಿ ಮಾಡಿ.

(ಸಾಧಾರಣ)[ LO-13]

**59.** ಶಶಿಧರ ವಿಶ್ವಾಮಿತ್ರರವರ ಸ್ಥಳ ಕಾಲ ಕೃತಿಗಳನ್ನು ಪರಿಚಯಿಸಿ. (ಕಠಿಣ) [ LO-1]

**60.** ವಿಭಕ್ತಿ ಪ್ರತ್ಯಯದ ಚಾರ್ಟನ್ನು ಪೂರ್ಣಗೊಳಿಸಿ. (ಸಾಧಾರಣ) [ LO-13]

| ಕ್ರಮ ಸಂ | ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮ ಪ್ರಕೃತಿಗೆ ವಿಭಕ್ತಿ ಪ್ರತ್ಯಯ ಸೇರಿದಾಗ |
|---|---|---|---|
| ೧ | ಪ್ರಥಮ | | ರಾಣಿಯು |
| ೨ | | | ರಾಣಿಯನ್ನು |
| ೩ | | ಇಂದ | |
| ೪ | | | ರಾಣಿಗೆ |
| ೫ | ಪಂಚಮಿ | | |
| ೬ | | ಅ | |
| ೭ | ಸಪ್ತಮಿ | ಅಲ್ಲಿ | |

**VIII.ನೀಡಿರುವ ಪಠ್ಯ ಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಸಾಧಾರಣ) [ LO-16 ]**

ನಿಸರ್ಗದ ಅತ್ಯಮೂಲ್ಯವಾದ ಕೊಡುಗೆ ಎಂದರೆ ಅರಣ್ಯ. "ಹಸಿರೇ ಉಸಿರು, ಕಡಿದರೆ ಮರ ಬರುವುದು ಬರ, ಕಾಡಿದ್ದರೆ ನಾವಿಲ್ಲಿ ಕಾಡಿಲ್ಲದೆ ನಾವೆಲ್ಲಿ," ಅರಣ್ಯಗಳನ್ನು ಪರಿಸರದ ಶ್ವಾಸಕೋಶ ಎಂದು ಕರೆಯುತ್ತಾರೆ. ಅವು ಆಮ್ಲಜನಕ ಮತ್ತು ಇತರ ಹಲವಾರು ಪ್ರಮುಖ ನೈಸರ್ಗಿಕ ಸಂಪನ್ಮೂಲಗಳ ಕಾರ್ಖಾನೆಗಳಾಗಿವೆ. ಮನುಷ್ಯರು ತಮ್ಮ ಶ್ವಾಸಕೋಶವಿಲ್ಲದೆ ಬದುಕಲು ಸಾಧ್ಯವಿಲ್ಲ ಹಾಗೆ ಪರಿಸರ ಅರಣ್ಯವಿಲ್ಲದೆ ಉಳಿಯುವುದಿಲ್ಲ.

ಮನುಷ್ಯ ಪ್ರಾಣಿ, ಪಕ್ಷಿ, ಜಲಚರಗಳು ಹೀಗೆ ಪ್ರತಿಯೊಂದು ಜೀವಿಗಳು ಅರಣ್ಯದ ಮೇಲೆ ಅವಲಂಬಿತವಾಗಿವೆ. ಅರಣ್ಯಗಳಿಂದಾಗಿ ಭೂಮಿಯಲ್ಲಿನ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಈ ಮಾತು ಅಕ್ಷರ ಸತ್ಯ ಮನುಷ್ಯನ ಬದುಕಿಗೆ ಬೇಕಾದ ಎಲ್ಲಾ ಅಗತ್ಯಗಳನ್ನು ಪೂರೈಸುವ ಜೊತೆಗೆ ಆರೋಗ್ಯಪೂರ್ಣವಾದ ವಾತಾವರಣವನ್ನು ಅರಣ್ಯ ನೀಡುತ್ತದೆ. ಅದಕ್ಕಾಗಿ ನಾವು ಅರಣ್ಯವನ್ನು ನಮ್ಮೆಲ್ಲರ ಜೀವಾಳ ಎಂದು ಹೇಳುತ್ತೇವೆ. ಗಿಡ ಮರಗಳು ಔಷಧಿಗಳನ್ನು ತಯಾರಿಸಲು

ಉಪಯೋಗಕಾರಿಯಾಗಿವೆ. ಪ್ರಾಣಿ ಪಕ್ಷಿಗಳಿಗೆ ಇದು ವಾಸ ಸ್ಥಳವಾಗಿದೆ. ಅಷ್ಟೇ ಅಲ್ಲದೆ ನಮಗೆ ಬೇಕಾದ ಪೀಠೋಪಕರಣಗಳು ಸಹ ಮರಗಳಿಂದ ಸಿಗುತ್ತಿವೆ. ಕಾಲಕಾಲಕ್ಕೆ ಮಳೆ ಸುರಿಯಲು ಅರಣ್ಯಗಳ ಕಾರಣ. ಕಾಡು ಸಮೃದ್ಧಿಯಾಗಿದ್ದರೆ ಮಾತ್ರ ನಾಡು ಚೆನ್ನಾಗಿರಲು ಸಾಧ್ಯ ಇಂತಹ ಅರಣ್ಯಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ.

ಇಂದು ಜನಸಂಖ್ಯೆ ಹೆಚ್ಚಿದಂತೆ ಮನೆಗಳ ನಿರ್ಮಾಣ ಮಾಡಲು ರಸ್ತೆಗಳನ್ನು ಹೆಚ್ಚಿಸಲು ಅರಣ್ಯಗಳನ್ನು ನಾಶ ಮಾಡುತ್ತಿದ್ದಾರೆ ಇದರಿಂದ ಮಳೆ ಕಡಿಮೆಯಾಗುತ್ತಿದೆ, ಕಾಯಿಲೆಗಳು ಹೆಚ್ಚುತ್ತಿವೆ, ಪ್ರಾಣಿ ಪಕ್ಷಿಗಳ ಸಂತತಿ ಕಡಿಮೆಯಾಗುತ್ತಿದೆ, ಹೀಗೆ ಆದರೆ ನಮ್ಮ ಮುಂದಿನ ಪೀಳಿಗೆಗೆ ಅರಣ್ಯವನ್ನು ಚಿತ್ರಪಟಗಳಲ್ಲಿ ತೋರಿಸಬೇಕಾಗುತ್ತದೆ. ಎಲ್ಲಾ ಜೀವಿಗಳ ರಕ್ಷಣೆಯ ಹೊಣೆ ನಮ್ಮದು, ಬೇಸಿಗೆಯ ಕಾಲದಲ್ಲಿ ಕಾಡುಗಿಚ್ಚು ಆಗದಂತೆ ಎಚ್ಚರ ವಹಿಸಬೇಕು. ಹೆಚ್ಚು ಗಿಡಗಳನ್ನು ನೆಡಬೇಕು. ಮರಗಳನ್ನು ಕಡಿಯದಂತೆ ನೋಡಿಕೊಳ್ಳಬೇಕು ಅದಕ್ಕಾಗಿ ವನಮಹೋತ್ಸವ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

**[ 1 – ಅಂಕ]**

**61.** ನಿಸರ್ಗದ ಅತ್ಯಮೂಲ್ಯ ಕೊಡುಗೆ ________ . (ಸುಲಭ). [LO-16 ]

**62.** ಪರಿಸರದ ಶ್ವಾಸಕೋಶ ____________________ . (ಸುಲಭ). [LO-16 ]

(ಅರಣ್ಯ, ರಸ್ತೆ, ನಗರ, ಹಳ್ಳಿ)

**[ 4– ಅಂಕ]**

**63.** ಕರ್ನಾಟಕಲ್ಲಿರುವ ಅಭಯಾರಣ್ಯಗಳನ್ನು ಪಟ್ಟಿ ಮಾಡಿ. (ಕಠಿಣ) [LO-16 ]

**64.** ಅರಣ್ಯಗಳ ಪ್ರಾಮುಖ್ಯತೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ, (ಕಠಿಣ) [LO-16 ]

**65.** ಅರಣ್ಯಗಳ ರಕ್ಷಣೆಗೆ ನೀವು ಕೈಗೊಳ್ಳುವ ಪ್ರಮುಖ ಕ್ರಮಗಳನ್ನು ತಿಳಿಸಿರಿ. (ಕಠಿಣ) [ LO-16 ]

**66. ನಿಮ್ಮ ಗ್ರಂಥಾಲಯದಲ್ಲಿ ಲಭ್ಯವಿರುವ ಪುಸ್ತಕಗಳನ್ನು ಬಳಸಿಕೊಂಡು ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪಟ್ಟಿ ಮಾಡಿ.ಅದರಲ್ಲಿ ಯಾವುದಾದರು ಒಂದು ಪುಸ್ತಕಕ್ಕೆ ಟಿಪ್ಪಣಿ ಬರೆಯಿರಿ .**

**( ಉದಾಹರಣೆ ಪರಿಸರ ಪ್ರಜ್ಞೆ - ಪ್ರೊ.ಕೆ ಭೈರಪ್ಪ) [ 4– ಅಂಕ]**

**(ಕಠಿಣ) [ LO-16 ]**

**67. ಪರಿಸರ ಜಾಗೃತಿ ಹೋರಾಟಗಳ ಬಗ್ಗೆ ಚಿತ್ರ ಸಹಿತ ಘೋಷ ವಾಕ್ಯಗಳನ್ನು ( ಪೋಸ್ಟರ್ ) ತಯಾರಿಸಿ.**

**[ 4– ಅಂಕ]**

**(ಕಠಿಣ) [ LO-17 ]**

*** *** **

# ಗದ್ಯಪಾಠ – 4

## ಮೈಲಾರ ಮಹದೇವ

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 15 |
| 2 | ಸಾಧಾರಣ | 20 |
| 3 | ಕಠಿಣ | 23 |
| ಒಟ್ಟು | | 48 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 22% |
| 2. | ತಿಳುವಳಿಕೆ | 28% |
| 3. | ಅಭಿವ್ಯಕ್ತಿ | 25% |
| 4. | ಪ್ರಶಂಸೆ | 15% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 70% |
| ಭಾಷಾ ಚಟುವಟಿಕೆ | 30% |
| ಒಟ್ಟು | 100 % |

**I. ಹೊಂದಿಸಿ ಬರೆಯಿರಿ** **[ 1 – ಅಂಕ ]**

**1.**

೧. ದಂಡಿಯಾತ್ರೆ - ಪ್ರಕೃತಿ ಚಿಕಿತ್ಸೆ ( ಸುಲಭ) [ LO-2]

೨. ಚರಕ - ಉಪ್ಪಿನ ಸತ್ಯಾಗ್ರಹ ( ಸುಲಭ) [ LO-2]

೩. ಸೇವಾಶ್ರಮ - ಸೆರೆಮನೆ ( ಸುಲಭ) [ LO-2]

೪. ಹಿಂಡಲಗಾ - ನೂಲು ( ಸುಲಭ) [ LO-2]

೫. ಮೂಟೆಬೆನ್ನೂರು - ಸಹಕಾರ ಚಳುವಳಿ ( ಸುಲಭ) [ LO-2

೬. ಮಹಾತ್ಮ ಗಾಂಧಿ - ಮೈಲಾರ ಮಹಾದೇವರ ಹುಟ್ಟೂರು ( ಸುಲಭ) [ LO-2]

೭. ಸಿದ್ದಮ್ಮ - ಗುಜರಾತ್ ( ಸುಲಭ) [ LO-2]

೮. ಸಬರಮತಿ ಆಶ್ರಮ - ಮೈಲಾರ ಮಹಾದೇವರ ಹೆಂಡತಿ ( ಸುಲಭ) [ LO-2]

**II. ಕೆಳಗಿನ ವಾಕ್ಯಗಳಲ್ಲಿ ವಿಶೇಷ್ಯ ಮತ್ತು ವಿಶೇಷಣಗಳನ್ನು ಬರೆಯಿರಿ.** **[ 1– ಅಂಕ ]**

**2.** ಅವರು ಮನೆಯನ್ನು ದೊಡ್ಡದಾಗಿ ಕಟ್ಟಿದ್ದಾರೆ. (ಸುಲಭ) [ LO-14

**3.** ರವಿಯು ತುಂಬಾ ಚೆನ್ನಾಗಿ ಓದುತ್ತಾನೆ. ( ಸುಲಭ ) [ LO-14 ]

**4.** ಸೌಮ್ಯ ಬಹಳ ಸುಂದರವಾಗಿದ್ದಾಳೆ. ( ಸುಲಭ ) [ LO-14 ]

**5.**. ರಾತ್ರಿ ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತವೆ. ( ಸುಲಭ ) [ LO-14 ]

**III. ಗುಂಪಿಗೆ ಸೇರದ ಪದ ಆರಿಸಿ ಬರೆ.** **[ 1– ಅಂಕ ]**

**6.** ನೆಲ, ರಾತ್ರಿ, ಬ್ಯಾಂಕ್ . ಹಗಲು --------- ( ಸುಲಭ ) [ LO-13 ]

**7.** ಕಾರ್ಡು, ಸರ್ಕಾರ , ಕಪ್ಪು , ಇಸ್ತ್ರಿ ----------- ( ಸುಲಭ ) [LO-13 ]

**8.** ಯುದ್ಧ ,ಕಾಳಗ, ಸಮರ, ಯಾತ್ರೆ. ------------ ( ಸುಲಭ ) [ LO-13 ]

**9.** ಇಂಡಿಯಾ, ಭಾರತ, ಶ್ರೀಲಂಕಾ, ಹಿಂದೂಸ್ತಾನ .--------- ( ಸುಲಭ ) [ LO-13 ]

**10.** ರಾಣಿ ಚೆನ್ನಮ್ಮ, ಪಿ.ವಿ ಸಿಂಧೂ, ರಾಣಿ ಅಬ್ಬಕ್ಕ, ಸರೋಜಿನಿ ನಾಯ್ಡು .----------

( ಸುಲಭ ) [ LO-13 ]

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. [ 1– ಅಂಕ ]**

**11.** ಮೋಟೆಬೆನ್ನೂರು ಎಂಬ ಹಳ್ಳಿ ಯಾವ ಜಿಲ್ಲೆಯಲ್ಲಿದೆ? ( ಸುಲಭ) [ LO-4 ]

**12.** ಯಾವ ಬಟ್ಟೆಗಳ ವಿಚಾರದಲ್ಲಿ ಯಾವಾಗಲೂ ಮೈಲಾರರ ಮನಸ್ಸಿನಲ್ಲಿ ಗುನುಗುತ್ತಿತ್ತು?

( ಸಾಧಾರಣ) [ LO-4 ]

**13.** ಮಹದೇವನಿಗೆ ಗಾಂಧಿಜಿಯವರ ಯಾವ ಆಶ್ರಮದಲ್ಲಿ ಇರಬೇಕೆಂದು ಆಸೆಯಾಯಿತು?

( ಸಾಧಾರಣ) [ LO-4 ]

**14.** ವಿಜಯಪುರ ಜಿಲ್ಲೆಯಲ್ಲಿ ಯಾವ ಗ್ರಾಮದಲ್ಲಿ ಖಾದಿ ಬಟ್ಟೆಗಳನ್ನು ತಯಾರು ಮಾಡುತ್ತಿದ್ದರು? ( ಸಾಧಾರಣ) [ LO-4 ]

**15.** 1942 ರಲ್ಲಿ ಗಾಂಧೀಜಿಯವರು ಯಾವ ಘೋಷಣೆ ಮಾಡಿದರು? ( ಸಾಧಾರಣ) [ LO-4 ]

**16.** ಮಹದೇವರವರನ್ನು ಎಲ್ಲಿ ಪೊಲೀಸರು ಬಂದೂಕು ಅಪಹರಿಸಿದರು?

( ಸಾಧಾರಣ) [ LO-4 ]

**V. ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. [ 2- ಅಂಕ ]**

**17.** ನಿಮಗೆ ತಿಳಿದಿರುವ ಐದು ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನ ಬರೆಯಿರಿ.

(ಸುಲಭ) [ LO-5]

**18.** ನಾವು ಸ್ವದೇಶಿ ವಸ್ತುಗಳನ್ನೇ ಬಳಕೆ ಮಾಡಬೇಕು. ಏಕೆ? ( ಸಾಧಾರಣ ) [ LO-5]

**19.** ಬಾಲ್ಯದಿಂದಲೇ ಏಕೆ ದೇಶಪ್ರೇಮವನ್ನು ಬೆಳಸಿಕೊಳ್ಳಬೇಕು? ( ಸಾಧಾರಣ ) [ LO-1]

**20.** ಯಾವುದಾದರೂ ಮೂರು ಸ್ವಾತಂತ್ರ ಚಳುವಳಿಯ ಹೆಸರುಗಳನ್ನು ತಿಳಿಸಿ.

( ಸಾಧಾರಣ ) [ LO-5]

**21.** ಅಂದು ಜನರಿಗೆ ಖಾದಿ ಬಟ್ಟೆಯ ಮೇಲೆ ಅಪಾರ ಗೌರವವಿರಲು ಕಾರಣವೇನು?

( ಕಠಿಣ ) [ LO-5]

**22.** ಸಬರಮತಿ ಆಶ್ರಮದ ಕುರಿತಂತೆ, ನಿಮ್ಮ ಅಭಿಪ್ರಾಯವನ್ನು ಬರೆಯಿರಿ. ( ಕಠಿಣ ) [LO -1 ]

**23.** ಸೆರೆಮನೆಗೂ ಮತ್ತು ಅರಮನೆಗೂ ಇರುವ ವ್ಯತ್ಯಾಸಗಳನ್ನು ಬರೆಯಿರಿ. (ಕಠಿಣ ) [ LO-1]

**24.** ನಾವು ಶಿಸ್ತು ಬದ್ಧ ವ್ಯಾಯಾಮವನ್ನು ರೂಢಿಸಿಕೊಳ್ಳಬೇಕು ಏಕೆ? ( ಸಾಧಾರಣ) [ LO-5]

**25.** ಅಹಿಂಸಾತ್ಮಕ ಹೋರಾಟದ ಉದ್ದೇಶವೇನು? ( ಕಠಿಣ ) [ LO-1]

**26.** ನಿಮಗೆ ಇಷ್ಟವಾದ ಸ್ವಾತಂತ್ರ್ಯ ಹೋರಾಟಗಾರರಲ್ಲಿಒಬ್ಬರ ಬಗ್ಗೆ ನಾಲ್ಕೈದು ಸಾಲುಗಳಲ್ಲಿ ಬರೆಯಿರಿ. ( ಕಠಿಣ ) [ LO-1]

**VI.ಖಾಲಿ ಜಾಗವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ. [ 1- ಅಂಕ]**

**27.** ಪ್ರಾಥಮಿಕದ ನಂತರ ವಿದ್ಯಾಭ್ಯಾಸಕ್ಕಾಗಿ ಮಹಾದೇವ___________ ಶಾಲೆಗೆ ಹೋದರು.

( ಸುಲಭ ) [LO-8 ]

**28.** ಮಹಾದೇವ______ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದರು. ( ಸುಲಭ). [ LO-8 ]

**29.** ಹಾವೇರಿ ಜಿಲ್ಲಾ ಹೊಸರಿತ್ತಿಯಲ್ಲಿದ್ದ ಸಹಕಾರ ಕೇಂದ್ರ_________ ವಸೂಲಿ ಮಾಡುತ್ತಿತ್ತು.

( ಸುಲಭ ) [LO-8 ]

**VII. ಮಾದರಿಯಲ್ಲಿ ಸೂಚಿಸಿರುವಂತೆ ವಿವರಣೆಗಳಿಗೆ ಹೊಂದುವ ಪದ ಬರೆಯಿರಿ.[ 1 – ಅಂಕ ]**

ಮಾದರಿ: ಪುಸ್ತಕಗಳನ್ನು ಸಂಗ್ರಹಿಸಿ ಓದಲು ಇಟ್ಟಿರುವ ಸ್ಥಳ- (ಗ್ರಂಥಾಲಯ)

**30.** ವನ್ಯಜೀವಿಗಳ ಸಂರಕ್ಷಿತ ಪ್ರದೇಶ_ (-----------------) ( ಸಾಧಾರಣ ) [LO-18 ]

**31.** ಖೈದಿಗಳನ್ನು ಸೆರೆಯಲ್ಲಿ ಇಡುವ ಸ್ಥಳ......(---------------------) ( ಸುಲಭ) [LO-18 ]

**32.** ಬಟ್ಟೆ ನೇಯಲು ಉಪಯೋಗಿಸುವ ಯಂತ್ರ (-------------------) ( ಸಾಧಾರಣ )[ LO-18 ]

**33.** ಇವರ ಹುಟ್ಟುಹಬ್ಬವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸುತ್ತಾರೆ. (-------)

(ಸುಲಭ) [LO-18 ]

**VIII. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. [ 2- ಅಂಕ]**

**ಅ)**

**34.** ಮಹದೇವ ಕಲಾದಗಿ ಎಂಬ ಒಂದು ಗ್ರಾಮಕ್ಕೆ ಹೋಗಿ ಏನು ತಿಳಿದುಕೊಂಡರು?

( ಸಾಧಾರಣ) [LO-4 ]

**35.** ದಂಡಿಯಾತ್ರೆಯಲ್ಲಿ ಹೆಜ್ಜೆ ಹಾಕಿದ ಮಹದೇವರಿಗೆ ಆದ ಶಿಕ್ಷೆ ಏನು? ( ಸಾಧಾರಣ) [LO-4 ]

**36.** ಮಹದೇವ ಮತ್ತು ಸಿದ್ದಮತಿ ಇಬ್ಬರು ಸೇವಾಶ್ರಮದ ಸಂಚಾಲಕರಾಗಿ ಮಾಡಿದ ಕೆಲಸಗಳೇನು? ( ಸಾಧಾರಣ) [ LO-4 ]

**37.** ಮಹಾದೇವರ ರಕ್ತದ ನಡುವಿನಲ್ಲಿ ಬಿದ್ದಿದ್ದು ಹೇಗೆ? ( ಸಾಧಾರಣ) [ LO-4 ]

**ಆ) [ 3-ಅಂಕ ]**

**38.** ನಿಮಗೆ ತಿಳಿದಿರುವ ದೇಶೀಯ ಪದಗಳನ್ನು ಪಟ್ಟಿ ಮಾಡಿರಿ. ( ಸಾಧಾರಣ) [ LO-18 ]

**39.** ನಿಮ್ಮ ಮನೆಯಲ್ಲಿ ನೀವು ಬಳಸುವ ಸ್ವದೇಶಿ ವಸ್ತುಗಳನ್ನು ಪಟ್ಟಿ ಮಾಡಿ. ( ಸಾಧಾರಣ )[ LO-18 ]

**40.** ನಿಮಗೆ ತಿಳಿದಿರುವ 10 ಅನ್ಯದೇಶಿಯ ಪದಗಳನ್ನು ಬರೆಯಿರಿ. ( ಸಾಧಾರಣ ) [ LO-18 ]

**41.** ಮಹದೇವ ಅವರು ಜೈಲಿನಿಂದ ಬಿಡುಗಡೆಯಾದ ಮೇಲೆ ಮಾಡಿದ ಕಾರ್ಯಗಳಾವುವು.?

(ಕಠಿಣ) [ LO-2 ]

**42.** ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ಏನು ಮಾಡಬೇಕೆಂದು ಮಹದೇವ ಯೋಚಿಸಿದ್ದರು?

(ಕಠಿಣ ) [ LO-4 ]

**43.** ಹೊಸರಿತ್ತಿಯಲ್ಲಿ ನಡೆದ ಘಟನೆಗಳಾವುವು? (ಕಠಿಣ ) [ LO-4 ]

**ಇ)** **[4 - ಅಂಕ ]**

**44.** ನೀವು ಭೇಟಿ ನೀಡಿದ ಯಾವುದಾದರೂ ಒಂದು ಆಶ್ರಮದ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ. ( ಕಠಿಣ ) [LO-4 ]

**45.** ಅಸಹಕಾರ ಚಳುವಳಿಯ ಬಗ್ಗೆ ೫-೬ವಾಕ್ಯಗಳಲ್ಲಿ ಬರೆಯಿರಿ. (ಕಠಿಣ )[ LO- 5 ]

**46.** ಈ ಕೆಳಗಿನ ಚಿತ್ರ ಯಾವ ಕಾರ್ಯಕ್ರಮಕ್ಕೆ ಸಂಬಂದಿಸಿದೆ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಬರೆಯಿರಿ. (ಕಠಿಣ ) [ LO- 9 ]



**47.** ನೀಡಿರುವ ವಿಷಯವನ್ನು ಕುರಿತು ಅಂತರ್ಜಾಲದಲ್ಲಿ ಮಾಹಿತಿ ಸಂಗ್ರಹಿಸಿ ಬರೆಯಿರಿ. ( ಕಠಿಣ ) [ LO-6 ]

೧.ಸ್ವಾತಂತ್ರ್ಯ ದಿನಾಚರಣೆ
೨.ಮಕ್ಕ ಳ ದಿನಾಚರಣೆ

**48.** ಬೇರೆ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದಗಳನ್ನು ಪಟ್ಟಿ ಮಾಡಿ. ( ಸಾಧಾರಣ ) [LO-18 ]
( ಆಂಗ್ಲ, ಮರಾಠ,ಪೋರ್ಚುಗೀಸ್ -ಇತ್ಯಾದಿ)

## ಗದ್ಯಪಾಠ 5

# ಪರಿಸರ ಸಮತೋಲನ

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 13 |
| 2 | ಸಾಧಾರಣ | 17 |
| 3 | ಕಠಿಣ | 26 |
| **ಒಟ್ಟು** | | **56** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 15% |
| 2. | ತಿಳುವಳಿಕೆ | 40% |
| 3. | ಅಭಿವ್ಯಕ್ತಿ | 30% |
| 4. | ಪ್ರಶಂಸೆ | 15% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 57% |
| ಭಾಷಾ ಚಟುವಟಿಕೆಗಳು | 43% |
| **ಒಟ್ಟು** | **100 %** |

**I.ಆವರಣದಲ್ಲಿ ಸೂಚಿಸಿದಂತೆ ಉತ್ತರಿಸಿ.** **[ 1- ಅಂಕ ]**

**1.** ಉಪ್ಪಿಗಿಂತ ರುಚಿಯಿಲ್ಲ , ತಾಯಿಗಿಂತ -------------- ( ಈ ಗಾದೆ ಮಾತನ್ನು ಪೂರ್ಣಗೊಳಿಸಿ) (ಸುಲಭ) [ LO-21 ]

**2.** ಹುಲಿ,ನಾಯಿ,ಆನೆ, ಸಿಂಹ ( ಇವುಗಳಲ್ಲಿ ಸಸ್ಯಹಾರಿ ಪ್ರಾಣಿಯನ್ನು ಹೆಸರಿಸಿ. (ಸುಲಭ) [ LO-14 ]

**3.** ಬಳ್ಳಿ,ಸೊಪ್ಪು,ಕಡಲು,ಚಿಗುರು. ( ಇವುಗಳಲ್ಲಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ) (ಸುಲಭ) [ LO-14 ]

**4.** ಊರಲ್ಲಿ,ಬೆಟ್ಟದಾವರೆ,ಮೊಟ್ಟೆಯಿಡು, ಒಂದೊಂದು ( ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದ . ( ಕಠಿಣ)LO-14 ]

**5.** ಶತಮಾನ ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ. ( ಸಾಧಾರಣ ) [ LO-13 ]

**6.** ಸಫಲ ಪದದ ವಿರುದ್ಧಾರ್ಥಕ ಪದ ಬರೆಯಿರಿ. (ಸುಲಭ) [ LO-14 ]

**7.** ಹೊಲ, ಹಸಿವು , ಹಂಸ , ಹಾವು, ಹಿಡಿ. ( ಈ ಪದಗಳನ್ನು "ಅ" ಕಾರಾದಿಯಾಗಿ ಬರೆಯಿರಿ. ( ಸಾಧಾರಣ ) [LO -21]

**8.** ಹಸಿರು ಬಟ್ಟೆ ತೊಟ್ಟಿರುವೆ
ಎಲ್ಲರಿಗೂ ನೆರಳು ಕೊಡುವೆ,
ಗಾಳಿಯನ್ನು ಶುದ್ದಮಾಡುವೆ
ಹಣ್ಣು ಹೂಗಳನ್ನು ನೀಡುವೆ
ಹೇಳು ನಾನು ಯಾರು? ( ಈ ಒಗಟನ್ನು ಬಿಡಿಸಿ ) (ಸುಲಭ) [ LO-22 ]

**II.**

**9. ಹೊಂದಿಸಿ ಬರೆಯಿರಿ** **[ 1 – ಅಂಕ ]**

| | | |
|---|---|---|
| ೧. ಲೋಪ ಸಂಧಿ | ಹೊಸ ಅಕ್ಷರ ಸೇರುವುದು | ( ಸಾಧಾರಣ ) [ LO-14 ] |
| ೨. ಆಗಮ ಸಂಧಿ | ಅಕ್ಷರ ಬದಲಾವಣೆ | ( ಸಾಧಾರಣ ) [ LO-14 ] |
| ೩. ಆದೇಶ ಸಂಧಿ | ಅಕ್ಷರ ಬಿಟ್ಟು ಹೋಗುವುದು. | ( ಸಾಧಾರಣ ) [ LO-14 ] |

**XI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** [ 1 – **ಅಂಕ ]**

**10.** ದಟ್ಟವಾದ ಕಾಡು ಎಲ್ಲಿ ಬೆಳೆಯುತ್ತದೆ? (ಸುಲಭ) [ LO-2 ]

**11.** ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ? (ಸುಲಭ) [ LO-2 ]

**12.** ಪ್ರಾಣಿ ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ? ( ಸಾಧಾರಣ ) [ LO-2 ]

**13.** ಸಸ್ಯ ಪ್ರಾಣಿ ಪಕ್ಷಿ ಸಂಕುಲ ಯಾವುದರಿಂದ ನಶಿಸಿ ಹೋಗುತ್ತಿದೆ? ( ಸಾಧಾರಣ ) [ LO-2 ]

**14.** ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ? (ಸುಲಭ) [ LO-2 ]

**15.** ಎಲ್ಲಿ ಬಿದ್ದ ಬೀಜಗಳು ನಾಶವಾಗುತ್ತದೆ? (ಸುಲಭ) [ LO-2 ]

**16.** ಯಾವುದಕ್ಕಾಗಿ ಪಾಶ್ಚಾತ್ಯ ಮಹಿಳೆಯರು ಮನಸೋತಿದ್ದಾರೆ? (ಸುಲಭ) [ LO-2 ]

**17.** ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ಯಾವುದು? (ಸುಲಭ) [LO-2 ]

**XII. ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.** **[ 1 – ಅಂಕ ]**

**18.** .ನಿರ್ಮಾಣ - ( ಸಾಧಾರಣ ) [ LO-13 ]

**19.** ಮನಸೋಲು - ( ಸಾಧಾರಣ ) [LO-13 ]

**20.** ಹಿಂಬಾಲಿಸು - ( ಸಾಧಾರಣ ) [ LO-13 ]

**Vಕೆಳಗಿನ ವಾಕ್ಯಗಳಲ್ಲಿ ಸಂಧಿ ಪದಗಳನ್ನು ,ಬಿಡಿಸಿ ಸಂಧಿ ಹೆಸರು ತಿಳಿಸಿ. [ 2- ಅಂಕ ]**

**21.** ನೀನೇಕೆ ನಮ್ಮೊಡನೆ ಊರಿಗೆ ಬರುವುದಿಲ್ಲ? ( ಕಠಿಣ ) [ LO-14 ]

**22.** ಹಾಸಿಗೆಯಿದ್ದಷ್ಟು ಕಾಲನ್ನು ಚಾಚು. ( ಕಠಿಣ ) [ LO-14 ]

**23.** ಅಲ್ಲಲ್ಲಿ ಕಸವನ್ನು ಚೆಲ್ಲಬಾರದು. ( ಕಠಿಣ ) [ LO-14 ]

**24.** ಉಳ್ಳವರು ಶಿವಾಲಯ ಮಾಡುವರು. ( ಕಠಿಣ ) [ LO-14 ]

**25.** ಮಳೆಗಾಲ ಬಂದಾಗ ಮಳೆಯೆಂಬರು. ( ಕಠಿಣ ) [ LO-14 ]

**26.** ಮನೆಯಲ್ಲಿ ನಾವೆಲ್ಲ Aಟವಾಡಿದೆವು. ( ಕಠಿಣ ) [ LO-14 ]

**XIII. ಈ ಪದಗಳ ಅರ್ಥ ಬರೆಯಿರಿ.** **[ 1- ಅಂಕ ]**

**27.** ಆಚ್ಛಾದನ ( ಕಠಿಣ ) [ LO-14 ]

**28.** 28. ಆರ್ದ್ರತೆ ( ಕಠಿಣ ) [ LO-14 ]

**29.** ಕಿಸೆ ( ಸಾಧಾರಣ ) [LO-14 ]

**30.** ಚಿಗರೆ ( ಕಠಿಣ) [ LO-14 ]

**XIV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ [ 3 – ಅಂಕ ]**

**31.** ಸರೋವರ ಕೆರೆ ಮತ್ತು ಹೊಂಡಗಳು ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ. ಏಕೆ? ( ಕಠಿಣ ) [ LO-2 ]

**32.** ಯೋಜನೆ ತಯಾರಿಸುವ ವಿಜ್ಞಾನಿಗಳು ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು? ( ಸಾಧಾರಣ ) [ LO-2 ]

**33.** ಸಸ್ಯಗಳ ವಿವಿಧ ಬೀಜ ಪ್ರಸಾರ ವಿಧಾನಗಳನ್ನು ವಿವರಿಸಿ? ( ಸಾಧಾರಣ ) [ LO-2 ]

**34.** ಪ್ರಾಣಿಗಳ ಮೈದೊಗಲುಗಳು ಹೇಗೆ ಬಳಕೆಯಾಗುತ್ತಿವೆ ತಿಳಿಸಿ. ( ಸಾಧಾರಣ ) [ LO-2 ]

**35.** ಪ್ರಾಣಿಗಳು ಅಹಾರಕ್ಕಾಗಿ ಒಂದನ್ನೊಂದು ಆಶ್ರಯಿಸಿದೆ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ ( ಕಠಿಣ ) [ LO-2 ]

**36.** ಜಿರಾಫೆ ಹೇಗೆ ಆಹಾರ ಸ್ಪರ್ಧೆಯಲ್ಲಿ ಯಶಸ್ವಿಯಾಗುತ್ತದೆ? ( ಕಠಿಣ ) [ LO-2 ]

**37.** .ವನ್ಯಜೀವಿ ಸಂರಕ್ಷಣೆಯನ್ನು ಹೇಗೆ ಮಾಡುತ್ತಿದ್ದಾರೆ? ( ಕಠಿಣ ) [ LO-4]

## VI. ಈ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿ [ 4 – ಅಂಕ]

**38.** .ಮೊಸಳೆ ಮತ್ತು ಹಾವುಗಳ ಸಂರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ. ( ಕಠಿಣ ) [ LO-2 ]

**39.** ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು? ( ಕಠಿಣ) [ LO-2 ]

**40.** ಪರಿಸರ ಸಮತೋಲನ ಕಾಪಾಡುವ ಕ್ರಮಗಳನ್ನು ತಿಳಿಸಿ. ( ಕಠಿಣ )[ LO-2 ]

**41.** ಮಾನವನ ಚಟುವಟಿಕೆಗಳು ಪರಿಸರದ ಮೇಲೆ ಬೀರುವ ಪರಿಣಾಮಗಳನ್ನು ವಿವರಿಸಿ. ( ಕಠಿಣ) [LO-4 ]

**42.** ಗಿಡ ಮರ ಸೂರ್ಯೋದಯ ಪ್ರಾಣಿ ಪಕ್ಷಿಗಳು ಇರುವಂತೆ ಕಲ್ಪಿಸಿಕೊಂಡು ಚಿತ್ರವನ್ನು ಬಿಡಿಸಿರಿ. ( ಕಠಿಣ ) [ LO-5]

**VIII ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ** **[ 1- ಅಂಕ]**

**43.** ದೂರದ ಬೆಟ್ಟ ________ ( ಸಾಧಾರಣ ) [ LO-22]

**44.** ಹಿತ್ತಲ ಗಿಡ _________ ( ಸಾಧಾರಣ ) [ LO-22]

**45.** ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ _______ ( ಸಾಧಾರಣ ) [LO-22]

**46.** ಕೂತು ಉಣ್ಣುವವನಿಗೆ ________ ( ಸಾಧಾರಣ ) [ LO-22]

**47.** ಹಸು ಕಪ್ಪಾದರೆ _________ ( ಸಾಧಾರಣ ) [,LO-22]

**IX. ನೀಡಿರುವ ಗದ್ಯವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ; [ CG-4, C-4.1, LO-16]**
**[ 1- ಅಂಕ ]**



ಮೇಲೆ ನೀಡಿರುವ ಚಿತ್ರವನ್ನು ಗಮನಿಸಿ , ಒಂದು ಪುಟ್ಟ ಕಥೆಯನ್ನು ಸೃಜಿಸಿ. ಹಾಗೂ ಕಥೆಗೆ ಪೂರಕವಾದ ಐದು ಪ್ರಶ್ನೆಗಳನ್ನು ರಚಿಸಿ

**48.**

**49.**

**50.**

**51.**

**52.**

**X. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **[ 4- ಅಂಕ]**

**53.** .ಆಹಾರ ಸರಪಳಿಯ ಕುರಿತಾಗಿ ಒಂದು ಫ್ಲೋ ಚಾರ್ಟ್ ರಚಿಸಿ . ಅದರ ಸಾಧಕ ಬಾಧಕಗಳ ಕುರಿತು ಚರ್ಚಿಸಿ. ( ಕಠಿಣ ) [LO-5 ]

**54.** “2035  ನನ್ನ ಕನಸಿನ ಭಾರತ “ಎಂಬ ವಿಷಯದ ಕರಿತು ನಿಮ್ಮ ಕನಸಿನ ಭಾರತವನ್ನು ವಿವರಿಸಿ.

( ಕಠಿಣ )  [  LO-9]

**55.  “ ಈ ಸಮಯ ಕಳೆದು ಹೋಗುತ್ತದೆ”.** ( ಕಠಿಣ ) [LO-5 ]

ಈ ವಾಕ್ಯವನ್ನು   ೧. ಒಬ್ಬ ಅಜ್ಜಿಯ ದೃಷ್ಟಿಯಿಂದ .

೨. ಪುಟ್ಟ ಮಗು ಇರುವ ತಾಯಿಯ ದೃಷ್ಟಿಯಿಂದ.

೩. ರಷ್ಯಾ  ಮತ್ತು  ಉಕ್ರೇನ್  ನಡುವಿನ ಯುದ್ದದ ಸಂಧರ್ಭದ ದೃಷ್ಟಿಯಿಂದ.

೪. ಪ್ರಾಥಮಿಕ ಶಾಲೆ ಪೂರ್ಣಗೊಳಿಸಿ ಪ್ರೌಢಶಾಲೆಗೆ ಹೊರಡುವ (೭ ರಿಂದ 8ನೇ ತರಗತಿ ) ಮಕ್ಕಳ ದೃಷ್ಟಿಯಿಂದ  ವಿವರಿಸಿ

**56.** ಶಿಕ್ಷಕರ  / ಪ್ಪೋಷಕರ ಸಹಾಯದಿಂದ   ಕೆಳಗೆ ನೀಡಿರುವ ಕ್ಯೂ ಆರ್ ಕೋಡ್ ಬಳಸಿ  [1- **ಅಂಕ** ]
ರಸಪ್ರಶ್ನೆಯಲ್ಲಿ ಭಾಗವಹಿಸಿ   ಉತ್ತರವನ್ನು   ಪರಿಶೀಲಿಸಿರಿ. ( ಕಠಿಣ) [  LO-6]



***ವಿಶೇಷ ಸೂಚನೆ***: ಶಿಕ್ಷಕರು ತಮಗೆ ಲಭ್ಯವಿರುವ ಡಿಜಿಟಲ್ ಸಾಧನಗಳ ಮೂಲಕ  ಈ ಚಟುಚಟಿಕೆಯನ್ನು ನಿರ್ವಹಿಸಲು ಮಕ್ಕಳಿಗೆ ಸಹಕರಿಸುವುದು.

*** *** **

## ಗದ್ಯಪಾಠ – 6

## ಚಗಳಿ ಇರುವೆ

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 20 |
| 2 | ಸಾಧಾರಣ | 30 |
| 3 | ಕಠಿಣ | 20 |
| ಒಟ್ಟು | | 70 |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 22% |
| 2. | ತಿಳುವಳಿಕೆ | 50% |
| 3. | ಅಭಿವ್ಯಕ್ತಿ | 14% |
| 4. | ಪ್ರಶಂಸೆ | 14% |
| ಒಟ್ಟು | | 100 |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ | 65% |
| ಭಾಷಾ ಚಟುವಟಿಕೆ | 35% |
| **ಒಟ್ಟು** | **100 %** |

### I. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ. [ 1 – ಅಂಕ ]

**1.** ಚಗಳಿ ಇರುವೆಗಳು ಉತ್ಪಾದಿಸುವ ರಾಸಾಯನಿಕ ವಸ್ತುವಿಗೆ _________ ಎಂದು ಹೆಸರು.
(ಸಾಧಾರಣ ) [LO-18 ]

**2.** 'ಕೊಟ್ಟೆ' ಎಂದರೆ _______ ( ಸಾಧಾರಣ ) [LO-2 ]

**I. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ. [ 1-ಅಂಕ ]**

**1.** ಪರಿಶೀಲನೆ, ಮಾಹಿತಿ ಸಂಗ್ರಹಣೆ , ವಿಷಯದ ಆಯ್ಕೆ , ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ.

**(** ಪ್ರಬಂಧ ಬರೆಯುವ ಹಂತಗಳನ್ನು ಕ್ರಮವಾಗಿ ಬರೆಯಿರಿ) (ಸಾಧಾರಣ) [LO-5 ]

**2.** ಶಾಂತಿ ( ಈ ಪದದ ವಿರುದ್ಧ ಪದ ಬರೆಯಿರಿ) (ಸುಲಭ) [ LO-13 ]

**3.** ರಾಜ ( ಈ ಪದದ ಸಮನಾರ್ಥಕ ಪದಗಳನ್ನು ಬರೆಯಿರಿ) (ಸುಲಭ) [ LO-13 ]

**4.** ಅಲ್ಪನಿಗೆ ಐಶ್ವರ್ಯ ಬಂದರೆ --------------- ( ಈ ಗಾದೆ ಮಾತನ್ನು ಪೂರ್ಣಗೊಳಿಸಿ )

(ಸಾಧಾರಣ)[ LO-20 ]

**5.** ಪಟ್ಟ, ನಲ್ಲ, ಬೇಗ ( ಈ ಪದಗಳಿಗೆ ಪ್ರಾಸ ಪದಗಳನ್ನು ಬರೆಯಿರಿ) (ಸಾಧಾರಣ) [ LO-20 ]

**6.** ಅರಮನೆ, ಒಲಗ, ತಿರುಕ, ರಾಜ ( ಗುಂಪಿಗೆ ಸೇರದ ಪದ ಬರೆಯಿರಿ) (ಸುಲಭ) [ LO-2 ]

**7.** ಹೆಂಗಸು ( ಈ ಪದವನ್ನು ಬಹುವಚನ ರೂಪಕ್ಕೆ ಬದಲಾಯಿಸಿ ) (ಸುಲಭ) [ LO-13 ]

**8.** ತಿರುಕ ಹೆದರಿ ಕಣ್ಣು ತೆರೆದನು ! ( ಇಲ್ಲಿರುವ ಚಿನ್ಹೆ ಗುರುತಿಸಿ ಹೇಳಿರಿ

(ಸುಲಭ) [ LO-13 ]

**II. ಬಿಟ್ಟ ಸ್ಥಳಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ. [ 1-ಅಂಕ ]**

**9.** ತಿರುಕನು ಕನಸು ಕಂಡಿದ್ದು —-- (ಸುಲಭ) [ LO-2 ]

ಅ) ಅರಮನೆಯಲ್ಲಿ ಬ)ರಸ್ತೆಯಲ್ಲಿ

ಕ)ಮುರುಕು ಧರ್ಮಶಾಲೆಯಲ್ಲಿ ಡ)ಮಾಳಿಗೆಯಲ್ಲಿ

**10.** ಪುರದ ರಾಜನಿಗೆ —--------- ಇರಲಿಲ್ಲ .(ಸುಲಭ) [ LO-2 ]

ಅ) ವರಕುಮಾರರು ಬ)ಕುಮಾರಿಯರು

ಕ)ಮಂತ್ರಿಗಳು ಡ)ಹೆಂಡತಿಯರು

**11.** ಕುಸುಮಮಾಲೆಯನ್ನು —------- ಕೈಗೆ ಇಡುವರು. (ಸುಲಭ) [ LO-2 ]

ಅ) ಸಿಂಹ ಬ)ಆನೆ

ಕ)ಹುಲಿ ಡ).ತಿರುಕ

**12.** ಕರಿಯು --------- ಕೊರಳಿಗೆ ಮಾಲೆ ಹಾಕಿತು. (ಸುಲಭ) [ LO-2 ]

ಅ) ರಾಜನ ಆ)ರಾಣಿಯ

ಇ)ತಿರುಕನ ಈ)ಮಕ್ಕಳ

**13.** ರಾಜ್ಯದ ಜೊತೆಗೆ ತಿರುಕನಿಗೆ ------ ಕೊಟ್ಟರು. (ಸುಲಭ) [ LO-2 ]

ಅ) ಹಣ್ಣುಗಳನ್ನು ಆ)ಕನ್ಯೆಯರನ್ನು

ಇ)ರಥವನ್ನು ಈ)ಮಕ್ಕಳನ್ನು

**14.** ತಿರುಕ ರಾಜನ ಬಳಿ —---------- ಅಂಗ ಬಲವಿತ್ತು. (ಸುಲಭ) [ LO-2 ]

ಅ) ಗಜ ಬಲ ಆ) ಅಶ್ವ ಬಲ

ಇ) ಅಶ್ವ ಬಲ ಈ)ಚತುರಂಗಬಲ

**15.** ರಾಜನು ಸುತರುಗಳಿಗೆ —-------ಮಾಡಲು ನಿಶ್ಚಯಿಸಿದನು. (ಸುಲಭ) [LO-2 ]

ಅ) ಮದುವೆ ಆ)ಪಟ್ಟ

ಇ)ಯುದ್ಧ ಈ)ನಾಮಕರಣ

**16.** ತಿರುಕ ರಾಜನು ಕನಸಿನಿಂದ ಕಣ್ಣು ತೆರೆದನು.ಏಕೆಂದರೆ —----- (ಸುಲಭ) [ LO-2 ]

ಅ) ನಿದ್ರಾಭಂಗವಾದ್ದರಿಂದ ಆ)ಮಂಚದಿಂದ ಬಿದ್ದುದರಿಂದ

ಇ)ರಾಜರ ದಂಡು ಮುತ್ತಿದ್ದರಿಂದ ಈ)ರಾಣಿಯು ಎಬ್ಬಿಸಿದ್ದರಿಂದ

**III. ಬಿಟ್ಟ ಸ್ಥಳ ತುಂಬಿರಿ. [ 1-ಅಂಕ ]**

**17.** ಮುಪ್ಪಿನ ಷಡಕ್ಷರಿಯವರ ಊರು —----- (ಸುಲಭ) [ LO-2 ]

**18.** . ಒಡೆಯ ಪದದ ಸಮಾನಾರ್ಥಕ ಪದ —---------- (ಸುಲಭ) [ LO-13 ]

**19.** —--------- ಒರಗುತ್ತ ಕನಸು ಕಂಡನು. (ಸುಲಭ) [ LO-2 ]

**20.** ಕರಿಯ ಕೈಗೆ ---------- ನೀಡಿದರು. (ಸುಲಭ) [ LO-2 ]

**21.** ಆನೆಯು ಯಾರ ಕೊರಳಿಗೆ ಮಾಲೆ ಹಾಕುತ್ತದೋ ಅವರೇ —------ (ಸುಲಭ) [ LO-2 ]

**22.** ತಿರುಕರಾಜನು —------- ರಾಜ್ಯವಾಳುತಿದ್ದನು. (ಸುಲಭ) [ LO-2 ]

**23.** ಸುತ ಪದದ —------ ಅರ್ಥ (ಸುಲಭ) [ LO-13 ]

**24.** ಕೊಡೆ ಪದಕ್ಕೆ ------- ಮತ್ತು ------ ಎಂಬುದು ನಾನಾರ್ಥವಾಗಿದೆ. (ಸುಲಭ) [ LO-13 ]

**25.** ರಾಜ ಪದದ ತದ್ಭವ ರೂಪ -------- ಆಗಿದೆ. (ಸುಲಭ) [ LO-13 ]

**26.** ಧರ್ಮ ಪದದ ವಿರುದ್ಧ ಪದ ------- ಆಗಿದೆ. ( ಸುಲಭ) [ LO-13 ]

**IV.ಹೊಂದಿಸಿ ಬರೆಯಿರಿ.** [ LO-2 ] **[ 1-ಅಂಕ ]**

**27.**

| | |
|---|---|
| ೧. ಕರಿ | ಸೈನ್ಯ (ಸುಲಭ) |
| ೨.ತಿರುಕ | ಸುಭೋದ ಸಾರ (ಸುಲಭ) |
| ೩.ಮುಪ್ಪಿನ ಷಡಕ್ಷರಿ | ಧರ್ಮಶಾಲೆ (ಸುಲಭ) |
| ೪.ಸುತರು | ಕುಸುಮಬಾಲೆ (ಸುಲಭ) |
| ೫. ರಾಜ | ಧನ, ರಾಜ್ಯ, ತನುಜ, ಯುವತಿ (ಸುಲಭ) , |
| ೬. ಚಾತುರಂಗ | ರಾಯ (ಸುಲಭ) |
| ೭. ಚಾತುರ್ಮದ | ಸೈನ್ಯದ ನಾಲ್ಕು ಅಂಗ (ಸುಲಭ) |
| ೮. ದಂಡು | ಮದುವೆ(ಸುಲಭ) |

**IV. ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.** **[ 1-ಅಂಕ ]**

ಮಾದರಿ: ವರಕುಮಾರರಿಲ್ಲದಿರಲು=ವರ ಕುಮಾರರು +ಇಲ್ಲದಿರಲು

**28.** ಮೆಚ್ಚುವಂದದಿ = (ಸುಲಭ) [ LO-14 ]

**29.** ಬಂದೆವೆನಲು = (ಸುಲಭ) [ LO-14 ]

**30.** ಮಕ್ಕಳಾದುವಾಗಲೇ = (ಸುಲಭ) [ LO-14 ]

**31.** ನುಡಿದನಿನಿತು = (ಸುಲಭ) [ LO-14 ]

**32.** ಬಿಟ್ಟರಲ್ಲಿಯೇ = (ಸುಲಭ) [ LO-14 ]

**V. ಒಂದು ವಾಕ್ಯದಲ್ಲಿ ಉತ್ತರಿಸಿ.** **[ 1-ಅಂಕ ]**

**33.** ತಿರುಕನು ಎಲ್ಲಿ ವಾಸಿಸುತ್ತಿದ್ದನು? (ಸಾಧಾರಣ) [ LO-2 ]

**34.** ತಿರುಕನ ಕನಸಲ್ಲಿ ಸತ್ತವರು ಯಾರು? (ಸಾಧಾರಣ) [LO-2 ]

**35.** ಆನೆಯ ಕೈಯಲ್ಲಿ ಮಾಲೆ ಹಾಕಿಸಿಕೊಂಡವರು ಯಾರು? (ಸಾಧಾರಣ) [ LO-2 ]

**36.** ಕನಸಿನಲ್ಲಿ ರಾಜ ಏನು ಮಾಡುತ್ತಿದ್ದನು? (ಸಾಧಾರಣ)[ LO-2 ]

**37.** ಲೋಲನಾದ ರಾಜ ಮಂತ್ರಿಗೆ ಹೇಳಿದುದೇನು? (ಸಾಧಾರಣ) [ LO-2 ]

**38.** ಉಳಿದ ರಾಯರೆಲ್ಲ ಮೆಚ್ಚುವಂತ ಕೆಲಸ ರಾಜ ಏನು ಮಾಡಿದ? (ಸಾಧಾರಣ) [ LO-2 ]

**39.** ಯಾವುದರಿಂದ ರಾಜ ಹಿಗ್ಗುತ್ತಿದ್ದನು? (ಸಾಧಾರಣ) [ LO-2 ]

**40.** ಯಾರ ದಂಡು ತಿರುಕರಾಜನಿಗೆ ಮುತ್ತಿದಂತಾಯ್ತು? (ಸಾಧಾರಣ) [LO-2 ]

**41.** ತಿರುಕನಿಗೆ ಪಟ್ಟವನ್ನು ಕಟ್ಟಿದವರು ಯಾರು? (ಸಾಧಾರಣ) [ LO-2 ]

**42.** ತಿರುಕನ ಕನಸು ಈ ಪದ್ಯವನ್ನು ಬರೆದ ಕವಿಯಾರು? (ಸಾಧಾರಣ) [ LO-2 ]

VI. **ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **[ 2- ಅಂಕ]**

**43.** ಕರಿಯ ಕೈಗೆ ಕುಸುಮ ಮಾಲೆಯನ್ನು ಕೊಡಲು ಕಾರಣವೇನು? (ಸಾಧಾರಣ) [ LO-2 ]

**44.** ತಿರುಕ ಪೊಡವಿಯಾಣ್ಮನಾದುದು ಹೇಗೆ? (ಸಾಧಾರಣ) [ LO-2 ]

**45.** ತಿರುಕ ರಾಜನು ಮಂತ್ರಿಗೆ ವಹಿಸಿದ ಜವಾಬ್ದಾರಿಗಳೇನು? (ಸಾಧಾರಣ)[ LO-2 ]

**46.** ರಾಜನಿಗೆ ಏರಿದ ಅಹಂಕಾರಗಳು ಯಾವುವು? (ಸಾಧಾರಣ) [ LO-2 ]

**VII. ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **[ 3- ಅಂಕ]**

**47.** ಕರಿಯ ಕೈಗೆ ಮಾಲೆ ಕೊಡಲು ಕಾರಣವೇನು? (ಕಠಿಣ) [ LO-2 ]

**48.** ತಿರುಕನಿಗೆ ರಾಜನಾಗುವ ಅದೃಷ್ಟ ಹೇಗೆ ಬಂತು? (ಕಠಿಣ) [ LO-2 ]

**49.** ನೃಪರೆಲ್ಲ ತಿರುಕ ರಾಜನಿಗೆ ಏನು ನೀಡಿದರು? (ಕಠಿಣ) [ LO-2 ]

**50.** ರಾಜನಾದ ತಿರುಕನ ಜೀವನ ಹೇಗಿತ್ತು? (ಕಠಿಣ) [ LO-2 ]

**51.** ಸುತರುಗಳ ಮದುವೆ ತಯಾರಿ ಬಗ್ಗೆ ತಿಳಿಸಿ. (ಕಠಿಣ) [ LO-2 ]

**52.** ರಾಜನು ಯಾವ ಯಾವ ಸುಖಗಳಲ್ಲಿ ತೇಲುತ್ತಿದ್ದನು? (ಕಠಿಣ) [ LO-2 ]

**53.** ರಾಜನು ಕನಸಿನಿಂದ ಕಣ್ಣನು ಏಕೆ ತೆರೆದನು? (ಕಠಿಣ) [ LO-2 ]

**54.** ಒಂದು ದಿನದ ಮಟ್ಟಿಗೆ ನಿಮ್ಮನ್ನು ರಾಜರನ್ನಾಗಿ ಮಾಡಿದರೆ ಏನೆಲ್ಲಾ ಮಾಡುವಿರಿ ಎಂಬುದನ್ನು ಬರೆಯಿರಿ. (ಕಠಿಣ) [ LO-3 ]

**VIII.**



**ಬರಹ ( ಕೃಪೆ- ದೇವನೂರು ಮಹಾದೇವ ರವರ ಒಡಲಾಳ) [CG-5, C-5.1, LO19 ]**

ನೀ ಇದ್ರಾ?

'ಯಮದೇವ್ರೂ ಓಡೋಯ್ತರ !'

ಶಿವೂಗೆ ಅದನ್ನು ತನ್ನ ಕಣ್ಣುಗಳಿಗೆ ತಂದುಕೊಳ್ಳಲು ಸಿಗಲಿಲ್ಲ. ಬೆಪ್ಪು ಗಣ್ಣು ಬುಟ್ಟು ನೋಡಿತ್ತು. ಸಾಕವ್ವ ಅಂದಳು :

'ಅವರ್ಗ ಅಲ್ದ ಮರ್ದ ಗಾತ್ರ ಮೀಸೆ... ದಾರಂದದಗಲ ಹಲ್ಲು...'

'ಅವು ನಿನ್ನ ಎಳ್ಕೊಂಡೋದ್ರಾ.'

'ಅಯ್ ತಗ ತಗಾ... ನನ್ನ್ಯಾಕ ಎಳ್ಕೊಂಡುವೋದೀರಿ ಮೂದೇವ್ಗಳ . ನಾನೇ ಬತ್ತೇನಿ ನಡೀರಿ ಅಂತೇನಿ' ಆಮೇಲೆ...'

'ಆಮೇಲೆ ಅವರ್ಗಿಂತ, ಮೊದ್ಲು ನಾನೀಯ ಯಮ ಧರ್ಮರಾಜ್ನ ತವಕ ವೊಯ್ತೀನಿ...'

'ಯಮ ಧರ್ಮರಾಜ ಏನ್ಮಾಡೀನು...?'

'ಅವ್ನಾ... ನಮ್ಮ ಹಟ್ಟೀ ಗಾತ್ರುದ ಸಿಮ್ಮ್ಯಾಸನದ ಮೇಲ ಕೂತ್ಕಂಡು... ಯಮದೂತರು ಕರ್ಕ ಬತ್ತಾರಲ್ಲ... ಅವರ್ಗೆ ಸಿಕ್ಸ ಕೊಡ್ತಾನೆ...'

'ಅದ್ನ್ಯಾನು ನಿಂಗ ಹೆದ್ರಿಕೆ ಆಗಲ್ವಾ...?'

'ಅಯ್... ನರ ಲೋಕದಲಿ ನಾನು ಪಟ್ಟಂಥ ಕಷ್ಟಕ ಆ ಸೀಕ್ಷ ಎಲ್ಲಾದ್ದು ತಗಾ... ಅವ್ನ ಜೊತೇಲೂ ಅದ್ನೆ ಅಂತೀನಿಕನಾ...'

ಪುಟಗೌರಿ ಚಿಕ್ಕಿಯಾಗಿದ್ದ ಸಾಕವ್ವ ಈಗ ಬಿಳೀ ಸೀರೆ ಉಟ್ಟು ಹಾರಾಡುವ ಕೂದುಲ ಗಾಳಿಗೆ ಬಿಟ್ಟು ಬಳುಕುತ್ತ ದೇವಕನ್ನಿಕೆ ಆದಳು.

'ಅವ್ವ ಅದ್ಯೇನಂದನು?'

'ಅದ್ಕ ಅವ್ವ... ಆಯ್ತು ಮುದ್ಕಿ, ನಿನ್ನ ಧೈರಕ ಮೆಚ್ಚಿ... ಏನ್ ವರ ಬೇಕು ಕೇಳ್ಕ ಅಂತಾನ.'

ಬಿಳೀ ಸೀರೆ ಉಟ್ಟು ಹಾರಾಡುವ ಕೂದುಲ ಗಾಳಿಗೆ ಬಿಟ್ಟು ಬಳುಕುತ್ತ ದೇವಕನ್ನಿಕೆಯು ತನ್ನ ಕಿರುಬೆರಳಲಿ ಭೂಲೋಕನ ಆಡಿಸತೊಡಗಿದಳು.

'ವರ ಕೇಳ್ಕ ಅಂದ್ಯೇಲ'

'ಅದ್ಕ ನಾನು, ನೋಡು ಸ್ವಾಮಿ... ನನ್ನ ಮೊಮ್ಮೊಸು ನರಲೋಕದಲಿ ರಾಜ್‌ಭಾರ ಮಾಡುವಂಥ ವರಕೊಡು... ಅಷ್ಟ ಸಾಕು ಅಂತೇನಿ.'

ಸಾಕವ್ವನ ಬಾಯಿಂದ ಮಾತುಗಳು ಬರುತ್ತಿದ್ದಂತೆ... ಅವಳ ಸುಕ್ಕಿಂದ ಮಾಡಿದ ಅಲ್ಲಾಡುವ ಚರ್ಮ, ಅವಳ ಮೊಖದ ಹಲ್ಲಿಲ್ಲದ ಬಾಯಿ, ತಲೆಯ ನರೆಕೂದಲು ಮಾಯವಾದವು. ಸಾಕವ್ವನೊಳಗೆ ಪುಟಗೌರಿ ಚಿಕ್ಕಿ ಮೂಡಿದಳು.

**55.** ಮೇಲಿನ ಗದ್ಯವನ್ನು ಓದಿ ಕೆಳಗಿನ ಆಡು ಭಾಷೆಗಳಿಗೆ ಗ್ರಾಂಥಿಕ ರೂಪ ಬರೆಯಿರಿ. (ಸಾ) [ LO-19 ]

ಅ) ಎಳ್ಕೊಂಡುವೋದೀರಿ.

ಆ) ಅದ್ರೂನು.

ಈ) ಸಿಮ್ಯಾಸನದ.

**56.** ಮೇಲಿನ ಸಂಭಾಷಣೆಯನ್ನು ನಿಮ್ಮ ಪ್ರಾದೇಶಿಕ ಭಾಷಾ ರೂಪದಲ್ಲಿ ಬರೆಯಿರಿ. (ಕಠಿಣ) [ LO-19 ]

**57.** ಸಾಕವ್ವ ಹಾಗೂ ಶಿವು ಪಾತ್ರವನ್ನು ತರಗತಿಯಲ್ಲಿ ಅಭಿನಯಿಸಿ ಆಸ್ವಾದಿಸಿ: (ಕಠಿಣ) [LO-7]

**IX. ಕೆಳಗಿನ ಹೇಳಿಕೆಗಳನ್ನು ಸರಿ ಅಥವಾ ತಪ್ಪು ಎಂದು ಗುರುತಿಸಿ.**

**58.** ಪ್ರಬಂಧಕ್ಕೆ ಶೀರ್ಷಿಕೆ ಅಗತ್ಯವಿಲ್ಲ (ಸಾ) [ LO-5]

**59.** ಪ್ರಬಂಧದಲ್ಲಿ ವಿಷಯವನ್ನು ಕ್ರಮಬದ್ಧವಾಗಿ ಬರೆಯಬೇಕು. (ಸಾ) [ LO-5]

**60.** ಅಶುದ್ಧ ಭಾಷೆ ಉತ್ತಮ ಪ್ರಬಂದದ ಲಕ್ಷಣ (ಸಾ) [LO-5]

**61.** ಉಪಸಂಹಾರ ಪ್ರಬಂಧದ ಕೊನೆಯ ಭಾಗ (ಸಾ) [ LO-5]

**62.** ಪ್ರಬಂಧಕ್ಕೆ ವಿವಿಧ ಕ್ರಮಬದ್ಧ ಹಂತಗಳ ಅಗತ್ಯವಿಲ್ಲ. (ಸಾ) [ LO-5]

**63.** ಉತ್ತಮ ಪ್ರಬಂಧ ಓದುಗರ ಗಮನ ಸೆಳೆಯುತ್ತದೆ. (ಸಾ) [ LO-5]

*** *** ***

## ಪದ್ಯಪಾಠ - 8

## ಅಭಿಮನ್ಯು ಪರಾಕ್ರಮ

| ಕ್ಲಿಷ್ಟತೆಯ ಮಟ್ಟ | | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 18 |
| 2 | ಸಾಧಾರಣ | 19 |
| 3 | ಕಠಿಣ | 06 |
| **ಒಟ್ಟು** | | **43** |

| ಉದ್ದಿಷ್ಟಗಳು | | ಶೇಕಡ |
|---|---|---|
| 1. | ಜ್ಞಾನ | 26% |
| 2. | ತಿಳುವಳಿಕೆ | 38% |
| 3. | ಅಭಿವ್ಯಕ್ತಿ | 18% |
| 4. | ಪ್ರಶಂಸೆ | 18% |
| **ಒಟ್ಟು** | | **100** |

| ಪ್ರಶ್ನೆಗಳ ಸ್ವರೂಪ | ಶೇಕಡ |
|---|---|
| ಘಟಕ ಆಧಾರಿತ | 70% |
| ಭಾಷಾ ಚಟುವಟಿಕೆ | 30% |
| **ಒಟ್ಟು** | **100 %** |

### I. ಕೆಳಗಿನ ರೂಪಕಗಳನ್ನು ಅರ್ಥ ಮಾಡಿಕೊಂಡು ನಿಮ್ಮದೇ ಶೈಲಿಯಲ್ಲಿ ವಿವರಿಸಿ.

**1.** 'ವಹ್ನಿಜ್ವಾಲೆ ಹಿಮಕಂಜುವುದೆ' (ಸಾದಾರಣ) [LO- 18/19 ]

**2.** ಗಾಳಿಬೆಮರುವುದುಂಟೆ (ಸಾದಾರಣ) [ LO- 18/19 ]

**3.** ಲೆಪ್ಪದುರುಗನ ಹಿಡಿಯಲೇತಕೆ ಗರುಡ ಮಂತ್ರವು (ಸಾದಾರಣ) [ 18/19 ]

**4.** ಮರೀಚಿಯ ತೊರೆಗೆ ಹರುಗೋಲಿಡುವರುಂಟೇ (ಸಾದಾರಣ) [ LO- 18/19 ]

**5.** ಮಂಜಿನ ಮೇಲುಗಾಳಿಗವುಂಟೆ ಬಲುಬೇಸಿಗೆಯ ಬಿಸಿಲೊಳಗೆ (ಸಾದಾರಣ) [ LO- 18/19 ]

### II. ಕೆಳಗಿನ ಮಹಾಭಾರತದ ಪಾತ್ರಗಳಿಗೆ ಸಂಬಂಧವನ್ನು ಕಲ್ಪಿಸಿ ಹೊಂದಿಸಿ ಬರೆಯಿರಿ.

**[ LO-4]**

**6.**

| | |
|---|---|
| ೧. ಅಭಿಮನ್ಯು. | ಪಾಂಡವರಲ್ಲಿ ಹಿರಿಯ(ಸುಲಭ) |
| ೨.ಕೊಡನ ಮಗ | ಅರ್ಜುನ ಸುಭದ್ರೆಯ ಮಗ(ಸುಲಭ) |
| ೩.ಕೃಪ | ದ್ರೋಣಾಚಾರ್ಯ(ಸುಲಭ) |
| ೪.ರಾಧೆಯ. | ಪಾಂಡವ ಕೌರವರಿಗೆ ಬಿಲ್ವಿದ್ಯೆ ಕಲಿಸಿದ ಗುರು(ಸುಲಭ) |
| ೫.ಧರ್ಮರಾಯ. | ಕರ್ಣ(ಸುಲಭ) |

### III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

**7.** 'ಆಹವ' ಪದದ ಹೊಸಗನ್ನಡ ರೂಪ —-(ಸುಲಭ) [ CG-3, C-3.1, LO-14 ]

ಅ)ಜಗಳ, ಇ) ಯುದ್ದ,

ಆ)ಸೈನ್ಯ, ಈ) ಸೇನೆ

**8.** ’ಗದುಗಿನ ನಾರಣಪ್ಪ’ ಎಂದು ಕರೆಯಲಾಗುವ ಕವಿ —-------

(ಸುಲಭ) [ CG-3, C-3.1, LO-14 ]

ಅ)ರನ್ನ, ಇ) ಪಂಪ,

ಆ) ಕುಮಾರವ್ಯಾಸ, ಈ) ಜನ್ನ)

**9.** ಅಭಿಮನ್ಯುವಿನ ಪರಾಕ್ರಮ ಕಾಣ ಸಿಗುವ ಯುದ್ದ [ CG-1, C-1.1, LO-2 ]

ಅ) ರಾಮಯಣ ಯುದ್ದ ಇ) ಕಳಿಂಗ ಯುದ್ದ

ಆ) ಕುರುಕ್ಷೇತ್ರ ಯುದ್ದ ಈ) ಖಾಂಡವದಹನ ಯುದ್ದ

**10.** ಛಂದಸ್ಸಿನ ಭಾಷೆಯಲ್ಲಿ ಲಘು ಗುರುತಿಸಲು ಬಳಸುವ ಚಿನ್ಹೆ —---------(ಸುಲಭ)

[CG-2, C-2.2, LO-10 ]

ಅ) U, ಇ) C,

ಆ) - , ಈ) ∩

**11.** ಛಂದಸ್ಸಿನ ಭಾಷೆಯಲ್ಲಿ ಎರಡು ಮಾತ್ರಾ ಕಾಲದ (ದೀರ್ಘಸ್ವರ) ಅಕ್ಷರಗಳನ್ನು ಹೀಗೆ ಕರೆಯುತ್ತಾರೆ. (ಸುಲಭ) [CG-2, C-2.2, LO-10 ]

ಅ) ಲಘು ಇ) ಅಲ್ಪಪ್ರಾಣ,

ಆ) ಗುರು, ಈ) ಮಹಾಪ್ರಾಣ

**12.** ಅಭಿಮನ್ಯು ಭೇದಿಸಬೇಕಿದ್ದ ವ್ಯೂಹ ಯಾವುದು ? [ CG-1, C-1.1, LO-2 ]

ಅ) ಚಕ್ರವ್ಯೂಹ ಇ) ಮಕರವ್ಯೂಹ

ಆ) ಗರುಡವ್ಯೂಹ ಉ) ಪದ್ಮವ್ಯೂಹ

**13.** ’ಗದುಗಿನ ಭಾರತ’ ಎಂದು ಕರೆಯಲಾಗುವ ಕೃತಿ—-----(ಸುಲಭ) [ CG-1, C-1.1, LO-2 ]

ಅ)ಕರ್ನಾಟಕ ಭಾರತ, ಇ)ಭಾರತ ಮಂಜರಿ,

ಆ)ಕರ್ನಾಟಕ ಭಾರತ ಕಥ, ಈ) ಕರ್ನಾಟಕ ಭಾರತ ಕಥಾ ಮಂಜರಿ

**14.** ಅಭಿಮನ್ಯು ಯಾರ ಮಗ? (ಸುಲಭ) [ CG-1, C-1.1, LO-2 ]

ಅ) ಧರ್ಮರಾಯ ಇ) ಭೀಮ

ಆ) ಅರ್ಜುನ ಈ) ನಕುಲ

**15.** ಅಭಿಮನ್ಯೂ ಪರಾಕ್ರಮ ಪದ್ಯದಿಂದ ನಾವು ಕಲಿಯಬೇಕಾದ್ದು ಏನು? (ಸುಲಭ)

[ CG-1,C-1.3, LO-4 ]

ಅ) ಕೋಪ ಮಾಡಿಕೊಳ್ಳಬೇಕು

ಆ) ಧೈರ್ಯ ಮತ್ತು ಕರ್ತವ್ಯ ಪಾಲಿಸಬೇಕು

ಇ) ದೊಡ್ಡವರ ವಿಚಾರದಲ್ಲಿ ಮೂಗು ತೂರಿಸಬೇಕು

ಈ) ಬರಿ ಮಾತಿನಲ್ಲಿ ಕೊಚ್ಚಿಕೊಳ್ಳಬೇಕು.

IV. **ಈ ಕೆಳಗಿನ ಸಾಲುಗಳನ್ನು ಸಂದರ್ಭ ಸಹಿತ ವಿವರಿ**ಸಿ.

**16.** ಬಾಲನಿವ ನೆನ್ನದಿರು ದುಗುಡವ ತಾಳಲಾಗದು ಬೊಪ್ಪ (ಸಾದಾರಣ) [ LO-1]

**17.** ಶಿಶುವು ನಿನೆಲೆ ಮಗನೆ ಕಾದುವರಸಮಬಲರು ಕಣಾ! (ಸಾದಾರಣ) [ LO-1 ]

**18.** ಕೊಡನ ಮಗನ ಕುಮಂತ್ರದೊಡ್ಡಿನ ಕಡಿತಕಾನಂಜುವೆನೆ. (ಸಾದಾರಣ) [ LO-1 ]

**19.** ನೀಗೆಲುವಂದವೆಂತೈ ಸಮರವಿದು ಸಾಮಾನ್ಯವಲ್ಲೆಂದ. (ಸಾದಾರಣ) [ LO-1 ]

**20.** ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ. (ಸಾದಾರಣ) [ LO-1 ]

V. **ಕೆಳಗಿನ ಪದಗಳ ಪಟ್ಟಿಯನ್ನು ಅ ಪಟ್ಟಿಯನ್ನು ಆ ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ**

**(ಸಾದಾರಣ) LO-14]**

**21.**

| | |
|---|---|
| 1. ಅದಟು | ಅಪ್ಪಣೆ |
| 2. ಸೈರಿಸಲಾಪೆ | ನಾಶಮಾಡು |
| 3. ಅಮ್ಮೆನು | ಪರಾಕ್ರಮ |
| 4. ಅಸದಳ | ಸಾಧ್ಯವಾಗುವುದಿಲ್ಲ |
| 5. ಖಂಡಿಗಳೆ | ಅಸಾದ್ಯ |
| 6. ನೇಮ | ತಡೆದುಕೊಳ್ಳಲು ಸಾಧ್ಯ |

**VI. ಈ ಕೆಳಗಿನ ಸಾಲಿಗೆ ಪ್ರಸ್ತಾರ ಹಾಕಿ. (ಕಠಿಣ)**

**22.** ಕೋಳಿ ಕೂಗಿತು ಬೆಳಕು ಹರಿಯಿತು [ LO-10 ]

**23.** ರಜೆಯ ಗೌಜಿ ಮುಗಿಯಿತಲ್ಲ

ಗುಲ್ಲು ಸೊಲ್ಲು ನಿಲಿಸಿ ಮೆಲ್ಲ

ಮಕ್ಕಳೆಲ್ಲ ಸಿದ್ದರಾಗಿ ಮತ್ತೆ ಒದಿಗೆ

**24.** ಬೇಸಿಗೆ ರಜೆಯಲಿ [ LO-10 ]

ಅಜ್ಜಿ ಯ ಊರಿಗೆ

ಹೋಗುವುದೆಂಥ ಮಜಾ

**25.** ಬಾಳೆಯ ತೋಟದ [ LO-10 ]
ಪಕ್ಕದ ಕಾಡೊಳು
ವಾಸಿಸುತ್ತಿದ್ದವು ಮಂಗಗಳು

VII. **ಈ ಪ್ರಶ್ನೆಗಳಿಗೆ 2/3 ವಾಕ್ಯದಲ್ಲಿ ಉತ್ತರಿಸಿ.**

**26.** ಷಟ್ಪದಿಯ ವಿವಿಧ ರೂಪಗಳನ್ನು ಹೆಸರಿಸಿ. (ಸಾದಾರಣ) [ LO-10 ]

**27.** ಕುಮಾರವ್ಯಾಸ ಬಳಸಿರುವ ಷಟ್ಪದಿಯ ರೂಪ ಯಾವುದು? (ಸಾದಾರಣ) [ LO-2 ]

**28.** 'ಲೆಪ್ಪದುರಗನ ಹಿಡಿಯಲೇತಕೆ ಗರುಡ ಮಂತ್ರವು " ಈ ವಾಕ್ಯದ ಸಾರಾಂಶವೇನು? ( ಸಾದಾರಣ) [ LO-2 ]

**29.** ನಿಮ್ಮಡಿಯಾಲಿಗಳಿಗೆ ಔತಣ ಇಕ್ಕುವೆನು ಎಂದು ಅಭಿಮನ್ಯು ಹೇಳಲು ಕಾರಣವೇನು? (ಸಾದಾರಣ) [ LO-2 ]

**30.** ವೈರಿವ್ಯೂಹದೊಳಗೆ ಇರುವ ವೀರರು ಯಾರು? (ಸಾದಾರಣ) [ LO-2 ]

**31.** ವೈರಿವ್ಯೂಹದ ಸಾಮರ್ಥ್ಯ ಎಂತಹದು ಎಂದು ಧರ್ಮರಾಯ ಹೇಳುತ್ತಾನೆ? (ಸಾದಾರಣ) [ LO-2 ]

**32.** ಅಭಿಮನ್ಯುವು ತಾನು ಯಾವುದಕ್ಕೂ ಹೆದರುವುದಿಲ್ಲ ಎಂದು ಹೇಗೆ ಉದಾಹರಿಸಿದ್ದಾನೆ? (ಸಾದಾರಣ) [ LO-2 ]

VIII. **ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**33.** ಯಮನ ಮನೆಗೆ ಯಾರನ್ನು ಕಳುಹಿಸುತ್ತೇನೆ ಎನ್ನುತ್ತಾನೆ? (ಸುಲಭ) [ LO-2 ]

**34.** ಅಭಿಮನ್ಯು ವಿಗೆ ಯಾವುದನ್ನು ಸೈರಿಸಲಾಗದು ಎಂದು ಧರ್ಮರಾಯನುಶತ್ ಹೇಳುತ್ತಾನೆ? (ಸುಲಭ) [ LO-2 ]

**35.** ಗರುಡ ಮಂತ್ರವನ್ನು ಬಳಸುವುದರ ಉದ್ದೇಶವೇನು? (ಸುಲಭ) [ LO-2 ]

**36.** ಕೊಡನ ಮಗನು ಯಾರು? (ಸುಲಭ) [ LO-2 ]

**37.** ಧರ್ಮರಾಯನ ಪಾದಗಳಿಗೆ ಇಡುವ ಔತಣ ಯಾವುದು ? (ಸುಲಭ) [ LO-2 ]

**38.** ಧರ್ಮರಾಯನು ಅಭಿಮನ್ಯುವಿಗೆ "ನಿನಗೆ ಯುಧ್ದ ಮಾಡಲು ಸಾಧ್ಯವಿಲ್ಲವೆಂದಾಗ" ಅವನ ಉತ್ತರವೇನು? (ಸುಲಭ) [ LO-2 ]

**IX.**

**39. ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಪರಿವರ್ತಿಸಿ,ಭಾಷೆಯಲ್ಲಾದ ಬದಲಾವಣೆಗಳನ್ನು ಗುರುತಿಸಿ,ಹಾಗೂ ನೀವು ಮಾತನಾಡುವ ಭಾಷೆಯಂತೆಯೇ ಸರಳೀಕರಿಸಿ. ( ಕಠಿಣ) [ LO-19]**

ಧರ್ಮರಾಯ - " ಫಲ್ಗುಣ ಇಂದಿನಾಜಿಯೊಳ್ ಕೌರವರ ಬಲವು ಮುಂದುವರಿಯುತ್ತದೆ. ಆ ಭೀಷ್ಮ ದ್ರೋಣರ್ ನೆಗಳ್ದ ಶರವೇಗಕ್ಕೆ ನಮ್ಮ ಸಾರಥ್ಯವು ತತ್ತರಿಸಿದೆ.ನಿನ್ನ ಕಡುಮೆಯ್ ಟಂಕಾರವು ಏಕೋ ಕೇಳದಾಗಿದೆ? ಶತ್ರುಗಳ ಪಡೆಯನ್ನು ಅಳಿಸದಿದ್ದರೆ ನಮಗೆ ನಮಗೆ ಈ ಜಗತ್ತಿನಲ್ಲಿ ಇಂಬು ಎಲ್ಲಿಹದು?

ನಿನ್ನ ಶೌರ್ಯವನ್ನು ಜಗದ ಜನರೆಲ್ಲ ನೋಡುವಂತೆ ಒಡರ್ಚಯ್.

ಅರ್ಜುನ -" ದೇವ ನಿಮ್ಮ ಚಿತ್ತಂ ಆತುರಗೊಳ್ಳದಿರಲಿ ನುಡಿದ ಮಾತನ್ನು ಕೈ ಬಿಡುವವನು ಈ ಕಿರೀಟಿಯಲ್ಲ ಶತ್ರು ಸೈನ್ಯವು ಎಷ್ಟೇ ದೊಡ್ಡದಾಗಿದ್ದರೂ ಇಂದಿನ ಸಮರದೊಳ್ ಎಲ್ಲವನ್ನು ತವಿಸುವೆನ್.ವಿರೋಧಗಳಿಗೆ ಬೆಕ್ಕಸವನ್ನು ಮೂಡಿಸಿ ಜಯಲಕ್ಷ್ಮಿಯನ್ನು ನಿಮ್ಮಡಿಗಳಿಗೆ ತಂದೊಪ್ಪಿಸುವೆನು ಸೈರಿಸು ಪ್ರಭು.

## X. ಕೆಳಗಿನ ಗದ್ಯವನ್ನು ಓದಿಕೊಂಡು ಪ್ರಶ್ನೆಗಳಿಗೆ ಯೋಚಿಸಿ ಉತ್ತರಿಸಿ.[ LO-16 ]



ಯಾಗಶಾಲೆಯಲ್ಲಿ ಶುಕ್ರಾಚಾರ್ಯರ ನಿರ್ದೇಶನದಂತೆ ಬಲಿ ದೀಕ್ಷಾ ಬದ್ದನಾಗಿ ಕುಳಿತಿದ್ದಾನೆ. ಮುಖದಲ್ಲಿ ತೇಜಸ್ಸನ್ನು ತುಂಬಿಕೊಂಡ ವಾಮನನ ಪ್ರವೇಶವಾಗುತ್ತದೆ. ದಾನಶೂರನಾದ ಬಲಿಯಿಂದ ಮೂರು ಹೆಜ್ಜೆ ಭೂಮಿ ಕೇಳಿ, ಒಂದು ಹೆಜ್ಜೆಯಿಂದ ಭೂಮಿಯನ್ನು, ಇನ್ನೊಂದು ಹೆಜ್ಜೆಯಿಂದ ಆಕಾಶವನ್ನು ಅಳೆದು ಮತ್ತೊಂದು ಹೆಜ್ಜೆಯನ್ನು ಬಲಿಯ ತಲೆಯ ಮೇಲೆ ಇಟ್ಟು ಪಾತಾಳಕ್ಕೆ ತಳ್ಳುತ್ತಾನೆ. ಅವನೇ ಪರಮಾತ್ಮನೆಂದು ಬಲಿಗೆ ಆಗ ತಿಳಿಯುತ್ತದೆ. ಬಲಿಯ ಪ್ರಾರ್ಥನೆಯಂತೆ ವರ್ಷಕ್ಕೊಮ್ಮೆ ಮತ್ತೆ ಈ ಭೂಮಿಗೆ ಬರುತ್ತಾನೆ. ಆ ನೆನಪಿಗಾಗಿ ಹಿಂದೂಗಳು ಹಬ್ಬದ ಆಚರಣೆ ಮಾಡುತ್ತಾರೆ. ದೀಪ ಬೆಳಗಿಸಿ ಪಟಾಕಿ ಹಚ್ಚಿ ಸಂಭ್ರಮಿಸುತ್ತಾರೆ.

ಎಂದು ಶಿಕ್ಷಕರು ವಿವರಿಸುವಾಗ ಮೇರಿಗೆ ಆಶ್ಚರ್ಯವಾಗಿ ಹೌದೆ!! ಎಂತಹ ಸಾಂಪ್ರದಾಯಿಕ ಹಿನ್ನೆಲೆ. ಪ್ರತಿಯೊಂದು ಹಬ್ಬವು ಎಲ್ಲರಿಗೂ ಪ್ರಾಮುಖ್ಯ. ನಾವೇಕೆ ? ದೀಪ ಹಚ್ಚಿ ಆಚರಿಸಬಾರದು

ಎಂದುಕೊಂಡು ತನ್ನ ಅಣ್ಣನಲ್ಲಿ ಹೇಳಿಕೊಂಡಳು. ಇಬ್ಬರು ಸೇರಿ ತಮ್ಮ ಮನೆಗೆ ದೀಪ ಹಾಗೂ ಪಟಾಕಿ ತೆಗೆದುಕೊಂಡು ಹೋದಾಗ ಅಮ್ಮನು ಇದನ್ನೆಲ್ಲಾ ನೋಡಿ ಖುಷಿಪಟ್ಟಳು. ಯಾವುದೇ ಹಬ್ಬವಾಗಲಿ ಒಳ್ಳೆಯ ಉದ್ದೇಶ, ಆಚರಣೆ, ಒಳ್ಳೆಯ ಮನಸ್ಸಿದ್ದರೆ ಆಚರಿಸಬಹುದು ಎಂದು ತಾನೂ ಸಹ ದೀಪ ಹಚ್ಚಿ ಸಂಭ್ರಮಿಸಿದರು.

**40.** ಹಬ್ಬದ ಆಚರಣೆಗೆ ಮೇರಿಯ ಅಮ್ಮ ಒಪ್ಪಿಲ್ಲದಿದ್ದರೆ ? (ಸುಲಭ) [ LO-16 ]

a) ಅಳಬೇಕು

b) ಅಮ್ಮನಿಗೆ ಅರಿವು ಮೂಡಿಸಿ ಹಬ್ಬ ಮಾಡುವುದು.

c) ಪಟಾಕಿ – ದೀಪವನ್ನು ಹಚ್ಚಬಾರದು.

d) ತಾವು ಮಾಡಿದ್ದು ತಪ್ಪೆಂದು ಭಾವಿಸಬೇಕು.

**41.** ಪ್ರತಿಯೊಂದು ಹಬ್ಬವನ್ನು ಆಚರಿಸುವುದರ ಹಿಂದಿನ ಉದ್ದೇಶವೇನು? [ LO-16 ]

**42.** . ಶರೀಫ್ ಮತ್ತು ಸುರೇಶ ಇಬ್ಬರು ಪರಸ್ಪರರ ಹಬ್ಬಗಳನ್ನು ತಮ್ಮ ಮನೆಯಲ್ಲಿ ಆಚರಿಸಬೇಕೆಂದಿದ್ದಾರೆ? ಇದಕ್ಕೆ ನಿನ್ನ ಅಭಿಪ್ರಾಯವೇನು? (ಸಾದಾರಣ) [ LO-16 ]

**43.** "ಭಾರತವು ಸರ್ವ ಜನಾಂಗದ ಶಾಂತಿಯ ತೋಟ" ಈ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ) [ LO-16 ]

# ಮಾದರಿ ಉತ್ತರಗಳು

**ಗದ್ಯಪಾಠ - 1**

**ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು**

**1.** ೧. ಅಂಕಿತನಾಮ

೨.ರೂಢನಾಮ

೩.ಅನ್ವರ್ಥನಾಮ

೪.ವಿಶೇಷಣ

೫. ಕಥೆ

೬.ಹುಲಿ, ಚಿರತೆ, ಕಾಡುಕೋಣ

೭.ಜಿಂಕೆ.

೮.ಸೊಪ್ಪು,ಸದೆ ,ಬೇರು, ತೊಗಟೆ.

೯.ಊರು ಉಳಿಯಿತು.

೧೦.ಹುಲಿಗೂ, ಯುವಕನಿಗೂ.

**2.** ಹಾಡಿನ ಮೂಲಕ ಹೇಳುವ ಕಥೆ

**3.** ಭಯ

**4.** ಕಾಡಿನಲ್ಲಿರುವ ಪ್ರಾಣಿಗಳು ನೀರನ್ನು ಕುಡಿಯಲು ಮಾಡಿಕೊಂಡಿರುವ ಕಿಂಡಿ/ ದಾರಿ

**5.** ಸಮಾಧಾನ

**6.** ಆಸರೆ

**7.** ಸಿಪ್ಪೆ

**8.** 8..ಔಷಧ

**9.** ಯಾವತ್ತಾದರೂ

**10.** ಓಡಿಹೋಗು

**11.** ಐದು

**12.** ಅವರು

**13.** ಸಿಹಿ

**14.** ನೀಡಿದರು

**15.** ತಮಾಷೆ ಕತೆ, ಪುಟಾಣಿ ಕತೆ,ಸಣ್ಣ ಕತೆ , ದೊಡ್ಡ ಕತೆ, ಹಾಡ್ಗತೆ.

**16.** ಜಿಂಕೆಯನ್ನು

**17.** ಸೊಪ್ಪು ಸದೆ, ಬೇರು, ತೊಗಟೆ ತಂದು ಮದ್ದು ಮಾಡಿ ಉಪಚರಿಸಿತು

**18.** ಗೆಜ್ಜೆ

**19.** ಪುಟ್ಟಜ್ಜಿಯ ಬಳಿ ಹುಡುಗ ಹಾಡ್ಕತೆ ಹೇಳಲು ಕೇಳಿದನು.

**20.** ತೋಟ ಮಾಡಿದನು.

**21.** ಪಲಾಯನ.

**22.** ಜಿಂಕೆ ಯುವಕನ ಮನೆಯೊಳಗೆ ಅವಿತುಕೊಂಡಿತು.

**23.** ಹಳ್ಳದ ದಂಡೆಯ ಮೇಲಿನ ಊರು ಬೆಳೆಯಿತು.

**24.** ಬೆಳೆದ ಕಾಡನ್ನು ಕತ್ತರಿಸಿ ಮನೆ ಕಟ್ಟಿದ. ಮನೆಯ ಮುಂದೆ ತೋಟ ಮಾಡಿ ತನಗೆ ಏನು ಬೇಕು ಅದನ್ನು ಬೆಳೆದುಕೊಂಡು ಅಲ್ಲಿಯೇ ಉಳಿದ.

**25.** ಹುಲಿಯು ಯುವಕನನ್ನು ಸಿಕ್ಕಲ್ಲಿ ಕಚ್ಚಿತು, ಗಾಯ ಮಾಡಿತು, ಕೊನೆಗೆ ಯುವಕ ಸೋಲಲಿಲ್ಲ. ಹುಲಿ ಸೋತು ಪಲಾಯನ ಮಾಡಿತು.

**26.** ಯುವತಿಯು ಜಿಂಕೆಯನ್ನು ಕುರಿತು ಜಿಂಕೆಯನ್ನು ನಾನು ಸಾಕಿರುವುದು. ಅದು ತಪ್ಪಿಸಿಕೊಂಡು ಕಾಡಿಗೆ ಬಂದಿದೆ.ಅದನ್ನು ಹುಲಿ ಅಟ್ಟಿಸಿಕೊಂಡು ಬಂದಿದೆ ಎಂದು ತಿಳಿಯಿತು. ಆದರೂ ಚುಕ್ಕಿ ಬದುಕಿದೆ ಎಂಬ ನಂಬಿಕೆ ಇಟ್ಟು ಹುಡುಕುತ್ತಿದ್ದೆ ಎಂದು ಹೇಳಿದಾಗ ಯುವಕನು ಜಿಂಕೆಯನ್ನು ನಾನು ಹುಲಿಯಿಂದ ರಕ್ಷಿಸಿದ್ದೇನೆ. ಅದು ನನಗೆ ಸೇರಿದ್ದು ಎಂದು ಹೇಳಿದನು. ಹೀಗೆ ಅವರ ಸಂಭಾಷಣೆ ನಡೆಯಿತು.

**27.** ಕಾಡಿನ ಬೆಂಕಿ, ದ್ವೀಪ, ಬಳುವಳಿ,ಮುಳುಗಡೆಯ ಊರಿಗೆ ಬಂದವರು ಇವು ಡಾ.ನಾಬರ್ಟ್ ಡಿಸೋಜಾ ಅವರು ಬರೆದಿರುವ ಕೃತಿಗಳು.

**28.** ಊರ ಜನರ ಪೊರೆದಿದೆ.

**29.** ಯುವತಿ ಜಿಂಕೆಯ ಮುಖಕ್ಕೆ ತನ್ನ ಮುಖ ತಾಗಿಸಿ ಅಳುತ್ತಿದ್ದಳು.

**30.** (ಮಕ್ಕಳ ಸ್ವ ರಚನೆಗೆ ಅವಕಾಶ ನೀಡಿದೆ)

**31.** ಸಣ್ಣ ಕಥೆಯು ಪುಟ್ಟದಾಗಿದ್ದು, ಸಮಯದ ಅವಧಿಯೂ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಇದರೊಳಗೆ ಕಥೆಯೊಳಗೊಂದು ಕಥೆ ಈ ರೀತಿ ಇರದೇ ಒಂದೇ ಕಥೆ ಬರುತ್ತದೆ. ಹಾಡ್ಕತೆಯು ದೀರ್ಘವಾಗಿದ್ದು, ಲಯಬದ್ಧ ಹಾಗೂ ಪ್ರಾಸಬದ್ಧವಾಗಿರುತ್ತದೆ. ಗದ್ಯರೂಪದ ಕಥೆಯೊಂದಿಗೆ ಪದ್ಯವೂ ಇರುತ್ತದೆ. ಕಥೆಯ ವರ್ಣನೆಯು ಪದಗಳ ಚಮತ್ಕಾರದಿಂದ ಕೂಡಿರುತ್ತದೆ. ಕೇಳಲು ಹಿತವಾಗಿರುತ್ತದೆ.

**32.** ವ್ಯಕ್ತಿಗಳ ಹೆಸರು-ಪುಟ್ಟಜ್ಜಿ,ಚುಕ್ಕಿ.
ಪ್ರಾಣಿ ಗಳ ಹೆಸರು-ಹುಲಿ, ಚಿರತೆ, ಕಾಡುಕೋಣ, ಆನೆ.

**33.** ಸಾಕುಪ್ರಾಣಿಗಳು ವ್ಯವಹಾರ ಹಾಗೂ ಪ್ರೀತಿಯ ಉದ್ದೇಶದಿಂದ ಮನೆಗಳಲ್ಲಿ ಸಾಕುವಂತಹವು. ಇವುಗಳು ಸಾಧು ಸ್ವಭಾವದಿಂದ ಕೂಡಿದ್ದು, ಮನುಷ್ಯರಿಗೆ ಸಾಮಾನ್ಯವಾಗಿ ಯಾವುದೇ ಹಾನಿ ಉಂಟು ಮಾಡುವುದಿಲ್ಲ.

**34.** ಕಾಡು ಪ್ರಾಣಿಗಳು ಕಾಡಿನಲ್ಲಿ ವಾಸಿಸುತ್ತಿರುತ್ತವೆ ಹಾಗೂ ಕ್ರೂರ ಭಾವನೆಯನ್ನು ಮೂಡಿಸುತ್ತವೆ.

**35.** ಯುವಕನು ಕಾಡುಪ್ರಾಣಿಗಳ ಸುದ್ದಿಗೆ ಹೋಗುತ್ತಿರಲಿಲ್ಲ.ಅವು ಇವನ ಸುದ್ದಿಗೆ ಬರುತ್ತಿರಲಿಲ್ಲ.ಇಬ್ಬರು ಅವರವರ ಪಾಡಿಗೆ ಸುಖವಾಗಿದ್ದರು.ಯುವಕನ ಮನೆ ಹತ್ತಿರವೇ ಪ್ರಾಣಿ ಗಿಂಡಿ ಇದ್ದು,ಅಲ್ಲಿಗೆ ಕಾಡು ಪ್ರಾಣಿಗಳು ಬಂದು ನೀರು ಕುಡಿದು ಹೋಗುವಷ್ಟು ನಿರ್ಭಯವಾದ ವಾತಾವರಣವಿತ್ತು.

**36.** ಕಥೆಯ ಸ್ವರಭಾರ ಮತ್ತು ಏರಿಳಿತಗಳನ್ನು ಗಮನಿಸುವುದು.

**37.** ಶಿಕ್ಷಕರು ಮಗುವಿನ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು.

**38.** ಹುಡುಗ ಪುಟ್ಟಜ್ಜಿಯನ್ನು ಕೇಳಿತು.

**39.** ಹುಲಿಯು ಯುವಕನಿಗೆ ಹೇಳಿದ ಮಾತು.

**40.** ಯುವತಿಯು ಯುವಕನಿಗೆ ಹೇಳಿದ ಮಾತು.

**41.** ಯುವತಿಯು ಯುವಕನಿಗೆ ಹೇಳಿದ ಮಾತು.

**42.** ಪುಟ್ಟ, ನೀರಿನಲ್ಲಿ, ಪ್ರಾಣ, ಪಾರಿವಾಳ, ಕಡ್ಡಿಗಳನ್ನು, ಇರುವೆ, ದಡ, ಇರುವೆ, ಪಾರಿವಾಳ

**43.** ರಿಂದ 46

ದೊಡ್ಡ, ಜಾಣೆ, ಕೆಂಪು,
ಅಂಗಿ

ಆ. 47 ರಿಂದ 50

ಏಳು, ಹತ್ತು, ಎಂಟು,
ನಾಲ್ಕು ಸಾವಿರ

51. ಪೂರ್ವ
52. ಪಶ್ಚಿಮ
53. ದಕ್ಷಿಣ
54. ಉತ್ತರ
55. ಮಗುವಿನ ಬರೆವಣಿಗೆಯನ್ನು ಪರಿಗಣಿಸುವುದು.

**56.** ಸಣ್ಣ ಕಥೆ, ದೊಡ್ಡ ಕಥೆ, ಹಾಡ್ಗತೆ, ಇತ್ಯಾದಿ,ಹಾಗೂ ಅವರ ಉತ್ತರವನ್ನು ಪರಿಶೀಲಿಸುವುದು.

.*** ***

## ಗದ್ಯಪಾಠ -2

## ಸೀನಸೆಟ್ಟರು ನಮ್ಮ ಟೀಚರು

1. ಮಾಂಡವಿ ಟೀಚರ್
2. ನಮ್ಮ
3. ಚೆನ್ನಾಗಿ, ತೆರಿಗೆ
4. ಸಾಸಿವೆ
5. ಕಾಳು ತುಂಬುವ ಮೊದಲು ಕಾಣುವ ಪೈರಿನ ತುದಿ
6. ತುಂಗಾ
7. ಮೇಲಿನ ಎಲ್ಲವೂ
8. ತಲೆಗೆ ಸುತ್ತಿರುವ ರುಮಾಲು ಅಥವಾ ಬಟ್ಟೆ
9. ಅಮ್ಮ ಅಂಗಡಿಗೆ ಹೊರಟರು,ಅವರು ಒಂದು ಚೀಲವನ್ನು ಹಿಡಿದಿದ್ದರು
10. ಬಂದನು

    ಚೆಲ್ಲಿದನು

    ಏಳೋಣ

    ಓದೋಣ

11. ಭ್ರಮೆ
12. ತಪ್ಪು

13. ಗ್ರಾಮೀಣ ಭಾಗದ ಬಹುಪಾಲು ಮಂದಿ ಕೃಷಿಕರೇ ಆಗಿದ್ದಾರೆ.
14. ನಾವು ತಿನ್ನುವ ಆಹಾರ ನಮ್ಮ ಬದುಕು ನಿಂತಿರುವುದೇ ಈ ಮಣ್ಣಿನಿಂದ ,ಉಡುವ ಬಟ್ಟೆ ತೊಡುವ ಬಂಗಾರದ ಮೂಲವೆಲ್ಲಾ ಮಣ್ಣಿನಿಂದಲೇ ಆಗಿರುತ್ತದೆ,ಅಂದರೆ ಬೆಳೆ ಬೆಳೆದು ದೇಶ ಸಂಪದ್ಭರಿತವಾಗಿದ್ದರೆ ಜನರ ಬದುಕು ಹಸನಾಗಿರುತ್ತದೆ. ನಮ್ಮ ಸುತ್ತಲಿನ ಬೆಟ್ಟ ಪರಿಸರ ಎಲ್ಲವು ಸಹ ಮಣ್ಣೆ ಆಗಿರುತ್ತದೆ.ಅಷ್ಟೇ ಅಲ್ಲ ನಾವು ನಂಬಿರುವ ಭಗವಂತನ ವಾಸವೂ ಸಹ ಮಣ್ಣಿನಿಂದ ಆಗಿದೆ. ಹಾಗಾಗಿ ನಾವು ಮಣ್ಣಿಗೆ ಋಣಿಯಾಗಿರಬೇಕು.

15. ಟೀಚರ್ ಮಕ್ಕಳಿಗೆ ಸೀನಸೆಟ್ಟರನ್ನು ಪರಿಚಯಿಸಿದರು.
16. ಸೀನಸೆಟ್ಟರು ತಮ್ಮ ಜಮೀನಿನಲ್ಲಿ ಸಾಸಿವೆ ಬೆಳೆಯುತ್ತಿದ್ದರು
17. ಮಕ್ಕಳು ಕಂಬಳಿಗೊಪ್ಪೆ ಹಾಕಿಕೊಂಡು ಗದ್ದೆಗೆ ಇಳಿದರು.
18. ಹಾಲಪ್ಪನ ಕಾಲನ್ನು ನೀರಾವು ಕಚ್ಚಿತು.
19. ಮನೆಯ ಅಟ್ಟ ಮಕ್ಕಳಿಗೆ 'ಗದ್ದೆಯನ್ನು ವೀಕ್ಷಣೆ ಮಾಡುವ ಟವರ್' ಆಗಿ ಪರಿವರ್ತಿತಗೊಂಡಿತು.
20. ಸೀನಸೆಟ್ಟರ ಅವರ ವೇಷಭೂಷಣವನ್ನು ನೋಡಿದಾಗ ಮಕ್ಕಳಿಗೆ “ಇವರೆಂಥ ಟೀಚರಪ್ಪ” ಎಂದೆನಿಸಿ ಕುತೂಹಲವೂ ನಿರಾಸೆಯೂ ಆಯಿತು.

**21.** “ತುಂಗಾಳನ್ನು ನೋಡಿ”ಎಂತಾ ಮಗಾ ಆರಾಮ, ಅವ್ವ ಅಪ್ಪಯ್ಯ ಚಂದ ಅದಾರ ಎಂದು ಆತ್ಮೀಯದಿಂದ ಮಾತಾಡಿಸಿದರು.

**22.** ಈಗಾಗಲೇ ಚೆನ್ನಾಗಿ ನೀರಿನಲ್ಲಿ ನೆನೆದ ನೆಲಕ್ಕೆ “ಅನೇಕ ಸಸಿಗಳನ್ನು ಒಟ್ಟಿಗೆ ಹಿಡಿದು ಒಂದೇ ಸಲಕ್ಕೆ ಬೇರು ನಾಟುವಂತೆ ಹೆಬ್ಬೆಟ್ಟಿನಿಂದ ಗಟ್ಟಿಯಾಗಿ ಒತ್ತಿ ಊರಬೇಕು ಈ ಪ್ರಕ್ರಿಯೆಯನ್ನು ನಾಟಿ ಎನ್ನವರು.

**23.** ಶಾಲಾ ಶಿಕ್ಷಣ ನಿಜ ಬದುಕಿನ ಜೊತೆಗೆ ಸಂಬಂಧ ಹೊಂದಿರಬೇಕೆಂಬುದೇ ಮಾಂಡವಿ ಟೀಚರ್ ನ ಉದ್ದೇಶವಾಗಿತ್ತು.

**24.** ಸೀನಸೆಟ್ಟರು ಪಾಠವನ್ನು ’ತುಂಗಾ’ ಕೃತಿಯಿಂದ ಆರಿಸಲಾಗಿದೆ.

**25.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ **ಅವಕಾ**ಶ ನೀಡುವುದು**.** ಹಾಗೂ ದೃಶ್ಯಾವಳಿ ವೀಕ್ಷಿಸಲು ಅವಕಾಶಿಸುವುದು.

**26.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು**.**

**27.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶನೀಡುವುದು**.**

**28.** ಉತ್ತಮ ಪುರುಷ- ನಾವು

ಪ್ರಥಮ ಪುರುಷ- ನೀನು, ನೀವು

ಮಧ್ಯಮ ಪುರುಷ- ಅವರು, ಇವರು, ಅವನು, ಅದು, ಇವಳು

**29.** ಇದು ಗ್ರಾಮೀಣ ಪ್ರದೇಶದ ಚಿತ್ರ. ಗ್ರಾಮೀಣ ಪ್ರದೇಶಗಳ ಮನೆಗಳು, ವ್ಯವಸಾಯಕ್ಕೆ ಪೂರಕವಾಗಿ ಧವಸ ಧಾನ್ಯಗಳನ್ನು ಹೊತ್ತಎತ್ತಿನಗಾಡಿಗಳು, ಗ್ರಾಮೀಣ ಪ್ರದೇಶದ ಹೆಣ್ಣು ಮಗಳು, ಗ್ರಾಮೀಣ ಪ್ರದೇಶದ ಸಾಕು ಪ್ರಾಣಿಗಳು, ಮುಂತಾದುವುಗಳನ್ನು ಚಿತ್ರದಲ್ಲಿ ಗಮನಿಸಬಹುದು.
(ಮಾದರಿಯಂತೆ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು)

**30.** ವಿದ್ಯಾರ್ಥಿಗಳ ಅಭಿವ್ಯಕಿ ಅವಕಾಶ ನೀಡುವುದು**.**

**31.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

**32.** ರೈತ ಅನ್ನದಾತ, ನಮಗೆಲ್ಲ ಉಪಕಾರಿ. ರೈತ ಕಷ್ಟಪಟ್ಟು ಬೇಸಾಯ ಮಾಡಿ ಬೆಳೆ ಬೆಳೆಯದಿದ್ದರೆ ನಮಗೆಲ್ಲ ಆಹಾರವಿಲ್ಲದೆ ಜೀವನ ನಿರ್ವಹಣೆ ಬಹಳ ಕಷ್ಟ ಆಗುತ್ತದೆ. ವ್ಯವಸಾಯ ಮಳೆಯೊಡನಾಡುವ ಜೂಜಾಟ ವಾಗಿದ್ದರೂ ರೈತ ಅದನ್ನೆಲ್ಲ ಸಹಿಸಿಕೊಂಡು ನಮಗೆಲ್ಲ ಅನ್ನ ನೀಡುವ ಅನ್ನದಾತನಾಗಿದ್ದಾನೆ. ಅಂತಹ ಅನ್ನದಾತನನ್ನು ನಾವೆಲ್ಲ ಗೌರವಿಸಬೇಕು.
(ಮಾದರಿಯಂತೆ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು)

**33.** ಸೀನಸೆಟ್ಟರು ತಲೆಗೆ ಲಪ್ಪಟೆ ಸುತ್ತಿಕೊಂಡು, ತುಂಬಾ ಹಳೆಯದಾದ ಒಗೆದ ಪಂಚೆಯೊಮದನ್ನು ಸುತ್ತಿಕೊಂಡಿದ್ದರು,ಒಗೆದ ಚೌಕುಳಿ ಅಂಗಿಯನ್ನು ಹಾಕಿಕೊಂಡಿದ್ದರು.

**34.** “ಹೆದರ್ಬೇಡ ಮಗಾ ಎಂತಾ ಆಗಲ್ಲ ಅದು ನೀರಾವು ವಿಷದ ಹಾವಲ್ಲ ,ಒಂದು ಮೀನು ಕಚ್ಚಿದ್ರೆ ಹೆಂಗೋ  ಅಷ್ಟೇ” ಎಂದು ಹೇಳಿ ಸಮಾಧಾನಿಸಿದರು.

**35.** ಮೊದಮೊದಲು ಮಕ್ಕಳಿಗೆ ಹಿಡಿ ತುಂಬಾ ಸಸಿಗಳನ್ನು  ಬುಡಸಮೇತ ಕೀಳುವುದು ಸುಲಭವಾಗಲಿಲ್ಲ,ಅನೇಕ ಸಸಿಗಳನ್ನು ಹಾಳು ಮಾಡಿದರು ಹತ್ತಾರು ಬಾರಿ ಕಿತ್ತು ಕಿತ್ತು ಪ್ರಯತ್ನಿಸಿದ ನಂತರ ಕೀಳುವುದು ಸರಾಗವಾಗಿ ಸಸಿಗಳನ್ನು ಕಿತ್ತರು .

**36.** ಮಕ್ಕಳು ಕುಟುಂಬದೊಂದಿಗೆ ವ್ಯವಸಾಯದಲ್ಲಿ ಪಾಲ್ಗೊಳ್ಳುತ್ತಿದ್ದರೂ ಸಹ ಅವರಿಗೆ ಸಿಗುತಿ            ಎರಡನೇ ಸ್ಥಾನ ಸೀಮಿತ ಒಳಗೊಳ್ಳುವಿಕೆ.ಸಣ್ಣ ಪುಟ್ಟ ಕೆಲಸದಲ್ಲಿ ಸಹಾಯಕರಾಗುವುದು ಅಷ್ಟೇ ,ಆದರೆ ಇಲ್ಲಿ ಬೇಸಾಯದ ಎಲ್ಲಾ ಹಂತಗಳಲ್ಲೂ ಎಲ್ಲಾ ಕೆಲಸಗಳನ್ನು ಜವಾಬ್ದಾರಿಗಳನ್ನು  ಸ್ವತಃ    ತಾವೇ ಮಾಡಬೇಕಾದ್ದರಿಂದ ಸೀನಸೆಟ್ಟರ ಕೃಷಿಯ ಪಾಠಕ್ಕೆ ಮಕ್ಕಳು ಸಂಭ್ರಮಿಸಿದರು.

**37.** ಮಾಂಡವಿ ಟೀಚರ್ ಮಕ್ಕಳ ಬೇಸಾಯಕ್ಕೆಂದೇ ಹಳ್ಳದ ಬದಿಯ ಎರಡೆಕರೆ ಜಮೀನನ್ನು ಖರೀದಿಸಿದ್ದರು ಹಾಗೂ ಮನೆಯ ಮುಂದುಗಡೆಯ ಒಂದು ರೂಮನ್ನು ಮಕ್ಕಳಿಗೆ ಬೇಸಾಯದ ಸಾಮಗ್ರಿಗಳನ್ನು ಇಟ್ಟುಕೊಳ್ಳಲೆಂದು ಸ್ವಚ್ಛ ಮಾಡಿ ತಯಾರಿ ಮಾಡಿದ್ದರು.

**38.** ಮಕ್ಕಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡುವುದು.

**39.**  ರಾವಣನು ಸೀತೆಯನ್ನು ಅಪಹರಿಸಿದನು

**40.**   .ಧರ್ಮ ಮತ್ತು  ನ್ಯಾಯಕ್ಕಾಗಿ ಶಕ್ತಿಯ ಬಳಕೆ ಆಗಲೇಬೇಕು ಆಗ ಯುದ್ಧ ಅನಿವಾರ್ಯವಾಗುತ್ತದೆ.

**41.**  ಮಕ್ಕಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸಿವುದು.

**42.** ಈ ಮಾತನ್ನು ತುಂಗಾ ಸೀನಸೆಟ್ಟರಿಗೆ ಹೇಳಿದಳು.

**43.** ಈ ಮಾತನ್ನು ಸೀನಸೆಟ್ಟರು ಮಕ್ಕಳಿಗೆ ಹೇಳಿದರು

**44.** ಈ ಮಾತನ್ನು ಮಕ್ಕಳು ಸೀನಸೆಟ್ಟರಿಗೆ ಹೇಳಿದರು.

**45.** ಈ ಮಾತನ್ನು ಯಶೋಧ ಉಳಿದ ಮಕ್ಕಳಿಗೆ ಹೇಳಿದಳು.

**46.** ಈ ಮಾತನ್ನು ಸೀನಸೆಟ್ಟರು ತುಂಗಾಳಿಗೆ ಹೇಳಿದರು.

**47.** ಅವಳು

**48.** ಅದು

**49.** ಅವರು

**50.** ನಾನು

**51.** ನಮ್ಮ

**52.** ತನ್ನ

**53.** ಉತ್ತರ ಕರ್ನಾಟಕ

**54.** ಮೈಸೂರು ಕರ್ನಾಟಕ

**55.** ಮಂಗಳರು ಕರ್ನಾಟಕ

**56.** ಮಕ್ಕಳು ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**57.** ಮಕ್ಕಳು ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**** **** ****

## ಗದ್ಯಪಾಠ -3

## ಹಿಲ್ಟನ್ ಹೆಡ್ ಚಳವಳಿ (ಉತ್ತರಗಳು)

**I.**

1. "ಹಿಲ್ಟನ್ ಹೆಡ್ ಚಳುವಳಿ" - ಈ ಗದ್ಯಭಾಗವನ್ನು ಬರೆದವರು ಶಶಿಧರ ವಿಶ್ವಾಮಿತ್ರ.
2. ಲೇಖಕರು 1986ರಲ್ಲಿ ಅಮೆರಿಕಾಗೆ ಹೋಗಿದ್ದರು.
3. ಹಿಲ್ಟನ್ ಹೆಡ್ ದ್ವೀಪ ಅಟ್ಲಾಂಟಿಕ್ ಸಾಗರದಲ್ಲಿದೆ.
4. ಅಮೆರಿಕದಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳನ್ನು ಸ್ಥಳೀಯ ಅಮೆರಿಂಡಿಯನ್ಸ್ ಎನ್ನುತ್ತಾರೆ.
5. ಶಶಿಧರ ವಿಶ್ವಾಮಿತ್ರರ ಮುಖ್ಯವಾದ ಕೃತಿಗಳು - ಖಿಲ, ಪದ ಕುಸಿಯೆ ನೆಲವಿಹುದೆ, ಹಿಂದೂ ಧರ್ಮ, ಸೃಷ್ಟಿಯ ರಂಗವಲ್ಲಿ.
6. ಅಮೆರಿಕವನ್ನು ಸಾಹುಕಾರರ ನಾಡು ಎಂದು ಕರೆಯುತ್ತಿದ್ದರು.
7. ಹಿಲ್ಟನ್ ಹೆಡ್ ನಲ್ಲಿ ಬಂದಿಳಿಯುವ ಶ್ರೀಮಂತರು ಬೂಟು, ಚೆಡ್ಡಿ, ಟೀಶರ್ಟ್, ಕೂಲಿಂಗ್ ಗ್ಲಾಸ್, ಸ್ಕಲ್ ಕ್ಯಾಪ್ ಧರಿಸುತ್ತಿದ್ದರು.
8. ಹಿಲ್ಟನ್ ಹೆಡ್ ದ್ವೀಪದಲ್ಲಿ ಗಾಲ್ಫ್, ಬೋಟಿಂಗ್ ಗಳನ್ನು ಆಯೋಜಿಸಲಾಗುತ್ತಿತ್ತು.
9. ಶಶಿಧರ ವಿಶ್ವಾಮಿತ್ರರ ಆತ್ಮಕಥೆ ಸಂಚಿ.
10. ಗಾಲ್ಫ್ ಆಟವನ್ನು ಶ್ರೀಮಂತರ ಆಟವೆಂದು ಕರೆಯಲಾಗುತ್ತದೆ.
11. ಕಡಲ ತಡಿಯ ಲೈಟ್ ಹೌಸನ್ನೇರಿದರೆ ಅಟ್ಲಾಂಟಿಕ್ ಮಹಾಸಾಗರ, ನೌಕೆಗಳು, ಕಡಲಕಾಗೆಗಳು ಕಾಣಿಸುತ್ತದೆ.
12. ಹಿಲ್ಟನ್ ಹೆಡ್ ನಲ್ಲಿರುವ ಸ್ಮಾರಕ ಲಿಬರ್ಟಿ ಓಕ್ ಮರ.
13. ಓಕ್ ಮರದ ಬಳಿ ಜನರು ಪರಿಸರ ಸಂರಕ್ಷಣೆಗೆ ಒಗ್ಗೂಡಿದ್ದರು.
14. ಹಿಲ್ಟನ್ ಹೆಡ್ ದ್ವೀಪದಲ್ಲಿ ಬೋಟಿಂಗ್ ಹಾಗೂ ವಿವಿಧ ರೀತಿಯ ಕ್ರೀಡಾ ವಿನೋದಗಳನ್ನು ಆಯೋಜಿಸಲಾಗುತ್ತಿತ್ತು.

II.

15. ಲಕ್ಸುರಿ – ವಿಲಾಸಿ
16. ಲಿಬರ್ಟಿ – ಸ್ವಾತಂತ್ರ್ಯ
17. ಐಡಿಯಾ – ಉಪಾಯ
18. ಸೀಬೀಚ್ - ಸಮುದ್ರ ತೀರ
19. ಇಂಜಿನಿಯರಿಂಗ್ -ಅಭಿಯಂತರ
20. ಗಾಲ್ಫ್ ಕೋರ್ಸ್ - ಗಾಲ್ಫ್ ಆಟದ ಅಂಗಣ
21. ಸ್ಟೇ ಹೋಂ - ಪ್ರವಾಸಿ ಮಂದಿರ
22. ಸ್ಕಲ್ ಕ್ಯಾಪ್ - ತಲೆಗೆ ಹಾಕಿಕೊಳ್ಳುವ ಟೋಪಿ
23. ಪ್ರೆಸಿಡೆಂಟ್-ಅಧ್ಯಕ್ಷ

III.

**24.** ಆಗಮನ × ನಿರ್ಗಮನ

**25.** ಸುಂದರ × ಕುರೂಪ

**26.** ಲಾಭ × ನಷ್ಟ

**27.** ಚುರುಕು × ಮಂದ

**28.** ಪುರಾತನ× ನವೀನ

**29.** ಪ್ರಸಿದ್ಧ× ಸಾಮಾನ್ಯ

**30.** ಸಾಧಾರಣ× ಶ್ರೇಷ್ಠ

**31.** ಆಸಕ್ತಿ × ನಿರಾಸಕ್ತಿ

IV.

**32.** ಪಚ್ಚೆ – ಹಸಿರು

**33.** ಬಡ್ಡೆ – ಬೇರು

**34.** ಪರ್ಯಾವರಣ - ಪರಿಸರ

**35.** ಅಭಿಯಂತರ - ಇಂಜಿನಿಯರ್

**36.** ಧೂಳಿಪಟ - ಸಂಪೂರ್ಣ ನಾಶ

**37.** ಪುರಾಭಿವೃದ್ಧಿ -ನಗರದ ಅಭಿವೃದ್ಧಿ

**38.** ಆಹುಟ- ಉಪಟಳ

**39.** ಅತಿಕ್ರಮಣ -ಅಕ್ರಮವಾಗಿ ವಶಪಡಿಸಿಕೊಳ್ಳುವುದು

V.

**40.** ನೆಲದಲ್ಲಾಳಿಗೆ

**41.** ಓಕ್

**42.** ವಿವಾಹ

**43.** ಐವತ್ತರ

**44.** ಧೂಳಿಪಟ

**45.** ಪೂರ್ವ

**46.** ನ್ಯಾಯಾಲಯ

**47.** ಅಭಿಯಂತರ

**48.** ಮಂತ್ರಾಲೋಚನೆ

**49.** ನಂದನವನ

VI.

**50.** ಯುರೋಪಿಯನ್ನರು ಬಂದ ಮೇಲೆ ಹಿಲ್ಟನ್ ಹೆಡ್ ನಲ್ಲಿ ಪ್ರಾಕೃತಿಕ ಸೌಂದರ್ಯ ಅಳಿಸಿ ಹೋಯಿತು. ಆ ಸ್ಥಳದಲ್ಲಿ ಸೀಬೀಚ್ ಹೋಟೆಲ್ ಗಳು, ಸ್ಟೇಹೋಂಗಳು, ಗಾಲ್ಫ್ ಕೋರ್ಸುಗಳು ನಿರ್ಮಾಣವಾದವು.

**51.** ಲಕ್ಸುರಿ , ಲಿಬರ್ಟಿ, ಐಡಿಯಾ, ಸೀಬೀಚ್ , ಕೋರ್ಟ್, ಬೋಟ್, ಪ್ಲೇನ್ , ಸ್ಟ್ಯಾಚ್ಯೂ.

**52.** ಹಿಲ್ಟನ್ ಹೆಡ್ ಮೊದಲು ಒಂದು ಸುಂದರ ದ್ವೀಪವಾಗಿತ್ತು. ಅಲ್ಲಿ ಪುರಾತನ ಸಸ್ಯ ಸಂಪತ್ತು, ಹಳೆ ಕಾಲದ ಹೊಂಡಗಳು, ಹಿನ್ನೀರಿನ ಕೋವುಗಳು, ಕಡಲ ತೀರದ ಸಸ್ಯಗಳು ಮತ್ತು ಕಾಡಿನ ಮರಗಳು ಇದ್ದವು.

**53.** ಹಿಲ್ಟನ್ ಹೆಡ್ ನ ಸ್ಮಾರಕ ಹಳೆಯ ಓಕ್ ಮರ ಇದನ್ನು ಲಿಬರ್ಟಿ ಓಕ್ ಮರ ಎಂದು ಗುರುತಿಸಲಾಗುತ್ತದೆ. ಐವತ್ತರ ದಶಕದಲ್ಲಿ ಪರಿಸರ ರಕ್ಷಣೆಗಾಗಿ ಜನ ಈ ಮರದ ಕೆಳಗೆ ಒಗ್ಗೂಡಿ ಪಣತೊಟ್ಟಿದ್ದರು. “ಇದು ಸಂರಕ್ಷಿತ ಜಾಗ, ದಯವಿಟ್ಟು ಕಟಕಟೆಯ ಒಳಗೆ ಪ್ರವೇಶಿಸಬೇಡಿ” ಎನ್ನುವ ಫಲಕವನ್ನು ನೆಟ್ಟಿದ್ದರು. ಹೀಗೆ ಆ ಮರ ನೂರು ಕಾಲ ಬಾಳುವಂತೆ ರಕ್ಷಿತವಾಗಿತ್ತು ನಂತರದ ಕಾಲದಲ್ಲಿ ಈ ಮರದ ಪ್ರಸಿದ್ದಿ ಎಲ್ಲೆಡೆ ಹರಡಿ ಇದರ ಸಾನಿಧ್ಯವನ್ನು ಕಂಡು ಮರಳಿದ ಜನ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರ್ಯಾವರಣದ ರಕ್ಷಣೆಯಲ್ಲಿ ಚುರುಕುಗೊಂಡರು.

**54.** ಹಿಲ್ಟನ್ ಹೆಡ್ ದ್ವೀಪದಲ್ಲಿ ಸೀ ಬೀಚ್ ಹೋಟೆಲ್ ಗಳು , ಸ್ಟೇ ಹೋಂಗಳು, ಗಾಲ್ಫ್ ಕೋರ್ಸ್ ಗಳು, ರೆಸಾರ್ಟುಗಳು ಹೀಗೆ ಹಲವಾರು ಕಟ್ಟಡಗಳು ನಿರ್ಮಾಣಗೊಂಡವು. ಈ ಕಟ್ಟಡಗಳ ಜೊತೆಗೆ ರಸ್ತೆಗಳು ಸೇತುವೆಗಳು ಕೂಡ ನಿರ್ಮಾಣಗೊಂಡವು.

**55.** ಪುರಾತನ ಸಸ್ಯಗಳು ಹಳೆಯ ಕಾಲದ ಹೊಂಡಗಳು ಹಿನ್ನೀರಿನ ಕೋವುಗಳೂ ಕಡಲ ತೀರದ ಸಸ್ಯಗಳು ಮತ್ತು ಕಾಡಿನ ಮರಗಳನ್ನು ಕಡಿದು ರೆಸಾರ್ಟ್ ಹೋಟೆಲ್ ಇತ್ಯಾದಿ ಮಾಡುವುದನ್ನು ಪರಿಸರ ಅಭಿಮಾನಿಗಳು ವಿರೋಧಿಸಿ ಚಳುವಳಿ ಆರಂಭಿಸಿದರು. ದುಡ್ಡು ಮತ್ತು ದೌಲತ್ತುಗಳಿಂದ ಪರ್ಯಾವರಣದ ಚಳುವಳಿಗೆ ಮೊದಲು ನೆಲದಲ್ಲಾಳಿ ಹಾಗೂ ಅಭಿಯಂತರರು ಆಸಕ್ತಿ ತೋರಿ ತಾವು ಈ ಚಳುವಳಿಯಲ್ಲಿ ಸೇರಿಕೊಂಡರು. ಚಳುವಳಿ ಕೊನೆಗೆ ಯಶಸ್ವಿಯಾಯಿತು.

**56.** ಮಾದರಿಯಂತೆ ವಿದ್ಯಾರ್ಥಿಗಳ ಅಭಿಪ್ರಾಯಕ್ಕೆ ಅಂಕ ನೀಡುವುದು.

1.ಭರಾಟೆ: ಈಗ ಎಲ್ಲ ಕಡೆ ಹಣದುಬ್ಬರದ ಭರಾಟೆ ನಡೆದಿದೆ.

2.ಸುಧಾರಣೆ: ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಮಾಡಬೇಕೆಂದು ಜನ ಬಯಸುತ್ತಾರೆ.

3. ಸಾರ್ವಭೌಮ : ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಬೇಕು.

4. ದೌಲತ್ತು: ಶ್ರೀಮಂತರು ದೌಲತ್ತು ತೋರಿಸದೆ ಬಡವರಿಗೆ ನೆರವಾಗಬೇಕು.

5. ಹೊಯ್ದಾಟ: ರಮೇಶನಿಗೆ ಸರಿಯಾದ ಉತ್ತರ ತಿಳಿಯದೆ ಮನಸ್ಸಿನಲ್ಲಿ ಬಹಳ ಹೊಯ್ದಾಟವಾಯಿತು.

6. ಪಣತೊಡು: ದುರ್ಯೋಧನನು ಪಾಂಡವರನ್ನು ಸೋಲಿಸಲು ಪಣತೊಡುವುದಾಗಿ ಹೇಳಿದನು.

7. ಅಭಿಮಾನಿ: ಸ್ವಾಮೀಜಿಗಳಿಗೆ ಬಹಳ ಜನ ಅಭಿಮಾನಿಗಳಿದ್ದಾರೆ.

**57.** ಇರುವೆಯು -ಉ-ಪ್ರಥಮ

ಗೂಡಿನಲ್ಲಿ-ಅಲ್ಲಿ-ಸಪ್ತಮಿ

ಗೂಡಿಗೆ -ಗೆ-ಚತುರ್ಥಿ

**58.** ವಿದ್ಯಾರ್ಥಿಗಳು ಪಟ್ಟಿ ಮಾಡುವಂತೆ ಕಾರ್ಯ ನೀಡುವುದು.

**59.** ಹೆಸರು:-ಶಶಿಧರ ಮಿತ್ರಾ ಸ್ಥಳ:-ಮೈಸೂರು ಕಾಲ:-೧೯೪೦ ಕೃತಿಗಳು:- ಖಿಲ, ಪದ ಕಸಿಯೇ ನೆಲವಿವಹುದೇ, ಹಿಂದೂ ಧರ್ಮ, ಸೃಷ್ಟಿಯ ರಂಗವಲ್ಲಿ, ಸಂಚಿ (ಆತ್ಮಕಥೆ)

**60.**

| ಕ್ರಮ ಸಂ | ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮ ಪ್ರಕೃತಿಗೆ ವಿಭಕ್ತಿ ಪ್ರತ್ಯಯ ಸೇರಿದಾಗ |
|---|---|---|---|
| ೧ | ಪ್ರಥಮ | ಉ | ರಾಣಿಯು |
| ೨ | ದ್ವಿತೀಯ | ಅನ್ನು | ರಾಣಿಯನ್ನು |
| ೩ | ತೃತೀಯ | ಇಂದ | ರಾಣಿಯಿಂದ |
| ೪ | ಚತುರ್ಥಿ | ಗೆ\|ಕೆ | ರಾಣಿಗೆ |
| ೫ | ಪಂಚಮಿ | ದೆಸೆಯಿಂದ | ರಾಣಿಯ ದೆಸೆಯಿಂದ |
| ೬ | ಷಷ್ಠಿ | ಅ | ರಾಣಿಯ |
| ೭ | ಸಪ್ತಮಿ | ಅಲ್ಲಿ | ರಾಣಿಯಲ್ಲಿ |

**61.** .ಅರಣ್ಯ

**62.** ಅರಣ್ಯ

**63.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

**64.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

**65.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

**66.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

**67.** ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡುವುದು.

***** *** ****

**ಗದ್ಯಪಾಠ – 4**

**ಮೈಲಾರ ಮಹದೇವ (ಉತ್ತರಗಳು)**

**I.**

**1.** ೧.ಉಪ್ಪಿನ ಸತ್ಯಾಗ್ರಹ

೨.ನೂಲು

೩. ಪ್ರಕೃತಿ ಚಿಕಿತ್ಸೆ.

೪ಸೆರೆಮನೆ.

೫.ಮೈಲಾರ ಮಹಾದೇವರ ಹುಟ್ಟೂರು

೬. ಅಸಹಕಾರ ಚಳುವಳಿ

೭.ಮೈಲಾರ ಮಹಾದೇವರ ಹೆಂಡತಿ

೮.ಗುಜರಾತ್

**II.**

**2.** ಮನೆ-ದೊಡ್ಡ

**3.** ಓದು – ತುಂಬಾ ಚೆನ್ನಾಗಿ

**4.** ಸುಂದರ – ಬಹಳ

**5.** ನಕ್ಷತ್ರ – ಮಿನುಗು

**III.**

**6.** ಬ್ಯಾಂಕ್

**7.** ಕಪ್ಪು

**8.** ಯಾತ್ರೆ.

**9.** ಶ್ರೀಲಂಕಾ

**10.** ಪಿ.ವಿ. ಸಿಂಧೂ,

**IV.**

**11.** ಮೋಟೆಬೆನ್ನೂರು ಎಂಬ ಹಳ್ಳಿ ಹಾವೇರಿ ಜಿಲ್ಲೆಯಲ್ಲಿದೆ.

**12.** ಖಾದಿ ಬಟ್ಟೆಗಳ , ವಿಚಾರ ಯಾವಾಗಲೂ ಮೈಲಾರರ ಮನಸ್ಸಿನಲ್ಲಿ ಗುನುಗುಡುತ್ತಿತ್ತು

**13.** ಮಹಾದೇವನಿಗೆ ಗಾಂಧಿಯವರೊಡನೆ ಸಬರಮತಿ ಆಶ್ರಮದಲ್ಲಿ ಇರಬೇಕೆಂದು ಆಸೆಯಾಯಿತು.

**14.** ವಿಜಾಪುರ ಜಿಲ್ಲೆಯಲ್ಲಿ ' ಕಲಾದಗಿ ' ಎಂಬ ಗ್ರಾಮದಲ್ಲಿ ಖಾದಿ ಬಟ್ಟೆಗಳನ್ನು ತಯಾರು ಮಾಡುತ್ತಿದ್ದರು .

**15.** 1942 ರಲ್ಲಿ ಗಾಂಧೀಜಿಯವರು ಬ್ರಿಟಿಷರಿಗೆ , ' ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ' ಅಂದರೆ Quit India ಎಂಬ ಘೋಷಣೆ ಮಾಡಿದರು.

**16.** ಮಹಾದೇವ ಅವರು ಹೊನ್ನತ್ತಿ ಎಂಬಲ್ಲಿ ಪೋಲಿಸರ ಬಂದೂಕು ಅಪಹರಿಸಿದರು.

**V.**

**17.** ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್ ,ಜವಾಹರ್ ಲಾಲ್ ನೆಹರು,ಕಿತ್ತೂರುರಾಣಿ ಚೆನ್ನಮ್ಮ ,ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇತ್ಯಾದಿ . ವಿದ್ಯಾರ್ಥಿಗಳು ತಿಳಿಸುವ ಯಾವುದೇ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಪರಿಗಣಿಸುವುದು.

**18.** ಮೊದಲು ನಾವು ದೇಶ, ದೇಶದಲ್ಲಿ ಉತ್ಪನ್ನವಾಗುವ ವಸ್ತುಗಳಿಗೆ ಮಾನ್ಯತೆ ನೀಡಿ, ಅವುಗಳನ್ನು ಬಳಕೆ ಮಾಡುವುದರಿಂದ ದೇಶದ ಅಭಿವೃದ್ಧಿ ಹಾಗೂ ಆರ್ಥಿಕ ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ. ಹಾಗಾಗಿ ದೇಶಪ್ರೇಮವನ್ನು ಎತ್ತಿ ಹಿಡಿಯುತ್ತಾ ಸ್ವದೇಶಿ ವಸ್ತುಗಳನ್ನೇ ಹೆಚ್ಚಾಗಿ ಬಳಸಬೇಕು.

**19.** ಬಾಲ್ಯದಿಂದಲೇ ನಾವು ನಮ್ಮ ಊರು, ನಮ್ಮ ರಾಜ್ಯ, ನಮ್ಮ ದೇಶ ಎಂಬ ಭಾವನೆ ಬೆಳೆಸಿಕೊಂಡಷ್ಟು ದೇಶದ ಮೇಲಿನ ಹಾಗೂ ನಮ್ಮ ತಾಯ್ನಾಡಿನ ಬಗೆಗೆ ಒಲವು ಹಾಗೂ ಪ್ರೀತಿ ಹೆಚ್ಚುತ್ತದೆ. ಹಾಗಾಗಿ ಬಾಲ್ಯದಲ್ಲೇ ದೇಶಪ್ರೇಮವನ್ನು ಬೆಳೆಸಬೇಕು.

**20.** ಉಪ್ಪಿನ ಸತ್ಯಾಗ್ರಹ, 2. ಮಾಡು ಇಲ್ಲವೇ ಮಡಿ, ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ,ಸಿಪಾಯಿ ದಂಗೆ.

**21.** ಮೊದಲು ನಾವು ದೇಶ, ದೇಶದಲ್ಲಿ ಉತ್ಪನ್ನವಾಗುವ ವಸ್ತುಗಳಿಗೆ ಮಾನ್ಯತೆ ನೀಡಿ, ಅವುಗಳನ್ನು ಬಳಕೆ ಮಾಡುವುದರಿಂದ ದೇಶದ ಅಭಿವೃದ್ಧಿ ಹಾಗೂ ಆರ್ಥಿಕ ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ. ಹಾಗಾಗಿ ದೇಶಪ್ರೇಮವನ್ನು ಎತ್ತಿ ಹಿಡಿಯುತ್ತಾ ಸ್ವದೇಶಿ ವಸ್ತುಗಳನ್ನೇ ಹೆಚ್ಚಾಗಿ ಬಳಸಬೇಕು.

**22.** ಸಬರಮತಿ ಆಶ್ರಮವು ಗುಜರಾತಿನ ಅಲಹಾಬಾದ್ ನಲ್ಲಿದೆ. ಈ ಆಶ್ರಮವು ಸ್ವಾತಂತ್ರ ಹೋರಾಟದ ಬಗೆಗಿನ ಪ್ರಮುಖ ನಿರ್ಣಯಗಳನ್ನು ಚರ್ಚಿಸುವ ಜಾಗವಾಗಿತ್ತು . ಅಲ್ಲದೆ ಆಧ್ಯಾತ್ಮಿಕ ಹಾಗೂ ವ್ಯಾಯಾಮ ಮತ್ತು ಶಿಸ್ತು ಬದ್ಧ ಜೀವನಕ್ಕೂಆಸರೆಯಾಗಿತ್ತು.

**23.** ಸೆರೆಮನೆಯು ಕೈದಿಗಳನ್ನು ಸೆರೆಹಿಡಿಯುವ ಜಾಗವಾಗಿರುತ್ತದೆ. ಇಲ್ಲಿ ಯಾವುದೇ ಸ್ವತಂತ್ರವಿರುವುದಿಲ್ಲ. ಇಲ್ಲಿ ಅಪರಾಧಿಗಳು ಬಂಧಿಯಾಗಿರುತ್ತಾರೆ.ಅರಮನೆಯಲ್ಲಿ ರಾಜ, ರಾಣಿ ,ರಾಜಕುಮಾರ, ರಾಜಕುಮಾರಿ ಅವರುಗಳಿಗೆ ಸೇವಕರು ಇರುತ್ತಾರೆ. ರಾಜರ ಪರಿವಾರ ಇಲ್ಲಿ ಐಶಾರಾಮಿ ಜೀವನ ನಡೆಸಬಹುದು. ಇದು ರಾಜ ಹಾಗೂ ಅವರ ಕುಟುಂಬ ಸ್ವತಂತ್ರವಾಗಿ ತಮ್ಮ ಇಷ್ಟದಂತೆ ಇರುವ ಮನೆಯಾಗಿರುತ್ತದೆ.

**24.** ನಮ್ಮ ಉತ್ತಮವಾದ ಆರೋಗ್ಯಕ್ಕಾಗಿ ಹಾಗೂ ಉತ್ತಮವಾದ ಜೀವನಶೈಲಿಗಾಗಿ ನಾವು ಉತ್ತಮ ವ್ಯಾಯಾಮಗಳನ್ನು ಹಾಗೂ ಶಿಸ್ತು ಬದ್ಧ ಜೀವನ ಶೈಲಿಯನ್ನು ರೂಡಿಸಿಕೊಳ್ಳಬೇಕಿದೆ.

**25.** ಅಹಿಂಸಾತ್ಮಕ ಹೋರಾಟದಿಂದ ಯಾವುದೇ ರೀತಿಯ ಜಗಳ ,ಹೊಡೆದಾಟ ರಕ್ತಪಾತಗಳು ಜರುಗುವುದಿಲ್ಲ. ಯಾವುದೇ ರೀತಿಯ ಹಿಂಸೆ ಇಲ್ಲದಂತೆ ಚಳುವಳಿ ಮಾಡುವುದೇ ಅಹಿಂಸಾತ್ಮಕ ಹೋರಾಟ ಆಗಿರುತ್ತದೆ.

**26.** ವಿದ್ಯಾರ್ಥಿಗಳು ಬರೆಯುವ ಯಾವುದೇ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಗಣಿಸುವುದು.

**VI.**

**27.** ಹಂಸಭಾವಿ.

**28.** ದಂಡಿ.

**29.** ಕಂದಾಯ.

**VII.**

**30.** ಅಭಯಾರಣ್ಯ

**31.** ಸೆರೆಮನೆ

**32.** ಚರಕ

**33.** ಜವಾಹರ್ ಲಾಲ್ ನೆಹರು.

**VIII.**

**34.** ಮಹಾದೇವನು 12-13 ರ ವಯಸ್ಸಿನಲ್ಲಿ ವಿಜಾಪುರ ಜಿಲ್ಲೆಯ ಕಲಾದಗಿ ಎಂಬ ಗ್ರಾಮಕ್ಕೆ ಹೋದನು .ಅಲ್ಲಿ ಖಾದಿ ಬಟ್ಟೆಗಳನ್ನು ತಯಾರು ಮಾಡುತ್ತಿದ್ದರು . ಮಹಾದೇವನು ಖಾದಿ ಬಟ್ಟೆ ತಯಾರು ಮಾಡುವುದನ್ನು ಕಲಿತು ತಿಳಿದುಕೊಂಡರು.

**35.** ದಂಡಿಯಾತ್ರೆಯಲ್ಲಿ ಭಾಗವಹಿಸಿದ್ದರಿಂದ ಸೆರೆಮನೆ ವಾಸದ ಶಿಕ್ಷೆಯಾಯಿತು.

**36.** ಗಂಡ – ಹೆಂಡತಿಯರಿಬ್ಬರೂ ಸೇವಾಶ್ರಮದ ಸಂಚಾಲಕರಾಗಿ ಅನೇಕ ಕೆಲಸಗಳನ್ನು ಮಾಡಿದರು .ಚರಕದಿಂದ ನೂಲು ತೆಗೆಯುವುದು , ಪ್ರಕೃತಿ ಚಿಕಿತ್ಸೆ , ವ್ಯಾಯಾಮ ಮುಂತಾದವನ್ನು ಹಳ್ಳಿಯ ಜನರಿಗೆ ಅಭ್ಯಾಸ ಮಾಡಿಸಿದರು. ಇಲ್ಲಿ ತಯಾರಾಗುತ್ತಿದ್ದ ಖಾದಿಯನ್ನು ಊರೂರಿಗೆ ಹೊತ್ತು ಮಾರುತ್ತಿದ್ದರು .

**37.** 1943 ನೇ ಏಪ್ರಿಲ್ 1 ರಂದು ಹೊಸರಿತ್ತಿಯಲ್ಲಿ ಬ್ರಿಟಿಷರನ್ನು ಎದುರಿಸ ಬೇಕೆಂದು ಯೋಜನೆ ಹಾಕಿಕೊಂಡಿದ್ದರು . ದೇವಸ್ಥಾನದ ಪಕ್ಕದಲೇ ಖಜಾನೆಯಿತ್ತು . ಮಹಾದೇವರು ಆಕ್ರಮಣ ಖಜಾನೆಯ ಬೀಗ ಮುರಿಯಲು ನಿರತರಾದಾಗ ಪೊಲಿಸರಲ್ಲೊಬ್ಬನು ಹಾರಿಸಿದ ಗುಂಡು ಮಹಾದೇವರ ಎದೆಯನ್ನು ತೂರಿತು .

**38.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**39.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**40.** ಬಸ್ಸು, ಕಾರು, ಸ್ಕೂಟರ್, ಟೆಲಿವಿಜನ್ ,ಟೆಲಿಫೋನ್, ರೈಲು ,ಟಿಕೆ , ಸ್ಟೇಷನ್ ರೋಡು,ರೇಡಿಯೋ.

**41.** ಮಹಾದೇವ ಅವರು ಜೈಲಿನಿಂದ ಬಿಡುಗಡೆಯಾದ ಮೇಲೆ ಅವರ ದೇಹದ ಆರೋಗ್ಯದ ಬಗೆಗೆ ಕಾಳಜಿ ಉಂಟಾಯಿತು . ಶಿಸ್ತುಬದ್ಧವಾದ ವ್ಯಾಯಾಮವನ್ನು ಕಲಿತರು .ಔಷಧಗಳ ಶಾಸ್ತ್ರವನ್ನು ಅಭ್ಯಾಸ ಮಾಡಿದರು . ಚರಕದಿಂದ ನೂಲು ತೆಗೆಯುವುದು ,ಪ್ರಕೃತಿ ಚಿಕಿತ್ಸೆ , ವ್ಯಾಯಾಮ ಇವನ್ನೆಲ್ಲ ಜನರಿಗೆ ಅಭ್ಯಾಸ ಮಾಡಿಸಿದರು. ಸೇವಾಶ್ರಮವನ್ನು ಪ್ರಾರಂಭಿಸಿ ಹಳ್ಳಿ ಜನರ ಜನರ ಸೇವೆ ಮಾಡುತ್ತಿದ್ದರು . ಅಲ್ಲಿ ಖಾದಿಯನ್ನು ತಯಾರಿಸುತ್ತಿದ್ದರು . ಆ ಖಾದಿಯನ್ನು ಊರೂರಿಗೆ ತೆಗೆದುಕೊಂಡು ಮಾರಾಟ ಮಾಡುತ್ತಿದ್ದರು . ಆದ್ದರಿಂದ ಆ ಖಾದಿಯು ಮಹಾದೇವನ ಖಾದಿ ಎಂದೇ ಪ್ರಸಿದ್ಧಿ ಪಡೆಯಿತು.

**42.** ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ಅವರು ನಡೆಸುತ್ತಿರುವ ಆಡಳಿತಕ್ಕೆ ಧಕ್ಕೆ ಉಂಟುಮಾಡಬೇಕು . ಅವರಿಗೆ ಆಡಳಿತ ನಡೆಸುವುದು ಸಾಧ್ಯವಿಲ್ಲ ಎನಿಸುವಷ್ಟು ಕಿರುಕುಳ ಕೊಡಬೇಕು ಎಂದು ಯೋಚಿಸಿ ಮಹಾದೇವ ತಮ್ಮ ಸಂಗಡಿಗರೊಂದಿಗೆ ಇಂಥ ಸಾಹಸಕ್ಕೆ ಕೈ ಹಾಕಿದರು .

**43.** ಹಾವೇರಿ ಜಿಲ್ಲೆಯ ಹೊಸರಿತ್ತಿಯಲ್ಲಿ ಕಂದಾಯವನ್ನು ಬಲವಂತವಾಗಿ ವಸೂಲಿ ಮಾಡಿ ಜನರನ್ನು ಹಿಂಸಿಸುತ್ತಿದ್ದ ಬ್ರಿಟಿಷ್ ಸರ್ಕಾರದ ಕೇಂದ್ರವಿತ್ತು . ಅದನ್ನು ಆಕ್ರಮಿಸಿಕೊಳ್ಳಬೇಕೆಂದು ನಿರ್ಧಾರ ಮಾಡಿ ಪತ್ನಿಯನ್ನು ಹುಬ್ಬಳ್ಳಿಗೆ ಕಳುಹಿಸಿದರು. ಹೊಸರಿತ್ತಿಯ ಸಮೀಪದ ವೀರಭದ್ರ ದೇವಾಲಯದಲ್ಲಿ ಪೋಲಿಸರ ತುಕಡಿಯಿತ್ತು. ಪಕ್ಕದಲೇ ಬ್ರಿಟಿಷ್ ಖಜಾನೆ. ಮಹಾದೇವನು ತನ್ನ ಸಂಗಡಿಗರೊಂದಿಗೆ ' ಮುತ್ತಿಗೆ ಹಾಕಿ , ಬೀಗ ತೆಗೆಯುತ್ತಿದ್ದಾಗ ಅಡಗಿ ಕುಳಿತಿದ್ದ ಒಬ್ಬ ಪೊಲೀಸ್ ಮಹಾದೇವನ ಎದೆಗೆ ಗುಂಡು ಹೊಡೆದ. ಹೀಗೆ ಮಹಾದೇವರು ಬಲಿಯಾದರು.

**44.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**45.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

**46.** ಈ ಕಾರ್ಯಕ್ರಮವು ಮಕ್ಕಳ ದಿನಾಚರಣೆ ಯಾಗಿರುತ್ತದೆ. ( ಕಾರ್ಯಕ್ರಮದ ಕುರಿತಂತೆ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸುವುದು.)

**47.** ೧.ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.
೨.ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**48.** ಸಂಸ್ಕೃತ:- ಭೂಮಿ, ನದಿ, ದಯೆ, ರಾತ್ರಿ, ಕಥೆ, ಸಂಜೆ, ದೀಪ, ಮುಖ, ಶಕ್ತಿ, ಧರ್ಮ, ಪುಣ್ಯ, ರಾಜ, ಯುದ್ಧ .

ಪೋರ್ಚುಗೀಸ್:- ಅಲಮಾರು, ಸಾಬೂನು, ಮಾದರಿ, ಇಸ್ತ್ರಿ, ಮೇಜು

ಪರ್ಶಿಯಾ ಮತ್ತು ಅರೇಬಿಕ್:- ಜಮೀನು, ಕಾನೂನು, ಮಂಜೂರು, ರಸ್ತೆ, ಸರ್ಕಾರ, ಕಾಗದ, ದರ್ಬಾರು, ಸಲಾಮು, ಚುನಾವಣೆ, ನಕಲು,

ಇಂಗ್ಲಿಷ್:-,ಲಾಯರ್, ನಂಬರ್, ಬ್ಯಾಂಕು, ಮೈಲು, ಎಕರೆ, ಕಾರ್ಡು ,ಪ್ಲೇಗು ,ರೋಡು,

**** *** ****

## ಗದ್ಯಪಾಠ - 5
## ಪರಿಸರ ಸಮತೋಲನ

1. ಬಂಧುವಿಲ್ಲ
2. ಆನೆ
3. ಕಡಲು
4. ಬೆಟ್ಟದಾವರೆ
5. ಶತಮಾನದಿಂದಲೂ ಭಾರತವು ವಿದೇಶಿ ಆಳ್ವಿಕೆಗೆ ಒಳಪಟ್ಟಿತ್ತು
6. ವಿಫಲ
7. ಹಸಿವು,ಹಾವು,ಹಿಡಿ,ಹೊಲ,ಹಂಸ
8. ಮರ
9. ಅಕ್ಷರ ಬಿಟ್ಟು ಹೋಗುವುದು.
   ಹೊಸ ಅಕ್ಷರ ಸೇರುವುದು
   ಅಕ್ಷರ ಬದಲಾವಣೆ
10. ವಿಫುಲವಾದ ನೀರು,ಆರ್ದ್ರತೆ ಇರುವಲ್ಲಿ ಕಾಡು ಬೆಳೆಯುತ್ತದೆ.
11. ಕೀಟ, ವಾಯು, ನೀರು ಮೊದಲಾವುದವುಗಳ ಮೂಲಕ ಬೀಜ ಪ್ರಸರಣ ನಡೆಯುತ್ತದೆ
12. ಆಹಾರ ಆಚ್ಛಾಧನೆಗಳಿಗಾಗಿ ಸ್ಪರ್ಧೆ ನಡೆಯುತ್ತದೆ
13. ಜನಸಂಖ್ಯೆ ಏರಿಕೆ, ಕೈಗಾರಿಕೀಕರಣ, ನಗರೀಕರಣ, ಆಧುನಿಕರಣಗಳ ಭರಾಟೆಯಲ್ಲಿ ಸಸ್ಯ ಪ್ರಾಣಿ ಸಂಕುಲ ನಶಿಸಿ ಹೋಗುತ್ತಿವೆ.
14. ಆನೆ ಐದು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ.
15. ಮರುಭೂಮಿ ರಸ್ತೆ,ಕಟ್ಟಡಗಳ ಮೇಲೆ ಬಿದ್ದರೆ ಬೀಜಗಳು ನಾಶವಾಗುತ್ತದೆ.
16. ಮೊಸಳೆಗಳ ಚರ್ಮಕ್ಕೆ ಪಾಶ್ಚಾತ್ಯ ಮಹಿಳೆಯರು ಮನಸೋತಿದ್ದಾರೆ
17. ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ತಿಮಿಂಗಿಲ.

18. ನಮ್ಮೂರಿನಲ್ಲಿ ಹೊಸದಾಗಿ ಸರ್ಕಾರಿ ಶಾಲೆಯ ನಿರ್ಮಾಣವಾಗುತ್ತಿದೆ.
19. ಪ್ರಕೃತಿ ಸೌಂದರ್ಯಕ್ಕೆ ಮನಸೋಲದವರಿಲ್ಲ
20. ಹಿರಿಯರ ಮಾರ್ಗದರ್ಶನವನ್ನು ಹಿಂಬಾಲಿಸಿದರೆ ಯಶಸ್ಸು ಸಿಗುತ್ತದೆ. (ಮಕ್ಕಳ ವಾಕ್ಯರಚನೆಯನ್ನು ಸಹ ಪರಿಶೀಲಿಸಿ ಮಾರ್ಗದರ್ಶಿಸುವುದು.)
21. ನೀನೇಕೆ -ನೀನು+ ಏಕೆ= ಲೋಪಸಂಧಿ
    ನಮ್ಮೊಡನೆ = ನಮ್ಮ +ಒಡನೆ= ಲೋಪಸಂಧಿ
    ಬರುವುದಿಲ್ಲ = ಬರುವುದು + ಇಲ್ಲ = ಲೋಪಸಂಧಿ

22. ಹಾಸಿಗೆಯಿದ್ದಷ್ಟು = ಹಾಸಿಗೆ + ಇದ್ದಷ್ಟು = ಆಗಮಸಂಧಿ

ಕಾಲನ್ನು = ಕಾಲು + ಅನ್ನು = ಲೋಪಸಂಧಿ

23. ಅಲ್ಲಲ್ಲಿ = ಅಲ್ಲಿ+ಅಲ್ಲಿ =ಲೋಪಸಂಧಿ

ಕಸವನ್ನು = ಕಸ + ಅನ್ನು = ಆಗಮಸಂಧಿ

24. ಶಿವಾಲಯ = ಶಿವ + ಆಲಯ = ಸವರ್ಣಧೀರ್ಘಸಂಧಿ

25. ಮಳೆಗಾಲ = ಮಳೆ + ಕಾಲ = ಆದೇಶ ಸಂಧಿ

26. ಮನೆಯಲ್ಲಿ = ಮನೆ + ಅಲ್ಲಿ = ಲೋಪಸಂಧಿ

ನಾವೆಲ್ಲ = ನಾವು + ಎಲ್ಲ = ಲೋಪಸಂಧಿ

ಆಟವಾಡಿದೆವು= ಆಟ + ಆಡಿದೆವು= ಆಗಮಸಂಧಿ

27. ಬಟ್ಟೆ,ವಸ್ತ್ರ

28. ನೀರಿನ ಅಂಶ.ತೇವಾಂಶ

29. ಜೇಬು

30. ಜಿಂಕೆ

31. ಮಾನವನು ವಿಮಾನ ರೈಲ್ವೆ ಮೋಟಾರ್ ನಿಲ್ದಾಣಗಳನ್ನು ಕಟ್ಟುವುದರಿಂದ ಹೆದ್ದಾರಿಗಳನ್ನು ಮಾಡುವುದರಿಂದ, ಸರೋವರ,ಕೆರೆ, ಮತ್ತು ಹೊಂಡಗಳು ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ.

32. ನಿಸರ್ಗದ ಆಗುಹೋಗುಗಳನ್ನು ವಿವರವಾಗಿ ಅಭ್ಯಸಿಸಿ ಮಾನವನ ಚಟುವಟಿಕೆ ಮಾನವನಿಗೆ ಕಂಟಕ ಪ್ರಾಯವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು

33. ಸಸ್ಯಗಳು ಕೀಟ, ವಾಯು ನೀರು ಗಾಳಿ ಮೊದಲಾದುವುಗಳ ಮೂಲಕ ಬೀಜ ಪ್ರಸಾರ ಮಾಡುತ್ತವೆ.

34. ತಿಮಿಂಗಿಲಗಳನ್ನು ಅದರ ಕೊಬ್ಬಿಗಾಗಿ,ಮೊಸಳೆಗಳ ಚರ್ಮದಲ್ಲಿ ತರಹೇವಾರಿ ವಸ್ತುಗಳನ್ನು ತಯಾರಿಸಲು, ಹುಲಿ,ಸಿಂಹ,ಚಿರತೆಗಳ ಮೈದೊಗಲುಗಳು,ಹಾವುಗಳ ಚರ್ಮಗಳನ್ನು ವಿವಿಧ ವಸ್ತುಗಳನ್ನು ತಯಾರಿಸಿ ಅಪಾರ ಧನ ಸಂಪಾದಿಸಲು ಬಳಸುತ್ತಾರೆ.

35. ಪ್ರಕೃತಿಯಲ್ಲಿ ಗಿಡಮರಗಳನ್ನು ಆಶ್ರಯಿಸಿ ಚಿಗರೆಗಳು ಇದ್ದು,ಈ ಪ್ರಾಣಿಗಳನ್ನು ಬೇಟೆಯಾಡಿ ಹುಲಿ,ಚಿರತೆ,ಸಿಂಹಗಳೂ ಬದುಕಿರುತ್ತವೆ.ಹೀಗೆ ಪ್ರಾಣಿಗಳು ಒಂದನ್ನೊಂದು ಆಶ್ರಯಿಸಿ ಬದುಕುತ್ತವೆ

36. ಜಿರಾಫೆಗಳು ಉದ್ದಕಾಲು,ಉದ್ದಗೋಣು ಇರುವುದರಿಂದ ಹನ್ನೆರಡು ಅಡಿ ಎತ್ತರದಲ್ಲಿರುವ ಎಲೆಗಳನ್ನು ತಿಂದು ಆಹಾರ ಸ್ಪರ್ಧೆಯಲ್ಲಿ ಯಶಸ್ವಿಯಾಗುತ್ತದೆ.

37. ವನ್ಯ ಜೀವಿ ಸಂರಕ್ಷಣೆಗಾಗಿ ಇಂದು

೧. ವನ್ಯಜೀವಿ ರಕ್ಷಿತ ಪ್ರದೇಶಗಳ ಸ್ಥಾಪನೆ.

೨.ಕಾನೂನು ಕ್ರಮಗಳು ಮತ್ತು ಕಟ್ಟುನಿಟ್ಟಿನ ಜಾರಿ.

೩.ತಂತ್ರಜ್ಞಾನದ ಬಳಕೆ.

೪.ಸಾರ್ವಜನಿಕ ಜಾಗೃತಿ ಮತ್ತು ಸಮುದಾಯದ ಸಹಭಾಗಿತ್ವ ಇತ್ಯಾದಿ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.

38. ಬನ್ನೇರುಘಟ್ಟದಲ್ಲಿ ಮೊಸಳೆಗಳಿಗಾಗಿ ಮಾಡಿದ ಆಲಯದಲ್ಲಿ ಮೊಸಳೆಗಳ ಪಾಲನೆ ಪೋಷಣೆ ಮಾಡುತ್ತಿದ್ದಾರೆ. ವಿಷಕಾರಿ ಹಾವುಗಳನ್ನು ಸಾಕುವ ಕೇಂದ್ರಗಳನ್ನು ಮುಂಬೈ ಮತ್ತು ಮದರಾಸಿನಲ್ಲಿ ಪ್ರಾರಂಭಿಸಿ ಹಾವುಗಳನ್ನು ಸಂರಕ್ಷಿಸಲಾಗುತ್ತಿದೆ.

39. . ಹಕ್ಕಿಗಳು ಬೇರೆ ತಾಣ ಹುಡುಕಿಕೊಳ್ಳುತ್ತವೆ ಮೇವಿಲ್ಲದೆ ಚಿಗರೆಗಳು ಮಾಯವಾಗುತ್ತವೆ. ಚಿಗರೆಗಳನ್ನು ಬೇಟೆಯಾಡಿ ಜೀವಿಸುತ್ತಿದ್ದ ಹುಲಿ ಚಿರತೆ ಸಿಂಹಗಳು ತೊಲಗಬೇಕಾಗುತ್ತದೆ ಅವಿತುಕೊಳ್ಳಲು ಮರೆ ಇಲ್ಲದಿದ್ದರಿಂದ ತೋಳ ಕರಡಿಗಳು ಓಡಿ ಹೋಗುತ್ತವೆ ಹಣ್ಣು ಹಂಪಲು ಸಿಗದಿದ್ದರಿಂದ ಇಣಚಿ ಕಣ್ಣುಕಪ್ಪಡಿಗಳು ಪ್ರಯಾಣ ಬೆಳೆಸುತ್ತವೆ ಬೋಳು ಮಾಡಿದ ಕಾಡಿನಿಂದ ಇಲಿಗಳು ಇಲಿಗಳನ್ನು ನಂಬಿದ್ದ ಹಾವುಗಳು ಹೊರಡುತ್ತವೆ ಕೊರೆಯುವ ಚಳಿ ಸುಡು ಬಿಸಿಲು ಹರಿವ ನೀರಿಗೆ ನೆಲದೊಳಗಿನ ಪ್ರಾಣಿಗಳು ಸಾವಿಗೀಡಾಗುತ್ತವೆ.

40. ಪರಿಸರ ಸಮತೋಲನ ಕಾಪಾಡುವ ಕ್ರಮಗಳೆಂದರೆ

೧.ಅರಣ್ಯೀಕರಣ ಮರಗಳ ರಕ್ಷಣೆ

೨. ಜಲಮೂಲಗಳ ಸಂರಕ್ಷಣೆ

೩. ಮಾಲಿನ್ಯ ನಿಯಂತ್ರಣ

೪.ಜೈವಿಕ ವೈವಿಧ್ಯತೆಗಳ ರಕ್ಷಣೆ

೫. ನವೀಕರಿಸಬಹುದಾದ ಶಕ್ತಿಯ ಬಳಕೆ. ಇತ್ಯಾದಿ

41. ಮಾನವನ ವಿವಿಧ ಚಟುವಟಿಕೆಗಳು ಪರಿಸರದ ಮೇಲೆ ಕೆಳಕಂಡ ಪರಿಣಾಮಗಳನ್ನು ಬೀರುತ್ತವೆ.

೧. ನಗರೀಕರಣ ಮತ್ತು ಕೈಗಾರೀಕರಣ

೨. ಆಧುನಿಕ ಕೃಷಿ ಪದ್ಧತಿ

೩. ಪ್ಲಾಸ್ಟಿಕ್ ಮತ್ತು ತ್ಯಾಜ್ಯಗಳ ಅವೈಜ್ಞಾನಿಕ ವಿಲೇವಾರಿ

೪. ಜಲಮಾಲಿನ್ಯ

೫. ಅತಿಯಾದ ಗಣಿಗಾರಿಕೆ

೬. ವಾಯು ಮತ್ತು ಶಬ್ದಮಾಲಿನ್ಯ

42. ವಿದ್ಯಾರ್ಥಿಗಳ ಉತ್ತರಗಳನ್ನು ಪರಿಶೀಲಿಸುವುದು.

43. ನುಣ್ಣಗೆ

44. ಮದ್ದಲ್ಲ

45. ಬಂಧುವಿಲ್ಲ

46. ಕುಡಿಕೆ ಹೊನ್ನು ಸಾಲದು

47. ಹಾಲು ಕಪ್ಪೆ?

48. ಮಕ್ಕಳ ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

49. ಮಕ್ಕಳ ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

50. ಮಕ್ಕಳ ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

51. ಮಕ್ಕಳ ಉತ್ತರಗಳನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

53.

**ಮಾದರಿ:**




54. **ಮಾದರಿ ಲೇಖನ :**

2035 – ನನ್ನ ಕನಸಿನ ಭಾರತ.

ಪರಿಚಯ:

ಭಾರತವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ನಮ್ಮ ದೇಶವು ವಿಜ್ಞಾನ, ತಂತ್ರಜ್ಞಾನ, ಕೃಷಿ, ಶಿಕ್ಷಣ ಹಾಗೂ ಸಂಸ್ಕೃತಿಯ ಕ್ಷೇತ್ರಗಳಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದೆ. 2035ರ ವೇಳೆಗೆ ಭಾರತವು ಇನ್ನಷ್ಟು ಪ್ರಗತಿಪರ, ಸ್ವಾವಲಂಬಿ ಮತ್ತು ಸಮಾನತೆಯ ರಾಷ್ಟ್ರವಾಗಿರಬೇಕು ಎಂಬುದು ನನ್ನ ಕನಸು.

ವಿಶ್ಲೇಷಣೆ:

2035ರ ನನ್ನ ಕನಸಿನ ಭಾರತದಲ್ಲಿ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ ಉಚಿತವಾಗಿ ದೊರೆಯಬೇಕು. ಶಿಕ್ಷಣವು ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಕೌಶಲ್ಯ, ಸೃಜನಶೀಲತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಂತಿರಬೇಕು.ಆರೋಗ್ಯ ಕ್ಷೇತ್ರದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ವೈದ್ಯಕೀಯ ಸೌಲಭ್ಯ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕು. ಗ್ರಾಮ ಮತ್ತು ನಗರಗಳ ನಡುವಿನ ಆರೋಗ್ಯ ಸೇವೆಗಳ ಅಂತರ ಕಡಿಮೆಯಾಗಬೇಕು.ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಯಿಂದ ರೈತರ ಆದಾಯ ಹೆಚ್ಚಬೇಕು. ರೈತರಿಗೆ ನ್ಯಾಯಯುತ ಬೆಲೆ, ನೀರಾವರಿ ಸೌಲಭ್ಯ ಹಾಗೂ ಬೆಳೆ ವಿಮೆ ಪರಿಣಾಮಕಾರಿಯಾಗಿ ದೊರೆಯಬೇಕು. ಭಾರತವು ಆಹಾರ ಉತ್ಪಾದನೆಯಲ್ಲಿ ಮಾತ್ರವಲ್ಲ, ಕೃಷಿ ರಫ್ತಿನಲ್ಲಿಯೂ ಮುಂಚೂಣಿಯಲ್ಲಿರಬೇಕು.ಪರಿಸರ ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಬೇಕು. ಅರಣ್ಯ ಪ್ರದೇಶಗಳು ಹೆಚ್ಚಬೇಕು, ನದಿಗಳು ಸ್ವಚ್ಛವಾಗಿರಬೇಕು ಮತ್ತು ನವೀಕರಿಸಬಹುದಾದ ಇಂಧನದ ಬಳಕೆ ಹೆಚ್ಚಾಗಬೇಕು. ಹಸಿರು ಭಾರತವೇ ಆರೋಗ್ಯಕರ ಭಾರತದ ಅಡಿಪಾಯವಾಗಿದೆ.ಮಹಿಳೆಯರು ಮತ್ತು ಮಕ್ಕಳಿಗೆ ಸಂಪೂರ್ಣ ಸುರಕ್ಷತೆ ಹಾಗೂ ಸಮಾನ ಅವಕಾಶಗಳು ದೊರೆಯಬೇಕು. ಜಾತಿ, ಧರ್ಮ, ಭಾಷೆ ಅಥವಾ ಲಿಂಗದ ಆಧಾರದ ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಸಮಾನ ಹಕ್ಕುಗಳೊಂದಿಗೆ ಬದುಕುವ ಸಮಾಜ ನಿರ್ಮಾಣವಾಗಬೇಕು.

ಡಿಜಿಟಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (AI), ಬಾಹ್ಯಾಕಾಶ ಸಂಶೋಧನೆ ಹಾಗೂ ನವೋದ್ಯಮ ಕ್ಷೇತ್ರಗಳಲ್ಲಿ ಭಾರತವು ವಿಶ್ವಕ್ಕೆ ಮಾರ್ಗದರ್ಶಕ ರಾಷ್ಟ್ರವಾಗಬೇಕು. ಯುವಜನತೆಗೆ ಉದ್ಯೋಗ ಮತ್ತು ಸ್ವಯಂ ಉದ್ಯೋಗದ ಅವಕಾಶಗಳು ಹೆಚ್ಚಾಗಬೇಕು.

ಉಪಸಂಹಾರ:

2035ರ ನನ್ನ ಕನಸಿನ ಭಾರತವು ಸ್ವಚ್ಛ, ಹಸಿರು, ಸುರಕ್ಷಿತ, ಸಮಾನತೆ ಮತ್ತು ಅಭಿವೃದ್ಧಿಯಿಂದ ಕೂಡಿದ ರಾಷ್ಟ್ರವಾಗಿರಬೇಕು. ಈ ಕನಸು ನನಸಾಗಲು ಸರ್ಕಾರದ ಜೊತೆಗೆ ಪ್ರತಿಯೊಬ್ಬ ನಾಗರಿಕನೂ ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. "ನನ್ನ ದೇಶದ ಅಭಿವೃದ್ಧಿಯೇ ನನ್ನ ಜವಾಬ್ದಾರಿ" ಎಂಬ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ 2035ರ ಕನಸಿನ ಭಾರತವನ್ನು ನಾವು ನಿರ್ಮಿಸಬಹುದು. [ ಮಾದರಿಯಂತೆ ಮಕ್ಕಳ ರಚನೆಯನ್ನು ಪ್ರೋತ್ಸಾಹಿಸುವುದು.]

55 ೧. ಜೀವನದ ಎಲ್ಲ ಹಂತಗಳನ್ನು ನೋಡಿರುವ ಅಜ್ಜಿಗೆ ಇನ್ನೇನು ಇಹಲೋಕ ತ್ಯಜಿಸುವ ಚಿತ್ತದಲ್ಲಿರುವಳು. ಮುಳುಗುವ ಸಂಜೆಯಂತೆ ಆಕೆಗೀಗ , ತಾನು ಕಳೆದ ದಿನಗಳೆಲ್ಲವನ್ನು ಮೆಲುಕು

ಹಾಕುತ್ತಿರುವಳು. ಮಡದಿ, ಮಕ್ಕಳು,ಮೊಮ್ಮಕ್ಕಳು ಎಲ್ಲರೊಂದಿಗೆ ತುಂಬು ಜೀವನ ನಡೆಸಿದವಳಿಗೆ, ಈ ಸಮಯ ಕಳೆದು ಹೋಗುವುದು, ಅವಳ ಅಸ್ತಿತ್ವವನ್ನೇ ಇಲ್ಲವಾಗಿಸುವ ಸಂದರ್ಭವಾಗಿದೆ.

೨. ಬೆರಳ ಹಿಡಿದು ನಡೆಸಿದ ಕೈಗಳು,ಮಾತು ಬಾರದ ಕಂದಮ್ಮನಿಗೆ ತೊದಲ ನುಡಿ ಕಲಿಸಿದಾಗ ಆಗುವ ಖುಷಿ, ಮೊದಲ ಬಾರಿ ಹೆಜ್ಜೆ ಇಡುವದನ್ನು ಕಣ್ತುಂಬಿಕೊಂಡ ಕ್ಷಣ, ನಿದ್ದೆ ಇಲ್ಲದ ಎಷ್ಟೋ ರಾತ್ರಿಗಳನ್ನು ಮೀರಿ ಬೆಳೆದ ಮಗುವೀಗ  ಸ್ವತಂತ್ರವಾಗುತ್ತದ್ದಲ್ಲ. ಈ ಮುಗ್ಧ ಕಂದನ ಒಡನಾಟ ಕಳೆದು ಹೋಗುತ್ತದ್ದಲ್ಲ ಎಂಬುದು ಒಬ್ಬ ತಾಯಿಯ ದೃಷ್ಟಿಕೋನವಾಗಿದೆ.

೩. ಪತ್ರಕರ್ತನೊಬ್ಬ ತಾನು ಮಾಡಿದ ವಿಷಯ  ಸುದ್ದಿಯಿಂದಾಗಿ ಒಂದಷ್ಟು ಜನರಿಗೆ ನ್ಯಾಯ ಸಿಕ್ಕರೆ, ವೃತ್ತಿ ಜೀವನದ ಇದೊಂದೆ ಬಾರಿ ಈ ರೀತಿ ಅವಕಾಶ ಸದಾ ಕಾಲ ಹೀಗೆಯೇ ಇರುವುದಿಲ್ಲವಲ್ಲ ಎನ್ನುವ ಸಂದರ್ಭವಾಗಿದೆ.

೪.ಯುದ್ಧದಿಂದ ಸಾಕಷ್ಟು ಸಾವು ನೋವು ಕಂಡ ಎರಡೂ ದೇಶಗಳ ಪ್ರಜೆಗಳ ಮನಸ್ಥಿತಿ ಈ ಸಮಯ ಕಳೆದು ಹೋದರೆ, ಕಳೆದುಕೊಂಡ ಜೀವನವನ್ನು ಮತ್ತೆ ರೂಪಿಸಿಕೊಳ್ಳುವ ಆಶಾ ಮನೋಭಾವದ ಸಂದರ್ಭವಾಗಿದೆ.  [ ಈ ಮಾದರಿಯಂತೆ ಮಕ್ಕಳ ಉತ್ತರಗಳನ್ನು ಪರಿಶೀಲಿಸುವುದು ]

56. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸ್ವಯಂ ಭಾಗವಹಿಸುವಿಕೆ ಹಾಗೂ ಪರಿಶೀಲಿನೆ.

**** *** ****

## ಗದ್ಯಪಾಠ – 6
## ಚಗಳಿ ಇರುವೆ

I.

1. ಫಿರಮೊನ್
2. ಗೂಡು (ಇರುವೆ ಗೂಡು)
3. ರಾಣಿ ಇರುವೆ
4. ಉತ್ತರ ಪದ
5. ಗೌರವ
6. ರಾಣಿ
7. ಕೆಲಸಗಾರ ಇರುವೆಗಳು.
8. 05 ರಿಂದ 10 ಲಕ್ಷ

II.

10. ಚಗಳಿ ಇರುವೆ ಅಥವಾ ಕೆಂಜುಗ
11. ಕಟ್ಟಿರುವೆ ಅಥವಾ ಕೆಂಪಿರುವೆ
12. ಶಿಸ್ತು, ಧೈರ್ಯ, ಒಗ್ಗಟ್ಟು
13. ತಿಗಣೆ ಮತ್ತು ಜಿಗಿಹುಳು
14. ಮಳೆಗಾಲ
15. ಎಲೆಗಳನ್ನು ಒಂದಕ್ಕೊಂದು ಸೇರಿಸಿ ಇರುವೆಗಳು ಕಟ್ಟುವ ಗೂಡುಗಳನ್ನು ಕೊಟ್ಟೆ ಎನ್ನುತ್ತಾರೆ.
16. ತಮ್ಮ ಸಂಗಡಿಗರಿಗೆ ಫಿರಮೋನ್ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪಡಿಸುವುದರ ಮೂಲಕ ಸಂದೇಶವನ್ನು ತಲುಪಿಸುತ್ತದೆ.
17. ಜೇನು ಹುಳು, ಕೆಂಪು ಇರುವೆಗಳು, ಕರಿಗೊದ್ದ ಇತ್ಯಾದಿಗಳು.
18. ಚಗಳಿ ಇರುವೆಗಳು ಲಾರ್ವಾಗಳನ್ನು ಎಲೆಯಿಂದ ಎಲೆಗೆ ಅಂಟಿಸುವಾಗ ವಿಚಿತ್ರವಾಗಿ ನೇವರಿಸುತ್ತಾ, ಮೇಲು ಕೆಳಗೂ ಮಗ್ಗದ ಲಾಳ ಆಡುಸುವಂತೆ ಆಡುಸುತ್ತದೆ.

III.

19. ಗೋಪಾಲಕ ಇರುವೆಗಳೆಂದರೆ ಕೆಲಸಗಾರ ಇರುವೆಗಳು. ಇವುಗಳ ಕೆಲಸ ತಿಗಣೆ ಮತ್ತು ಜಿಗಿ ಹುಳುಗಳನ್ನು ಆವು ಗೂಡು ಮಾಡಿರುವ ಮರ-ಗಿಡಗಳಲ್ಲಿ ತಂದಿಟ್ಟು ಸಾಕುವುದು.
20. ಚಗಳಿ  ಇರುವೆಗಳು ಶತ್ರುಗಳನ್ನು ನೋಡಿ ಓಡುವುದಕ್ಕೆ ಬದಲಾಗಿ ತಿರುಗಿ ನಿಂತು ಕಚ್ಚಲು ಸಿದ್ದವಾಗುತ್ತವೆ ಹಾಗೂ ತನ್ನ ಹಿಂಭಾಗವನ್ನೆತ್ತಿ ಹೊಟ್ಟೆ ಅಡಿಯಲ್ಲಿರುವ  ಗ್ರಂಥಿಗಳಿಂದ

ಅಪಾಯದ ಫಿರಮೋನ್  ಎಂಬ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪಡಿಸಿ ಕೆಲವೇ ಕ್ಷಣಗಳಲ್ಲಿ ಸುತ್ತಮುತ್ತ ಇರುವ ಎಲ್ಲ ಚಗಳಿಇರುವೆಗಳೂ ಯುದ್ಧ ಸನ್ನದ್ಧರಾಗುವಂತೆ, ಒಗ್ಗಟ್ಟಾಗುವಂತೆ ಮಾಡುತ್ತವೆ.

21. ಚಟ್ನಿ, ರೊಟ್ಟಿ, ವಡೆ ಮತ್ತು ತಿಳಿ ಸಾಂಬಾರ್ ತಯಾರಿಸುತ್ತಾರೆ.

22. ಎರೆಹುಳು, ಜೇನುಹುಳು, ರೇಷ್ಮೆ ಹುಳು, ಜಿಗಣೆ ಮುಂತಾದವು.

23. ಕೆಂಜುಗ ಕಟ್ಟಿರುವೆ ಕೆಂಪಿರುವೆ, ಕಪ್ಪಿರುವೆ, ನಾತಿರುವೆ ಇತ್ಯಾದಿ.

24. ಕೆ ಪಿ ಪೂರ್ಣಚಂದ್ರ ತೇಜಸ್ವಿ

ಸ್ಥಳ: ಶಿವಮೊಗ್ಗ

ಕಾಲ: 1938ರ ಸೆಪ್ಟೆಂಬರ್ 8ರಂದು ಜನನ

ಕೃತಿಗಳು: ಅಬ್ಬಚೂರಿನ ಪೋಸ್ಟ್ ಆಫೀಸ್ ಚಿದಂಬರ ರಹಸ್ಯ ತಬರನ ಕಥೆ

25. ಇರುವೆ ಗೂಡು ಕಟ್ಟುವಾಗ ಬಗ್ಗಿಸಬೇಕಾದ ಎಲೆಯ ಮೇಲೆ ನೂರಾರು ಇರುವೆಗಳು ಜಮಾಯಿಸಿ ಒಂದರ ಕಾಲನ್ನು ಒಂದು ಹಿಡಿದುಕೊಂಡು ಜೋತಾಡುತ್ತಾ ಕೆಳಗಿಳಿದು ಕೆಳಗಿನ ಎಲೆಯ ಅಂಚನ್ನು ಹಿಡಿದು ಜಲ್ಲಿನಿಂದ ಬರುವ ರಸವನ್ನು ದಾರ ಮಾಡಿ ದಾರದ ಸಹಾಯದಿಂದ ಕೆಲವೇ ಕ್ಷಣಗಳಲ್ಲಿ ಪೊಟ್ಟಣದ ರೂಪದಲ್ಲಿ ಗೂಡನ್ನು ತಯಾರಿಸುತ್ತದೆ.

26. ಲಾರ್ವ=ಕೀಟಗಳ ಮೊಟ್ಟೆ

ಮಾಳಿಗೆ=ಮಹಡಿ, ಅಟ್ಟ

ಫಿರಮೋನ್=ರಾಸಾಯನಿಕ ವಸ್ತು

27. ಉದಾಹರಣೆ

ಅ) ಪ್ರಾರ್ಥನೆ: ನಾನು ಪ್ರತಿನಿತ್ಯ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಆ) ಮೆಚ್ಚುಗೆ: ಚಗಳಿಇರುವೆಗಳು ಗೂಡು ಕಟ್ಟುವ ರೀತಿ ನನಗೆ ಮೆಚ್ಚುಗೆಯಾಯಿತು.

( ಸೂಕ್ತ ವಾಕ್ಯ ರಚನೆಯನ್ನು ಪರಿಗಣಿಸುವುದು).

28. ಪದಗಳಿಗೆ ಪದಗಳನ್ನು ಕೂಡಿಸಿದರೆ ಸಮಾಸ ಎನ್ನುತ್ತೇವೆ. ಉದಾಹರಣೆಗೆ :

ಅರಸನ ಮನೆ = ಅರಮನೆ

ಹಿರಿದಾದ ಜೇನು = ಹೆಜ್ಜೇನು

29. ಚಗಳಿ ಇರುವೆಗಳು ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡುತ್ತವೆ. ಅವು ಕೊಟ್ಟೆಯನ್ನು ಕಟ್ಟುವ ರೀತಿಯನ್ನು ನೋಡಿದರೆ ನಿಜವಾಗಿಯು ಅಶ್ಚರ್ಯವಾಗುತ್ತದೆ. ನೂರುರಾರು ಇರುವೆಗಳು ಸೇರಿ ಎಲೆಯನ್ನು ಬಗ್ಗಿಸಿ ಒಂದರ ಕಾಲನ್ನು ಇನ್ನೊಂದು ಹಿಡಿದುಕೊಂಡು ಜೋತಾಡುತ್ತಾ, ಕೊಟ್ಟೆಯನ್ನು ಕಟ್ಟುವುದು ಇವುಗಳ ಶಿಸ್ತಿಗೆ ಒಂದು ಉದಾಹರಣೆ.

30.  ಕೆಲಸಗಾರ ಇರುವೆಗಳು ತಿಗಣೆ ಮತ್ತು ಜಿಗಿ ಹುಳುಗಳನ್ನು ಹಿಡಿದು ತಂದು ತಾವು ಕೊಟ್ಟೆಕಟ್ಟಿದ ಮರದ ಕೊಂಬೆಗಳ ಮೇಲೆ ಅವುಗಳನ್ನು ಸಾಕುವುದು ಮತ್ತು ಆ ಕೀಟಗಳ ಎಂಜಲು ಸಹಿಯಾಗಿ ಮಧುರವಾಗಿ ಇರುವುದರಿಂದ ಅವು ಇರುವೆಗಳಿಗೆ ಆಹಾರವಾಗುತ್ತದೆ. ಇವು ಕೆಲಸಗಾರ ಇರುವೆಗಳ ಕೆಲಸವಾಗಿರುತ್ತದೆ.

31. ಚಗಳಿ ಇರುವೆಗಳಲ್ಲಿ ಶಿಸ್ತು, ಧೈರ್ಯ ಮತ್ತು ಒಗ್ಗಟ್ಟು ಹಾಗೂ ಇವುಗಳನ್ನು ಹಿಡಿಯಲು ಹೋದರೆ ತಿರುಗಿ ನಿಂತು ಓಡುವ ಬದಲಿಗೆ ಕಚ್ಚಲು ಸಿದ್ದವಾಗುತ್ತವೆ ಆದ್ದರಿಂದ ಚಗಳಿ ಇರುವೆಗಳನ್ನು ಹಿಮ್ಮೆಟ್ಟಿಸುವುದು ಮನುಷ್ಯರಿಗೂ ಕಷ್ಟ.

32. ಚಗಳಿ ಇರುವೆಗಳು ಲಾರ್ವಾಗಳನ್ನು ಎಲೆಯಿಂದ ಎಲೆಗೆ ಅಂಟಿಸುವಾಗ ಮೇಲಕ್ಕೂ ಕೆಳಕ್ಕೂ ಮಗ್ಗದ ಲಾಳ ಆಡಿಸುವಂತೆ ಆಡಿಸುತ್ತದೆ.

IV.

33. ಚಗಳಿ ಇರುವೆಗಳು ಸಸ್ಯಗಳಲ್ಲಿ ಇರುವ ತಿಗಣೆ ಮತ್ತು ಹಾಗೂ ಜಿಗಿ ಹುಳುಗಳನ್ನು ಹಿಡಿದು ಅವುಗಳಿಂದ ಸಸ್ಯಗಳನ್ನು ರಕ್ಷಿಸುವುದರ ಮೂಲಕ ರೈತನಿಗೆ ಸಹಾಯಕವಾಗಿವೆ. ಗೂಡಿನಲ್ಲಿ ತಿಗಣೆ ಮತ್ತು ಹಾಗೂ ಜಿಗಿ ಹುಳುಗಳನ್ನು ಹಿಡಿದು ತಂದು ಸಾಕುವುದರಿಂದ ,ಅವು ಗಿಡದಿಂದ ಗಿಡಕ್ಕೆ ಹಬ್ಬಿ ಕಾಟ ಕೊಡುವುದರಿಂದ . ಚಗಳಿ ಇರುವೆಗಳು ಇರುವ ಮರದಡಿ ಯಾವ ಪ್ರಾಣಿಗಳು ನಿಲ್ಲುವುದು ಅಪಾಯಕಾರಿಯಾಗಿದೆ.

34. ಅ) ಜೇನು ಹುಳು: ಕೆಲಸಗಾರ ಜೇನುನೊಣಗಳು ತನ್ನ ಬಾಯಿಯಿಂದ ಜೊಲ್ಲು ರಸವನ್ನು ಮೇಣವಾಗಿ ಪರಿವರ್ತಿಸಿ ಆ ಮೇಣದಿಂದ ಗೂಡನ್ನು ಕಟ್ಟುತ್ತವೆ.

ಆ) ರೇಷ್ಮೆ ಹುಳು ವಯಸ್ಸಿಗೆ ಬಂದ ಅಥವಾ ಹಣ್ಣಾದ ರೇಷ್ಮೆ ಹುಳುಗಳು ಬಿಸಿಲಿನ ತಾಪಕೆ ತನ್ನ ಬಾಯಿಯಿಂದ ತಿಳಿ ಹಳದಿ ಹಾಗೂ ಬಿಳಿ ಬಣ್ಣದ ಜೊಲ್ಲನ್ನು ಉತ್ಪಾದಿಸಿ ಆ ಜೊಲ್ಲನ್ನು ತನ್ನ ಸುತ್ತಲೂ ಆವರಿಸಿಕೊಂಡು ಅದು ದಾರದ ರೂಪವಾದ ನಂತರ ನನ್ನ ಸುತ್ತಲೂ ಗೂಡನ್ನು ನಿರ್ಮಿಸುತ್ತದೆ.

34. ಪೂರ್ಣಚಂದ್ರ ತೇಜಸ್ವಿ ಇವರು ರಾಷ್ಟ್ರ ಕವಿ ಕುವೆಂಪು ರವರ ಪುತ್ರ.ಇವರು 1938ರ ಸೆಪ್ಟಂಬರ್ 08ರಂದು ಶಿವಮೊಗ್ಗದಲ್ಲಿ ಜನಿಸಿದರು. ಇವರು ಚಿಕ್ಕಮಗಳೂರು ಜಿಲ್ಲೆಯ ಮೂಡಗೆರೆಯಲ್ಲಿ ನೆಲೆಸಿದರು. ತೋಟಗಾರಿಕೆ, ಛಾಯಾಗ್ರಹಣ, ಬರವಣಿಗೆ ಮತ್ತು ಚಿತ್ರಕಲೆ ಇವುಗಳು ಇವರ ಹವ್ಯಾಸವಾಗಿದೆ. ಕಥೆ, ಕವಿತೆ, ನಾಟಕ, ಕಾದಂಬರಿ, ವೈಚಾರಿಕ ಲೇಖನೆಗಳು, ಪರಿಸರ, ಶಿಖಾರಿ ಸಂಬಂಧಿತ ಬರಹಗಳು, ಇತಿಹಾಸ, ತತ್ವಜ್ಞಾನ, ಮಾನವ ಶಾಸ್ತ್ರ, ಅರ್ಥ ಶಾಸ್ತ್ರ, ವಿಜ್ಞಾನ ಹೀಗೆ ಹಲವು ಪ್ರಕಾರಗಳ ಕೃತಿಗಳನ್ನು ರಚಿಸಿದ್ದಾರೆ. ತೇಜಸ್ವಿಯವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ಲಭಿಸಿದೆ. ಇವರ ಸಮಗ್ರ ಸಾಹಿತ್ಯಕ್ಕಾಗಿ ಪಂಪ ಪ್ರಶಸ್ತಿ ನೀಡಲಾಗಿದೆ. ತೇಜಸ್ವಿಯವರು ಏಪ್ರಿಲ್ 05, 2007ರಂದು ನಿಧನರಾದರು.

V. 35. ಜಟಿಲವಾದ

36. ಕೊನೆ

37. ಒಸರು

38. ಕೂಡಿಸು

39. ಎಂಜಲು

VI. 40. ತ್ರಿನೇತ್ರ
41. ಕೈತೊಳೆ
42. ಅರಗುವರ
43.ಚಕ್ರಪಾಣಿ

VII. 44. ಕಿಟಕಿ, ವಿಕಟಕವಿ, ಮದ್ರಾಸಿನಸಿದ್ರಾಮ, ಕುಟುಕು.

VIII. 45. ಕಾಳಜಿ
46. ಮೆಚ್ಚುಗೆ
47. ಗೌರವ
48. ಪ್ರಾರ್ಥನೆ.

IX.

| ಪೂರ್ವಪದ | | ಉತ್ತರಪದ | ಸಮಾಸ ದ ಹೆಸರು |
|---|---|---|---|
| 49. ಮನೆ | + | ಕೆಲಸ | ತತ್ಪುರುಷ ಸಮಾಸ |
| 50. ಹಿರಿದು | + | ಮರ | ಕರ್ಮಧಾರಯ ಸಮಾಸ |
| 51. ಕೈಯ | + | ಅಡಿ | ಅಂಶಿ ಸಮಾಸ |
| 52. ಕೆಳಗಿನ | + | ತುಟಿ | ಅಂಶಿ ಸಮಾಸ |

X.

53. ಅರಿವೆ, ವಸ್ತ್ರ
54. ಅಡವಿ, ಕಾನನ
55. ಅಳತೆಯ ಮಾನ, ಆನೆ
56. ಕೈಯಿ, ತೆರಿಗೆ.
57. ಖುಷಿ, ಕೋಪ
58. ರಾಜ, ಪ್ರಭು
59. ತಿಕ್ಕು, ಹತ್ತಿರ.

XI.

60. ಆಡಿಗೂ ಆನೆಗೂ ಅಂದರೆ ಚಿಕ್ಕದ್ದಕ್ಕೂ, ದೊಡ್ಡದ್ದಕ್ಕೂ ಇರುವ ವ್ಯತ್ಯಾಸ.
61. ಆಶ್ಚರ್ಯ ಪಡುವುದು.

62. ಹೊಗಳಿ ಹೊಗಳಿ ಹೆಚ್ಚು ಪ್ರಶಂಶಿಸುವುದು.

63. ಓಡಿ ಹೋಗುವುದು.

64. ಹೆದರುವುದು, ಸೋಲುವುದು.

65. ಪುಸ್ತದಲ್ಲಿರುವಷ್ಟನ್ನೇ ತಿಳಿಯುವುದು.

XII.

ಅ. 66. ಹತ್ತಿರ

67. ಒಳಗೆ

68. ಹೆಚ್ಚು.

69. ಅಪರಿಚಿತ

ಆ. 70. ಮಕ್ಕಳ ಅಭಿಪ್ರಾಯ ಹಾಗೂ ಬರಹಕ್ಕೆ ಮನ್ನಣೆ ನೀಡುವುದು.

*** *** ***

## ಗದ್ಯಪಾಠ - 7
## ಬಿಲ್ಲ ಹಬ್ಬ

1. ರಾಯ
2. ಸ್ವತಂತ್ರ
3. ಕಂಸನು ವಸುದೇವ ಮತ್ತು ದೇವಕಿಗೆ ಹೇಳಿದನು.
4. ಕಂಸ ಅಥವಾ ದೇವಕಿ ಅಥವಾ ನಂದ
5. ತಂದೆ.
6. ಕೈಯನ್ನು ತೊಳೆ ಕ್ರಿಯಾಸಮಾಸ
7. ರಾಕ್ಷಸರು
8. ಸರ್ವರಿಗೂ ಆತ್ಮೀಯ ಸ್ವಾಗತ.
9. ಪ್ರಶ್ನಾರ್ಥಕ ಚಿನ್ಹೆ
10. ಮಹಾಭಾರತ.

11. ಪೂತನಿ
12. ಗೂಢಚಾರರು
13. ಸೈನಿಕ ಮತ್ತು ದುರ್ವಿಧ
14. ಸಣ್ಣ ಕೀಲಿನ
15. ಕುವಲಯಾಪೀಡ
16. ಸೆರೆಮನೆ
17. ಹಾಲಾಹಲ
18. ಧನುರ್ಯಾಗ
19. ಮಥುರಾವೀರ
20. ನಂದನ ಮತ್ತು ಯಶೋದೆ

21. ಇ) ಮಂತ್ರಿ, ವೈದ್ಯ
22. ಆ) ಬುಗುರಿ
23. ಅ) ಕ್ರೀಡಾಂಗಣ
24. ಈ) ಹಳದಿ
25. ಈ) ಹದಿನಾರು
26. ಆ)ಅಪರಂಜಿ

27. ಆ) ಮಥುರಾ

28. ಅ)ಅಷ್ಟಮಿ

29. ಆ) ರೋಹಿಣಿ

30. ಇ) ಕೃಷ್ಣ

31. ಎಂಜಿನಿಯರ್ ಆಗಬೇಕೆಂದು

32. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

33. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

34. ಕೃಷ್ಣ ಪೂತನಿಯ ರಕ್ತ ಹೀರಿದನು.

35. ಕೃಷ್ಣನ ಕೈಯಲ್ಲಿ ಸಿಕ್ಕ ತೃಣಾವರ್ತ ಬುಗುರಿಯಾಗಿ ಹೋದ.

36. ಗೋವರ್ಧನ ಬೆಟ್ಟ ಕೃಷ್ಣನ ಕೈಯಲ್ಲಿ ಛತ್ರಿಯಾಯಿತು.

37. ಶೋಧನೆ ಮಾಡುತ್ತಿರುವವರು ಗೂಢಚಾರರು, ಮಂತ್ರಿ.

38. ಮಂತ್ರಿ

39. ಶೈಲಿಯು

40. ಹಳದಿ ಬಣ್ಣ

41. ಹಾಲನ್ನು ಕೊಡಲು

42. ಕ್ಷೀರಸಾಗರದ ಮಥನದ ಕಥೆ

43. ಧನುರ್ಯಾಗ ಮಹೋತ್ಸವ

44. ಕೃಷ್ಣ  ಶಕಟನ ಸೊಂಟ ಮುರಿದನು

45. ಕೃಷ್ಣ ನ ಕೈಯಲ್ಲಿ ಸಿಕ್ಕ ಧೇನುಕ ಬೇಲದ ಹಣ್ಣು ಬಡಿಯೋ ಬಡಿಗೆ ಆದ.

46. ಶೈಲಿಕ ಮತ್ತು     ಧುರ್ವಿದ

47. ವಸುದೇವ ಹೇಳುವಂತೆ ರಾಜಕಾರ್ಯವೆಂದರೆ, ಹತ್ತು ಜನರ ಮದ್ಯೆ ಕೂತಾಗ ನಿದ್ದೆ, ಒಬ್ಬರೆ ಇದ್ದಾಗ ಎಷ್ಟು ಪ್ರಯತ್ನ ಪಟ್ಟರೂ ಬಾರದ ನಿದ್ದೆ.

48. ನಂದನು ವಸುದೇವನ ಪರಮಾಪ್ತ ಪ್ರಾಣ ಮಿತ್ರ   ಎಂದು ಹೇಳುತ್ತಾನೆ.

49. ಕೃಷ್ಣನು ಶಕಟ,ಪೂತನಿ,ತೃಣಾವರ್ತ, ಧೇನುಕ ಮೊದಲಾದ ರಾಕ್ಷಸರನ್ನು ಕೊಂದನು.

50. ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ,ಆ ಕಮಾನಿನ ಮೇಲೆ ಗಾಜಿನ ರಾಜಗೋಪುರ ನಿರ್ಮಿಸಿದ್ದರು. ಆ ಮಾರ್ಗವಾಗಿ  ಬರುವ ಕೃಷ್ಣ   ತಲೇ ಮೇಲೆ ಬಿದ್ದು ಅವನು ಸಾಯುವಂತೆ ಗುಪ್ತ ಏರ್ಪಾಡು ಮಾಡಿದ್ದರು.

51. ವಸುದೇವ ತನ್ನ ಮಕ್ಕಳನ್ನು ನೆನೆಸಿಕೊಂಡು ಹದಿನಾರು ವರ್ಷಗಳಿಂದ ಅವರನ್ನು ನೋಡದಡ ಕೊರಗುತ್ತಿದ್ದನು. ತಮ್ಮ ಮಕ್ಕಳನ್ನು ತಾವು ಆಡಿಸಲಿಲ್ಲ.ಹಾರೈಕೆ ಮಾಡಲಿಲ್ಲ,ತೊದಲು ನುಡಿ ಕೇಳಲಿಲ್ಲ,ಜೋಗುಳ ಹಾಡಲಿಲ್ಲ ಎಂದು ವ್ಯಥೆ ಪಟ್ಟನು.
52. ಕಂಸನುತನಗೆ ತನ್ನ ತಂಗಿಯ ಮೇಲೆ ಅಪಾರ ಪ್ರೀತಿಯಿದೆ.ಆದ್ದರಿಂದಲೇ ಸಂಕೋಲೆ ಹಾಕಿಸಿದರೂ ಅದನ್ನು  ಶುಧ್ಧ ಅಪರಂಜಿಯಿಂದ ಮಾಡಿದ್ದು,ಕೊರಳಿಗೆ ಮೂರೆಳೆ ,ಕೈಗೆ ಎರಡೆಳೆ ಎಲ್ಲವನ್ನು ಚಿನ್ನದಿಂದಲೇ ಮಾಡಿಸಿರುವುದು ಎಂದು ವಸುದೇವ ಹೇಳಿಕೊಂಡಿದ್ದಾನೆ.

53. ದುರ್ವಿಧನು ಪಟ್ಟದಾನೆಗೆ  ಔಷಧ ಪಥ್ಯವನ್ನೆಲ್ಲ ಮಾಡಿದ್ದನು. ಹಳದಿ ಬಣ್ಣವನ್ನು ನೋಡಿದರೆ ಸಾಕು ಮೈ ಮೇಲೆ ಬೀಳುವ ತರಹ ತರಬೇತಿ ನೀಡಿ ತಯಾರು ಮಾಡಿದ್ದನು.
54. ಕಂಸನ ಪ್ರಕಾರ ರಾಜಕೀಯದಲ್ಲಿ ಯಾರನ್ನು ಯಾರೂ ನಂಬಬಾರದು, ನಮ್ಮನ್ನು ನಾವು ಕೂಡ ನಂಬದೇ ಎಲ್ಲರ ಮೇಲೆ ಕಣ್ಣಿಟ್ಟಿರಬೇಕು.
55. ಅಪ್ಪ ಅಮ್ಮನ ಕಣ್ಣೆದುರು ದಿನಾ ದಿನಾ ಚೂರು ಬೆಳೆಯುವುದನ್ನು ನೋಡುವುದೇ ಅಪ್ಪ-ಅಮ್ಮಂದಿರ ಪುಣ್ಯ ಎಂಬುದು ವಸುದೇವನ ಅಭಿಪ್ರಾಯ.
56. ಕಂಸನು ತಾನು ಹಾಕಿರುವ ಸಂಕೋಲೆಯನ್ನು ನೂರಕ್ಕೆ ನೂರರಷ್ಟು ಶುದ್ದ ಅಪರಂಜಿಯಿಂದಲೆ ಮಾಡಿಸಿ, ಕೈಗೆ ಎರಡೆಳೆ, ಕಾಲಿಗೆ ಒಂದೆಳೆ ಮಾಡಿಸಿ ಹಾಕಿರುವುದಾಗಿ ಹೇಳುತ್ತಾನೆ.
57. ಮಥುರಾ ನಗರದಲ್ಲಿ ಬಿಲ್ಲ ಹಬ್ಬದ ಪ್ರಯುಕ್ತ ಧನುರ್ಯಾಗ ಮಹೋತ್ಸವ ನಡೆಯುತ್ತದೆ.  ದೇಶದ ಎಲ್ಲಾ ಕಡೆಯಿಂದಲೂ ಸಾಹಸಿ ಯುವಕರು ಬಂದು ರಾಜನ ಮುಂದೆ ತಮ್ಮ ಶಕ್ತಿ ಪ್ರದರ್ಶಿಸಿ, ಮಥುರಾವೀರ ಪ್ರಶಸ್ತಿ ಗೆಲ್ಲಬೇಕು ಎಂದು ಸಾಹಸ ಪ್ರದರ್ಶಿಸುತ್ತಾರೆ.
58. ಬಯಲಲ್ಲಿದ್ದರೂ ರಾಜನಾದ ಕಂಸನಿಗೆ ಬಂಧಿಗನಾದ ಅನುಭವ. ಎಲ್ಲಿ ಹೋದರೂ ಅಂಗರಕ್ಷಕರ ಕಾಟ.  ನಿಶ್ಚಿಂತೆಯಿಂದ ಊಟ ಮಾಡುವ ಹಾಗಿಲ್ಲ, ನಿಶ್ಚಿಂತೆಯಿಂದ ನಿದ್ದೆ ಮಾಡುವ ಹಾಗಿಲ್ಲ ಎಂಬುದು ಕಂಸನ ವೇದನೆ ಯಾಗಿತ್ತು.
59. ಅಷ್ಟಮಿಯ ದಿನದ ರಾತ್ರಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕಂಸನು ಕೊಲ್ಲಿಸಿದ್ದನು. ಆದರೆ ಕೃಷ್ಣನನ್ನು ಮಾತ್ರ ಕಂಸನಿಗೆ ಕೊಳ್ಳಲು ಸಾಧ್ಯವಾಗಿರಲಿಲ್ಲ.
60. ಕಂಸನು ದೇವಕಿ ಹೊಟ್ಟೆಯಲ್ಲಿ ಹುಟ್ಟಿದ ಎಂಟನೆಯ ಮಗ ನಿನ್ನನ್ನು ಕೊಲ್ಲುತ್ತಾನೆ ಎಂಬ ಅಶರೀರವಾಣಿ ಕೇಳಿದ್ದನು. ಆದ್ದರಿಂದ ಕಂಸನು ಕೃಷ್ಣನನ್ನು ಕೊಲ್ಲಬೇಕೆಂದು ನಿಶ್ಚಯಿಸುತ್ತಾನೆ.

61. ಕಂಸನು ದುರ್ವಿಧ ಮತ್ತು ಶೈಲಿಕನಿಗೆ ವಹಿಸಿರುವ ಕೆಲಸಗಳು ತಪ್ಪಿತೆಂದರೆ ಅವನ ಕೈ ಯಮ ಪಾಶವಾಗುವುದು. ಹೇಗೆಂದರೆ ಶೈಲಿಕನು ಕ್ರೀಡಾಂಗಣದ ರಾಜಗೋಪುರದ ಕಮಾನಿಗೆ ಸಣ್ಣ ಕೀಲಿ ಕೈ ಎಳೆದರೆ ಕೃಷ್ಣ ನ ಮೇಲೆ ಗೋಪುರ ಬಿದ್ದು ಕೃಷ್ಣನು ಸಾಯುವ ಉಪಾಯವನ್ನು ಹೂಡಿದ್ದನು . ಆನೆಯ ತುಳಿತದಲ್ಲಿ  ಕೃಷ್ಣನು ಸಾಯುವ ಉಪಾಯದಲ್ಲಿ ಸ್ವಲ್ಪ ಎಡವಟ್ಟಾದರೂ ಕಂಸನ ಕೈ ಯಮ ಪಾಶವಾಗುವುದು.

62. ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು. ಆ ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ. ಅದೇ ಕಮಾನಿನ ಮೇಲೆ ರಾಜಗೋಪುರ, ಗೋಪುರದ ರಚನೆ ಒಂದು ಸಣ್ಣ ಕೀಲಿನ ಮೇಲೆ ನಿಂತಿರುತ್ತದೆ. ಅದು ತೆಗೆದರೆ ಕೃಷ್ಣ ಸಾಯುವನು ಎಂಬುದು ಶೈಲಿಕನ ಯೋಜನೆ. ಆದರೆ ಅದೇ ಬಾಗಿಲಿನ ಮೂಲಕ ಕಂಸನೂ ಬರುವುದಾದರೆ ಅವನು ಸಾಯುವನು.ಆದ್ದರಿಂದ ಇನ್ನೊಂದು ಬಾಗಿಲು ನಿರ್ಮಿಸಬೇಕೆಂದು ಹೇಳುತ್ತಾನೆ.
63. ಆನೆಯು ಹಳದಿ ಬಣ್ಣ ನೋಡಿದರೆ ಫೀ ಎಂದು ಮೈಮೇಲೆ ಬಿದ್ದು ಪ್ರಾಣವನ್ನು ತೆಗೆಯುತ್ತದೆ. ಒಂದು ವೇಳೆ ಮದ್ದು, ಔಷಧ ಹೆಚ್ಚಾಗಿ ದಾಂದಲೆ ಮಾಡಿ ಮಕ್ಕಳು, ಇತರರಿಗೆಲ್ಲ ತೊಂದರೆ ಕೊಟ್ಟಿತು ಎಂಬ ಕರುಣೆಯಿಂದ ಕೆಲಸ ಮುಗಿದ ಮೇಲೆ ಮದ್ದು ಹಾರಿಸಿ ಸುಟ್ಟುಬಿಡಿ ಎಂದು ಕಂಸ ಹೇಳುತ್ತಾನೆ.
64. ಸೆರೆಮನೆ ಎಂದರೆ ಸ್ವರ್ಣ ಶೃಂಖಲೆಯಲ್ಲಿದ್ದು, ಹೊತ್ತು ಹೊತ್ತಿಗೆ ಊಟ, ಹೊತ್ತು ಹೊತ್ತಿಗೆ ನಿದ್ದೆ ಮಾಡಿಕೊಂಡು ನಿಶ್ಚಿಂತವಾಗಿರುವುದು. ಬಿಸಿಲಲ್ಲಿ ಬೇಯದೆ, ಮಳೆಯಲ್ಲಿ ತೋಯದೇ ನಾಲ್ಕು ಗೋಡೆಗಳ ಮಧ್ಯೆ ಹಾಯಾಗಿರುವುದು. ಹೊರಗೆ ಹೋಗದೆ ಭದ್ರವಾಗಿರುವ ವಿಲಾಸಿ ಭವನ ಎಂಬುದು ಕಂಸನ ಆಲೋಚನೆ.
65. ಅಷ್ಟಮಿಯ ರಾತ್ರಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕೊಲ್ಲಿಸಿದ ಕಂಸನಿಗೆ ಒಂದು ಮಗುವನ್ನು ಮಾತ್ರ ಕೊಲ್ಲಲಿಕ್ಕೆ ಸಾಧ್ಯವಾಗಲಿಲ್ಲ. ಕೊಲ್ಲಲಿಕ್ಕೆ ಕಳಿಸಿದ ಎಲ್ಲಾ ರಾಕ್ಷಸರನ್ನು ಗೋಕುಲದ ಗೊಲ್ಲರ ಹುಡುಗ ಕೃಷ್ಣ ಕೊಂದನು, ಅವನೇ ದೇವಕಿಯ ಅಷ್ಟಮ ಪುತ್ರ ಇರಬೇಕೆಂದು ಕಂಸನ ಅನುಮಾನ.
66. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು

67. ರಾಜನಾಗಿದ್ದರೂ ಸಹ ಸ್ವತಂತ್ರವಾಗಿ ಹೊರಗಡೆ ತಿರುಗಾಡುವ ಹಾಗಿಲ್ಲ. ಸಾವಿನ ಭಯದಿಂದ ಯಾವಾಗಲೂ ಅಂಗರಕ್ಷಕರನ್ನು ಜೊತೆಗೆ ಇರಿಸಿಕೊಂಡಿರಬೇಕು. ನಿಶ್ಚಿಂತವಾಗಿ ಊಟ ಮಾಡುವ ಹಾಗಿಲ್ಲ, ನಿದ್ದೆ ಮಾಡುವ ಹಾಗಿಲ್ಲ. ಏಕೆಂದರೆ ಒಂದು ಕಡೆ ಅಷ್ಟಮಿ ಪುತ್ರನು ಬಂದು ಸಾಯಿಸುವನು ಎಂಬ ಭಯ. ಮತ್ತೊಂದು ಕಡೆ ತಾನು ಸಾಯಿಸಿದ ಅಷ್ಟೂ ಮಕ್ಕಳು ಕಣ್ಣ ಮುಂದೆ ತಕತಕ ಎಂದು ಕುಣಿಯುವ ದೃಶ್ಯ.
68. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.
69. ಕೃಷ್ಣನು ಯಾರು? ಗೊಲ್ಲರ ಹುಡುಗನಾದ ಕೃಷ್ಣನಿಗೆ ರಾಕ್ಷಸರೆಲ್ಲಾ ಸಾಯಿಸುವ ಅಗಾಧವಾದ ಶಕ್ತಿಯು ಎಲ್ಲಿಂದ ಬಂದಿತು ಯಾರು ಅವನಿಗೆ ಈ ಶಕ್ತಿಯನ್ನು ಕೊಟ್ಟಿದ್ದಾರೆ ಎಂಬುದರ ಬಗ್ಗೆ ಗೂಢಾಚಾರರು ಶೋಧನೆ ಮಾಡುತ್ತಿದ್ದಾರೆ.
70. ಬಿಲ್ಲ ಹಬ್ಬದ ನೆಪ: ಕೃಷ್ಣ ಮತ್ತು ಬಲರಾಮರನ್ನು ಮಥುರೆಗೆ ಬರಸೆಳೆಯಲು ಕಂಸನು ನಗರದಲ್ಲಿ ದೊಡ್ಡದೊಂದು 'ಧನುರ್ಯಾಗ' (ಬಿಲ್ಲ ಹಬ್ಬ) ಮತ್ತು ಮಲ್ಲಯುದ್ಧದ ಪಂದ್ಯಾವಳಿಯನ್ನು ಏರ್ಪಡಿಸುತ್ತಾನೆ.

ಕುವಲಯಾಪೀಡ ಆನೆಯ ನಿಯೋಜನೆ: ಕೃಷ್ಣ-ಬಲರಾಮರು ರಂಗದ್ವಾರದ ಮೂಲಕ ಅರಮನೆಯನ್ನು ಪ್ರವೇಶಿಸುವಾಗ ಅವರನ್ನು ತುಳಿದು ಸಾಯಿಸಲು 'ಕುವಲಯಾಪೀಡ' ಎಂಬ ಮದ್ದಾನೆಯನ್ನು ಕೋಪೋದ್ರೇಕಗೊಳಿಸಿ ದ್ವಾರದಲ್ಲೇ ನಿಲ್ಲಿಸಿರುತ್ತಾನೆ. ಹಾಗೂ ಕ್ರೀಡಾಂಗಣದ ಗಾಜಿನ ರಾಜಗೋಪುರದ ನಿರ್ಮಾಣದ ಏರ್ಪಾಡುಗಳನ್ನು ಮಾಡಿರುತ್ತಾರೆ.

71. ಕಂಸ ದೇವಕಿಯ ಅಷ್ಟಮ ಪುತ್ರ ತನ್ನನ್ನು ಕೊಲ್ಲುತ್ತಾನೆ ಎಂಬ ಮಾತಿನಿಂದ ಕಳವಳ ಪಟ್ಟುಕೊಂಡು ಅವನಿಗಾಗಿ ಹುಡುಕುತ್ತಿರುತ್ತಾನೆ.ದೇವಕಿಯನ್ನೆ ಎಲ್ಲಿ ಬಚ್ಚಿಟ್ಟಿದ್ದೀಯ ಹೇಳು, ಹೇಳಿದರೆ ನನ್ನ ರಾಜ್ಯವನ್ನೆಲ್ಲಾ ಕೊಟ್ಟು ಬಿಡುತ್ತೇನೆ ಎಂದು ಪರಿ ಪರಿಯಾಗಿ ಬೇಡಿಕೊಂಡಿದ್ದರು,ಏನು ವಿಷಯ ಗೊತ್ತಾಗದೆ ನಿರಾಶನಾಗಿ ಹಿಂದಿರುಗುತ್ತಾನೆ.

72.

| | |
|---|---|
| ೧. ವಸುದೇವ | ದೇವಕಿ |
| ೨. ರಾಜಗೋಪುರ | ಕೀಲಿ |
| ೩. ಪಟ್ಟದಾನೆ | ಹಳದಿ |
| ೪. ಶೃಂಖಲೆ | ಸ್ವರ್ಣ |
| ೫ .ಬಲರಾಮ | ರೋಹಿಣಿ |
| ೬. ಯಶೋಧೆ | ನಂದನ |
| ೭..ಒಡೆಯ | ಕಂಸ |
| ೮. ಶಿಲ್ಪಿ | ಶೈಲಿಕ |
| ೯. ವೈದ್ಯ | ಧುರ್ವಿದ |
| ೧೦. ಆನೆ | ಕುವಲಾಯಪೀಡ |
| ೧೧. ಬೆಟ್ಟ | ಗೋವರ್ಧನ |

73. ಯಮ ಪಾಶ: ದ್ವಿಚಕ್ರ ವಾಹನ ಸವಾರಿ ಮಾಡುವಾಗ ಹೆಲ್ಮೆಟ್ ಧರಿಸದಿದ್ದರೆ ಯಮ ಪಾಶ ನಮ್ಮ ಹಿಂದೆಯೇಇರುತ್ತದೆ.

74. ಪಥ್ಯ: ದೈನಂದಿನ ಬದುಕಿನಲ್ಲಿ ಆಹಾರ ಪಥ್ಯಗಳಿದ್ದರೆ ಆರೋಗ್ಯ.

75. ಚಿಂತಾಮಗ್ನ: ಜೀವನದಲ್ಲಿ ತೊಂದರೆಗಳಿದುರಾದಾಗ ಚಿಂತಾಮಗ್ನರಾಗದೆ ತೊಂದರೆಗಳನ್ನು ಎದುರಿಸುವ ಪ್ರಯತ್ನ ಮಾಡಬೇಕು.

**76.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

77. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

78. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

79. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

80. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

81. ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**ಗದ್ಯಪಾಠ - 8**

**ಸಂಕ್ರಾಂತಿಯಂದು ಸುಖ-ದುಃಖ**

**(ಉತ್ತರಗಳು)**

I.

1. !
2. ಬಾವಂದಿರು
3. ರಾಜಿ
4. ಯುಗಾದಿ
5. ಎ.ಆರ್ ಮಣಿಕಾಂತ್
6. ವಾಕ್ಯವೇಷ್ಟನ

II.

7. ರಾಷ್ಟ್ರೀಯ ಹಬ್ಬಗಳು
8. ಸಂಕ್ರಾಂತಿ
9. ನಮ್ಮ ಮನೆಯಲ್ಲಿ ನಾಲ್ಕು ದನಗಳು ಇವೆ.
10. ಕಿಚ್ಚು ಹಾಯಿಸುವುದು.
11. ಟ್ರ್ಯಾಕ್ಟರು
12. ಹಳ್ಳಿಗಳಲ್ಲಿ ಪಟೇಲರು ಸಂಕ್ರಾಂತಿಯಂದು ಎಳ್ಳು-ಬೆಲ್ಲ ಕೊಡಿಸಿ, ರಾಜಿ ಮಾಡುತ್ತಾರೆ.
13. ನಮ್ಮ ಸಂಕ್ರಾಂತಿಯಲ್ಲಿ ಪ್ರೀತಿ ಇರಬೇಕು.
14. ಎಳ್ಳು-ಬೆಲ್ಲ.
15. ಪೊಂಗಲ್, ತರಕಾರಿ ಕೂಟು ಹಾಗೂ ಸಿಹಿ ತಿಂಡಿಗಳು.

III.

16. ವಿದ್ಯಾರ್ಥಿಯು ತಾನು ತಿಳಿದ ವಿಷಯವನ್ನು ಅನ್ವಯಿಸಿ ಉತ್ತರಗಳನ್ನು ಬರೆಯುವುದು.
17. ವಿದ್ಯಾರ್ಥಿಯು ತಾನು ತಿಳಿದ ವಿಷಯವನ್ನು ಅನ್ವಯಿಸಿ ಉತ್ತರಗಳನ್ನು ಬರೆಯುವುದು.
18. ವಿದ್ಯಾರ್ಥಿಯು ತಾನು ತಿಳಿದ ವಿಷಯವನ್ನು ಅನ್ವಯಿಸಿ ಉತ್ತರಗಳನ್ನು ಬರೆಯುವುದು.
19. ವಿದ್ಯಾರ್ಥಿಯು ತಾನು ತಿಳಿದ ವಿಷಯವನ್ನು ಅನ್ವಯಿಸಿ ಉತ್ತರಗಳನ್ನು ಬರೆಯುವುದು.
20. ಸಂಕ್ರಾಂತಿ ದಿನದಿಂದ ಸೂರ್ಯನು ದಕ್ಷಿಣದಿಂದ ಉತ್ತರ ದಿಕ್ಕಿಗೆ ಸ್ವಲ್ಪ ಸ್ವಲ್ಪ ಸಂಚರಿಸಲು ಪ್ರಾರಂಭಿಸುತ್ತಾನೆ. ಸಂಕ್ರಾಂತಿಯ ಮರುದಿನದಿಂದಲೇ ಹಗಲು ದೀರ್ಘವಾಗುತ್ತದೆ, ರಾತ್ರಿಯ ಅವಧಿ ಸಹಜವಾಗಿಯೇ ಕಡಿಮೆಯಾಗುತ್ತದೆ. ಉತ್ತರಾಯಣ ಪುಣ್ಯ ಕಾಲ ಬರುವುದು ವರ್ಷದಲ್ಲಿ ಒಂದು ದಿನ ಮಾತ್ರ.

21. ಸಂಕ್ರಾಂತಿಯಂದು ಎಳ್ಳು ಬೆಲ್ಲ ನೀಡುವುದು ಇಂದಿನ ಕಾಲಕ್ಕೆ ಪ್ರತಿಷ್ಟೆಯ ವಿಚಾರವಾಗಿದೆ, ಹೆಚ್ಚು ಎಳ್ಳು ಬೆಲ್ಲ ಕೊಟ್ಟವರು ಶ್ರೀಮಂತರು ಎಂಬುದಾಗಿದೆ. ದೊಡ್ಡದಾಗಿ ಕಾಣಲೆಂದು ದಪ್ಪ ದಪ್ಪ ಸಕ್ಕರೆ ಹಚ್ಚು ಸೇರಿಸಿ, ಎಳ್ಳು ಬೆಲ್ಲ ಪೊಟ್ಟಣ ತಯಾರಿಸುತ್ತಾರೆ. ರೆಡಿ ಮೆಡ್ ಎಳ್ಳು ಬೆಲ್ಲದ ಪ್ಯಾಂಕ್ ಗಳನ್ನು ಮಾಲ್ ಗಳಿಂದ ತಂದು ಕಳಪೆ ಎಳ್ಳು ಬೆಲ್ಲವನ್ನು ಹಂಚಲು ಮುಂದಾಗಿದ್ದಾರೆ. ಜನರು ಮುಖವಾಡಗಳೊಂದಿಗೆ ಬದುಕಲು ಒಪ್ಪಿಕೊಂಡಿದ್ದಾರೆ.
22. ಸಂ-ಕ್ರಾಂತಿ ಎಂದರೆ, ಮುಂದೆ ಎಲ್ಲರಿಗೂ ಉತ್ತಮ ದಿನಗಳ ಸ್ವಾಗತವಾಗಲಿ ಎಂಬ ಆಶಾವಾದ ಹಾಗಾಗಿ ಸಂಕ್ರಾಂತಿ ಜನರಿಗೆ ಉತ್ತಮ ದಿನಗಳ ಸ್ವಾಗತವೇ ಸರಿ.

IV.

23. ೧. ಕುವೆಂಪು
೨. ವಿಸೀ
೩. ಚಂಪಾ
೪.ಪಾಪು
೫.ಕ ಸಾ ಪ
೬.ಬೇವು – ಬೆಲ್ಲ
೭.ಬೆಳಕಿನ ಹಬ್ಬ
೮.ಉಪವಾಸದ ಪರ್ವ ದಿನ
೯.ಏಸು ಹುಟ್ಟಿದ ದಿನ
೧೦.ದಸರಾ
೧೧.ಎಳ್ಳು-ಬೆಲ್ಲ
೧೨.ಧ್ವಜಾರೋಹಣ

V.

24. ದಸರಾ – ದಸರಾ ಅಥವಾ ವಿಜಯದಶಮಿ ಹಿಂದುಗಳ ಪ್ರಮುಖ ಹಬ್ಬವಾಗಿದ್ದು, ಇದು ಕೆಡುಕಿನ ಮೇಲೆ ಒಳಿತಿನ ವಿಜಯನ್ನು ಸಂಕೇತಿಸುತ್ತದೆ. ಇಂದು ಯಾವುದೇ ಹೊಸ ಕೆಲಸ, ವ್ಯಾಪಾರ ಅಥವಾ ವಿದ್ಯಾರಂಭಕ್ಕೆ ಈ ದಿನವನ್ನು ಅತ್ಯಂತ ಮಂಗಳಕರ ಎಂದು ಪರಿಗಣಿಸಲಾಗಿದೆ. ಈ ಹಬ್ಬವು ಮೈಸೂರಿನಲ್ಲಿ ವಿಶೇಷವಾಗಿ ಅತ್ಯಂತ ವೈಭವದಿಂದ ಆಚರಿಸಲಾಗುತ್ತದೆ. ವಿಜಯನಗರ ಸಾರ್ಮಜ್ಯದ ಕಾಲದಿಂದಲೂ ನಡೆದುಕೊಂಡು ಬಂದಿರುವ ಈ ಪರಂಪರೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಸ್ತು ಪ್ರದರ್ಶನ ಮತ್ತು ಜಂಬೂ ಸವಾರಿ ಪ್ರಮುಖ ಆಕರ್ಷಣೆಯಾಗಿದೆ. ದಸರಾ ಹಬ್ಬವನ್ನು ನಾವು ನಾಡ ಹಬ್ಬವಾಗಿ ಆಚರಿಸುತ್ತೇವೆ.
25. ಸ್ವಾತ್ರಂತ್ಯೋತ್ಸವ – ಭಾರತದಲ್ಲಿ ಸ್ವಾತ್ರಂತ್ಯ ದಿನವನ್ನು ಆಗಸ್ಟ 15 ರಂದು ಆಚರಿಸಲಾಗುತ್ತದೆ. ಇದು 1947ರಲ್ಲಿ ಬ್ರಿಟಿಷ್ ಆಳ್ವಿಕೆಯಿಂದ ಹೊರಬಂದದನ್ನು ಸಂಭ್ರಮಿಸುವ ಹಬ್ಬವಾಗಿದೆ. ಅಂದು

ಶಾಲೆ ಯಲ್ಲಿ ಧ್ವಜಾರೋಹಣವನ್ನು ಮಾಡಲಾಗುವುದು. ಪ್ರಮುಖ ಸ್ವಾತಂತ್ರ ಹೋರಟಗಾರರ ವೇಷ ಭೂಷಣವನ್ನು ಧರಿಸಿ ಪ್ರದರ್ಶಿಸಲಾಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಶಿಕ್ಷಕರು ಸ್ವಾತ್ರಂತ್ಯದ ಬಗ್ಗೆ ಎಲ್ಲರಿಗೂ ಹೆಚ್ಚು ವಿವರಣೆ ನೀಡುವರು. ಸ್ವತಂತ್ರ ಭಾರತದ ಪ್ರಾಮುಖ್ಯತೆಯನ್ನು ತಿಳಿಸುವರು. ಈ ದಿನ ಸಹಿ ತಿಂಡಿಗಳನ್ನು ಹಂಚಿ ಸಂಭ್ರಮಿಸಲಾಗುವುದು.

26. ಕನ್ನಡ ರಾಜ್ಯೋತ್ಸವ – ಕನ್ನಡ ರಾಜ್ಯೋತ್ಸವ ದಿನವನ್ನು ನವೆಂಬರ್ 01ರಂದು ನಾಡಿನಾದ್ಯಂತ ಆಚರಿಸಲಾಗುವುದು. ಅಂದು ನಮ್ಮ ಕನ್ನಡ ನಾಡಿಗೆ ಗೌರವ ತರುವ ಪ್ರಮುಖರನ್ನು ಸನ್ಮಾನಿಸಲಾಗುವುದು. ಈ ಸಂದರ್ಭದಲ್ಲಿ ಕನ್ನಡದ ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆ ಮತ್ತು ಇತರೆ ಸಾಧನೆಗಳಿಗೆ ರಾಜ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ನಮಗೆಲ್ಲ ಕನ್ನಡ ನಾಡು ನುಡಿಯ ಬಗ್ಗೆ ಗೌರವ ಹೆಚ್ಚಾಗಲು ಹಿತ ನುಡಿಗಳನ್ನು ಶಿಕ್ಷಕರು ತಿಳಿಸುವರು. ನಮ್ಮೆಲ್ಲರಿಗು ಸಿಹಿ ತಿಂಡಿಗಳನ್ನು ಹಂಚಿಸಲಾಗುವುದು.

VI.

27. ಕ.ಸಾ.ಪ – ಕನ್ನಡ ಸಾಹಿತ್ಯ ಪರಿಷತ್.

ಕ್ರಿ.ಶ - ಕ್ರಿಸ್ತ ಶಕ.

ಸಾ.ಶ - ಸಾಮನ್ಯ ಶಕ.

ಸ.ಪ್ರಾ.ಶಾ – ಸರ್ಕಾರಿ ಪ್ರಾಥಮಿಕ ಶಾಲೆ.

VII.

28. ಕುವೆಂಪು – ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ

ಚಂಪಾ - ಚಂದ್ರ ಶೇಖರ ಪಾಟೀಲ್

ವಿ.ಸೀ – ವಿ. ಸೀತಾರಾಮಯ್ಯ.

ಪಾ.ಪು – ಪಾಟೀಲ್ ಪುಟ್ಟಪ್ಪ

VIII.

29. ವಿದ್ಯಾರ್ಥಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು.

IX.

30. . = ಪೂರ್ಣವಿರಾಮ

31. , = ಅಲ್ಪ ವಿರಾಮ

32. ; = ಅರ್ಧ ವಿರಾಮ

33. : = ವಿವರಣ ಚಿಹ್ನೆ

34. ? = ಪ್ರಶ್ನೆ ಸೂಚಕ

35 ! = ಭಾವ ಸೂಚಕ

# ಪದ್ಯಭಾಗ

## ಮಾದರಿ ಉತ್ತರಗಳು

## ಪದ್ಯ ಪಾಠ 01

## ಹುತ್ತರಿ ಹಬ್ಬ

1. ಹುಲಿ
2. ಭೂದೇವಿ
3. ಶರೀರ, ದೇಹ.
4. ಆಶ್ಚರ್ಯ

5. ಈಶ ಸೇವೆ
6. ದೇಶಕ್ಕಾಗಿ ದುಡಿ

7. ರ್+ಆ,ಜ್+ಅ,ಧ್+ಆ,ನ್+ಈ
8. ವಿಧಿಯ ___ಮಾಟದ___ ಕೊಡಗಿದು
ಮೊದಲೇ ನಮ್ಮದು ಕಡೆಗಿದು
ಕದಲದೆಮ್ಮನು ___ಬೆಡಗಿದು.

9. ಕವಿಶಿಷ್ಯ
10. ಸರೋವರ
11. ತಾಳಲಿ ತೋಳಲಿ ಬಾಳಲಿ
12. ನೈಸರ್ಗಿಕ

13. ಇ) ಸುಗ್ಗಿ ಹಾಡು
14. ಇ) ಹೊಸ ಬೆಳೆ ಬಂದಾಗ
15. ಆ) ಭತ್ತ
16. ಅ) ಪ್ರಕೃತಿ ಮತ್ತು ಕೃಷಿಯ ಮಹತ್ವ
17. ಆ) ಕೃತಜ್ಞತೆ

18. ೧. ಭಾಗಮಂಡಲ

೨. ಕವಿ ಶಿಷ್ಯ

೩.ತಪದಮನೆ

೪. ಸೊಂಟಕ್ಕೆ ಕಟ್ಟುವ ವಸ್ತ್ರ

19. ಬೊಮ್ಮಗಿರಿ ಯಿಂದ ಪುಷ್ಪಗಿರಿಯವರೆಗೆ ಕೊಡಗು ಬೆಳೆದಿದೆ.

20. ಭೂರಮೆಯೂ ಮೋಹನಗಿರಿಯ ಬೆರಗಿನ ರೂಪಿನಿಂದ ನಿಂತಿದ್ದಾಳೆ.

21. ಕೊಡಗಿನ ಪೂರ್ವಜರು ಹುಲಿಯ ಹಾಲನ್ನು ಕುಡಿದಿದ್ದಾರೆ.

22. ಕೊಡಗು ಕಾವೇರಿ ತಾಯಿಯ ತವರು ಮನೆ.

23. ಮುಗಿಲಲ್ಲಿ ಮಿಂಚುವ ಮಿಂಚಿನಂತೆ ಹಸಿರ ರಾಶಿ ಮದ್ಯೆ ಕಾವೇರಿ ಹೊಳೆಯುತ್ತಾಳೆ.

24. ಸೋಲು  ಸಾವರಿಯದವರು ಕೊಡವರು.

25. ಹುತ್ತರಿ ಹಬ್ಬದ ಚಿಮ್ಮಿ  ಪಾತರೆ ಕೋಲಹೊಯ್ಲಿಗೆ ಕುಣಿವ ಪದ ಹೊರಹೊಮ್ಮ ಬೇಕು.

26. ಹುತ್ತರಿ ಹಬ್ಬವನ್ನುಕೊಡಗರು ಹೊಸ ಅಕ್ಕಿಯನ್ನು ಮನೆಗೆ ತರುವಾಗ ಆಚರಿಸುವ ಹಬ್ಬವಾಗಿದ್ದು ,ಕೊಡಗಿನ  ಸುಗ್ಗಿ ಹಬ್ಬವೂ ಆಗಿದೆ.

27. ಕೊಡಗರ ಪೂರ್ವಜರು ಹುಲಿಯ ಹಾಲನ್ನೇ ಕುಡಿದಂತಹ ಶೌರ್ಯವಂತರು, ಕವಣೆಯ ಹಗ್ಗಕ್ಕೆ ಹೆಬ್ಬಾವನ್ನು ಸೆಳೆದವರು, ಆನೆಯ ಕೊಂಬನ್ನೇ ಆಟಕ್ಕೆ ಬಳಸಿದಂತಹ ವೀರರು ಹಾಗಾಗಿ ಇವರು ಸೋಲನ್ನೇ ಕಾಣದವರು.

28. ಕೊಡಗನ್ನು ಚಂದರ ವರ್ಮನು ಚಂಗಾಳ್ವ ಅರಸರು ಹಾಗೂ ಹಾಲೇರಿಯ ಮನೆತನದವರು ಆಳಿದರು.

ಡುಗಲಿ ವೀರರು ಹುಲಿಯ ಹಾಲನ್ನು ಕುಡಿದವರು ಕವಣೆಯ ದಾರಕ್ಕೆ ಹೆಬ್ಬಾವನ್ನು ಸೆಳೆ

29. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

30. ಕಾವೇರಿಯು ಗಿರಿಯ ಬೆರಗಿನ ಸೊಬಗಿನಿಂದ ಇಳಿದು ಬಂದು ಮುಗಿಲಿಗೆ ಮಿಂಚು ಕಾಣುವಂತೆ ಹೊಳೆಯಾಗಿ ಹೊಳೆದು ತನ್ನ ನಂಬಿದವರ ನೆಲವನ್ನು ಮನವನ್ನು ತಣಿಸಿ ಹೊಲದ ಕಳೆಯನ್ನು ಕಳೆಯುವ ತರಹ ಹರಿಯುತ್ತಿದ್ದಾಳೆ.

31. ಕವಿಯು ಕೊಡಗಿಗೆ ಭೂರಮೆಯೇ ಇಳಿದು ಬಂದು ನೆಲೆಸಿರುವಳು,ಕಾವೇರಿಯು ಮೈದುಂಬಿ ಹರಿಯುವ ಬೀಡಾಗಿರುವುದು, ಸೋಲು ಸಾವು ಕಾಣದ ವೀರರು ಇರುವ ನಾಡಾಗಿರುವುದು. ಬೊಮ್ಮಗಿರಿಯಿಂದ ಪುಷ್ಪಗಿರಿಯವರಿಗೆ ಹಬ್ಬಿರುವ ದೇಶವಾಗಿದೆ. ಎಂದು ವರ್ಣಿಸುತ್ತಾ ಅಗಸ್ತ್ಯನ ತಪವಗೈದ ಮನೆಯಾಗಿದ್ದು, ಕಾವೇರಿ ಜನಿಸುವ ನೆಲೆಯಾಗಿದೆ ಎಂದು ವರ್ಣಿಸಿದ್ದಾರೆ.

32. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

33. ಕೊಡಗಿನ ಪುರುಷರು ಸೊಂಟಕ್ಕೆ ಸುತ್ತುವ ವಸ್ತ್ರವನ್ನು ಕಟ್ಟಿ ತಲೆಗೆ ಸುತ್ತಿದ ಪೇಟದೊಂದಿಗೆ ಕೈಯಲ್ಲಿ ಪಾತುರೆ ಕೋಲ ಹಿಡಿದು ಕಪ್ಪು ಶ್ವೇತ ವರ್ಣದ ಧಿರಿಸಿನೊಂದಿಗೆ ಮಿಂಚುವರು. ಮಹಿಳೆಯರು ಸಂಪ್ರದಾಯ ಬದ್ದ ಸೀರೆಯೊಂದಿಗೆ ತಲೆಗೆ ವಸ್ತ್ರವನ್ನು ಸುತ್ತಿ ತಮ್ಮ ಸಂಸ್ಕೃತಿ ಮೆರೆಯುವರು.

34. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
35. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
36. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.ಹಾಗೂ ಶಿಕ್ಷಕರು ತಮ್ಮ ಮೊಬೈಲ್ ಸಾಧನದಿಂದ ಒಂದು ವೆಬ್ ಸಿರೀಸ್ ಮಾಡುವ ಪ್ರಯತ್ನ ಮಾಡುವುದು.
37. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
38. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

39. ಹುತ್ತರಿ ಹಬ್ಬದ ಸಮಯದಲ್ಲಿ ಕೊಡಗಿನ ಪ್ರಕೃತಿಯು ಅತ್ಯಂತ ರಮಣೀಯವಾಗಿ ಕಾಣುತ್ತದೆ. ಬೆಟ್ಟದ ತುದಿಯಲ್ಲಿ ಮಂಜಿನ ಸಾಲುಗಳು ಕಿರೀಟದಂತೆ ಧರೆಗಿಳಿಯುತ್ತವೆ. ಗದ್ದೆಗಳಲ್ಲಿ ಕದಿರು ತುಂಬಿದ ಭತ್ತದ ಪೈರುಗಳು ಬಂಗಾರದಂತೆ ಹೊಳೆಯುತ್ತಾ, ತಂಗಾಳಿಗೆ ತೂಗಾಡುತ್ತಿರುತ್ತವೆ. ತೋಟಗಳಲ್ಲಿ ಅಡಿಕೆ ಮತ್ತು ತೆಂಗಿನ ಮರಗಳು ಹಸಿರಿನಿಂದ ನಳನಳಿಸುತ್ತಿರುತ್ತವೆ. ಕಾವೇರಿ ನದಿಯು ಹಾಲಿನ ನೊರೆಯಂತೆ ಉಕ್ಕಿ ಹರಿಯುತ್ತಾ ಪ್ರಕೃತಿಗೆ ಹೊಸ ಕಳೆಯನ್ನು ತರುತ್ತದೆ. ಒಟ್ಟಾರೆ ಇಡೀ ಕೊಡಗು ಸೀಮೆಯು ಹಸಿರು ಸೀರೆಯನ್ನುಟ್ಟು ಸಿಂಗಾರಗೊಂಡ ಕನ್ಯೆಯಂತೆ ಕಂಗೊಳಿಸುತ್ತದೆ ಎಂದು ಕವಿ ವರ್ಣಿಸಿದ್ದಾರೆ.

40. ಹುತ್ತರಿ ಹಬ್ಬವು ಕೊಡಗಿನ ಜನರ ಅತ್ಯಂತ ದೊಡ್ಡ ಸುಗ್ಗಿ ಹಬ್ಬವಾಗಿದೆ. ಹಬ್ಬದ ದಿನದಂದು ಜನರು ಮುಂಜಾನೆಯೇ ಎದ್ದು ಮಿಂದೆದ್ದು, ಹೊಸ ಬಟ್ಟೆಗಳನ್ನು ಧರಿಸಿ ಸಿದ್ಧರಾಗುತ್ತಾರೆ. ನಂತರ ಇಡೀ ಕುಟುಂಬದವರು ಸಾಂಪ್ರದಾಯಿಕ ಉಡುಪುಗಳನ್ನು ತೊಟ್ಟು, ಕೈಯಲ್ಲಿ ಕತ್ತಿ, ಗುರಾಣಿ ಮತ್ತು ತೋಪೆಗಳನ್ನು ಹಿಡಿದು ವಾದ್ಯಮೇಳಗಳೊಂದಿಗೆ ಗದ್ದೆಗೆ ಹೊರಡುತ್ತಾರೆ. ಗದ್ದೆಯಲ್ಲಿ ಪೂಜೆ ಸಲ್ಲಿಸಿ, 'ಪೊಲಿ ಪೊಲಿ ದೇವ ಲೊ ಪ್ರಜಾಪತಿ' ಎಂದು ಕೂಗುತ್ತಾ ಹೊಸ ಭತ್ತದ ಕದಿರನ್ನು ಕತ್ತರಿಸುತ್ತಾರೆ. ಆ ಕದಿರನ್ನು ಮನೆಗೆ ತಂದು ಹೊಸ್ತಿಲಿಗೆ ಕಟ್ಟಿ, ನಂತರ ಎಲ್ಲರೂ ಸೇರಿ ಹೊಸ ಅಕ್ಕಿಯ ಪಾಯಸವನ್ನು ಉಂಡು, ಸಾಂಪ್ರದಾಯಿಕ ಕೋಲಾಟ ಮತ್ತು ನೃತ್ಯಗಳನ್ನು ಮಾಡುತ್ತಾ ಹಬ್ಬವನ್ನು ಅತ್ಯಂತ ಸಡಗರದಿಂದ ಆಚರಿಸುತ್ತಾರೆ.
41. ಈ ಪದ್ಯದ ಮೂಲಕ ಕವಿ ಪ್ರಕೃತಿ ಮತ್ತು ಮಾನವನಿಗಿರುವ ಅವಿನಾಭಾವ ಸಂಬಂಧವನ್ನು ತಿಳಿಸಿದ್ದಾರೆ. ಕಷ್ಟಪಟ್ಟು ದುಡಿದ ರೈತನಿಗೆ ಭೂಮಿತಾಯಿಯು ನೀಡುವ ಬೆಳೆಯೇ ನಿಜವಾದ ಸಂಪತ್ತು ಎಂಬುದನ್ನು ಹಬ್ಬದ ಆಚರಣೆ ನೆನಪಿಸುತ್ತದೆ. ಜಾತಿ-ಮತಗಳ ಭೇದವಿಲ್ಲದೆ ಎಲ್ಲರೂ ಒಟ್ಟಾಗಿ ಸಂಭ್ರಮಿಸುವುದರಿಂದ ಸಾಮಾಜಿಕ ಸಾಮರಸ್ಯ ಬೆಳೆಯುತ್ತದೆ. ನಮ್ಮ ನೆಲದ ಸಂಸ್ಕೃತಿ,

ಆಚಾರ-ವಿಚಾರಗಳು ಮತ್ತು ಪ್ರಕೃತಿಯನ್ನು ನಾವು ಗೌರವಿಸಬೇಕು ಹಾಗೂ ರಕ್ಷಿಸಬೇಕು ಎಂಬ ಉದಾತ್ತವಾದ ಸಂದೇಶವನ್ನು ಕವಿ ಈ ಪದ್ಯದ ಮೂಲಕ ನಮಗೆ ನೀಡಿದ್ದಾರೆ.

42. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

*** ** ***

## ಪದ್ಯಪಾಠ -2

## ಸ್ವಾತಂತ್ರ್ಯ ಸ್ವರ್ಗ

**I.**

**1.** ಮೇಲಿನ ಎಲ್ಲವೂ

**2.** ಮೆದುಳು

**3.** ತಮಸಾ ನದಿಯ ಎಡ ಬಲದಿ

**4.** ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿಯರು ಬಂದಿದ್ದಾರೆ

**5.** ಹಾಕಿಕೊಂಡು,ಕುಳಿತುಕೊಂಡು **.**

II.

6. ವಿದ್ಯಾರ್ಥಿಗಳ ಅಭಿವ್ಯಕ್ತಿ ಗೆ ಅವಕಾಶ ನೀಡುವುದು.

**7.** ಸಂಕುಚಿತ ಮನೋವೃತ್ತಿ ಅಳಿದರೆ ವಿಶ್ವವೆಂಬುದು ಹೋಳಾಗದೆ ಒಂದಾಗಿರುವುದು.

8. ಅವ್ವ ನವಚೇತನ, ಸುಮನ ಸೌರಭ, ಗಂಧಕೇಶರ,ತಮಸಾ ನದಿ ಎಡಬಲದಿ( ಇವುಗಳಲ್ಲಿ ಯಾವುದಾದರೂ ಒಂದನ್ನು ಪರಿಗಣಿಸುವುದು.)

9. ಸ್ವಾತಂತ್ರ್ಯ ಸ್ವರ್ಗದಲ್ಲಿ ಅಭಿಮಾನಧನವೆನಿಪ ಮಸ್ತಕವು ಜಗ್ಗದೆ , ಕುಗ್ಗದೆ ,ತಗ್ಗದೆ ಬಗ್ಗದೆ ನೀಟಾಗಿರಬೇಕು .

10. ಎಲ್ಲಿ ವಿಶಾಲತೆಯ ನಡೆ – ನುಡಿಗಳಿರುವುದೋ , ಮನಸ್ಸು ಅರಳುವ ಮಾತು ಇರುವುದೋ , ಅಲ್ಲಿ ನಿನ್ನಪ್ರೀತಿ , ದಯೆ , ಕೃಪೆಯಿದ್ದರೆ , ನಿನ್ನನೇ ಧ್ರುವತಾರೆ ಎಂದು ತಿಳಿಯಬಹುದು . ಅಂತಹ ಸ್ವಾತಂತ್ರ್ಯವೇ ನಿಜವಾದ ಸ್ವರ್ಗ .

III.

11. ನಿರ್ಮುಕ್ತ =ನಿರ್+ಮುಕ್ತ
ಹರಿಗಡಿಯದೆ =ಹರಿ+ಕಡಿಯದೆ
ನಿನ್ನೊಲವು =ನಿನ್ನ+ಒಲವು
ಧ್ರುವವತಾರೆಯೆಂದರಿವುದು= ಧ್ರುವವತಾರೆ+ಎಂದು+ಅರಿವುದು
ಮನವರಳಿ=ಮನ+ಅರಳಿ

12. ಜಗ – ಜಗತ್ತು ಪ್ರಪಂಚ
ಸತ್ಯ- ನಿಜ
ಮರಳುಗಾಡು – ಮರುಭೂಮಿ
ಪ್ರವಾಹ = ನೆರೆ, ಅತಿವೃಷ್ಟಿ
ಅನುಗ್ರಹ – ಕೃಪೆ, ಆಶೀರ್ವಾದ
ವಾಹಿನಿ-ನದಿ
ಪ್ರೀತಿ = ಒಲವು . ಅನುರಾಗ

13. ಸ್ವತಂತ್ರ – ಸ್ವಾತಂತ್ರ

ವಿಶಾಲ = ವೈಶಾಲ್ಯತೆ

ನವೀನ = ನಾವಿನ್ಯತೆ

ಕಠಿಣ = ಕಾಠಿಣ್ಯತೆ

ಕರುಣ = ಕಾರುಣ್ಯ

ಮಧುರ = ಮಾಧುರ್ಯ

14. ಇವರು 1925 ರ ಮಾರ್ಚ್ 3 ರಂದು ಬೆಳಗಾವಿ ಜಿಲ್ಲೆ , ಹುಕ್ಕೇರಿ ತಾಲ್ಲೂಕಿನ ಉಳ್ಳಾಗಡ್ಡಿ ಖಾನಾಪುರದಲ್ಲಿ ಜನಿಸಿದರು .1989 ರಿಂದ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ . ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ ಲಭಿಸಿದೆ . ಅವ್ವ ಪಟ್ಟದಿಗಳ ಸಂಗ್ರಹವನ್ನು, 'ನವಚೇತನ ', 'ಗಂಧ ಕೇಶರ ' 'ಸುಮನ ಸೌರಭ ' ಎಂಬ ಕವನ ಸಂಗ್ರಹಗಳನ್ನು ಬರೆದಿದ್ದಾರೆ.

15. ನಿರ್ಭೀತ ನಿರ್ಮುಕ್ತ ಮನವು ತಾನೆಲ್ಲಿಹುದು;
ಅಭಿಮಾನಧನವೆನಿಪ ಮಸ್ತಕವದು
ಜಗ್ಗದೆಯೆ ಕುಗ್ಗದೆಯೆ ತಗ್ಗದೆಯೆ ಬಗ್ಗದೆಯೆ
ಮೇಲ್ಮೊಗದಿ ನೀಟಾಗಿ ನಿಂದಿರುವುದು;-
ಅಲ್ಲಿ ಆ ಸ್ವಾತಂತ್ರ್ಯ -ಸ್ವರ್ಗದಲಿ, ಓ ತಂದೆ!
ಏಳಲೈ ಬಾಳಲೈ ನಾಡೆಮ್ಮದು

16. ನಿತ್ಯ ವೈಶಾಲ್ಯವಹ ನಡೆ-ನುಡಿಗಳಿಂದಾಗಿ
ಮನವರಳಿ ತಾನಲ್ಲಿ ಮುಂದರಿವುದು,
ನಿನ್ನೊಲವು, ನಿನ್ನ ದಯೆ, ನಿನ್ನ ಕೃಪೆಯಿಂದಾಗಿ
ನಿನ್ನನ್ನೆ ಧ್ರುವತಾರೆಯೆಂದರಿವುದು;-
ಅಲ್ಲಿ ಆ ಸ್ವಾತಂತ್ರ್ಯ -ಸ್ವರ್ಗದಲಿ, ಓ ತಂದೆ!
ಏಳಲೈ ಬಾಳಲೈ ನಾಡೆಮ್ಮದು!

17. ಜಿಲ್ಲೆಗಳು, ಊರುಗಳು, ಕೊಠಡಿಗಳು, ನಾಯಿಗಳು, ಹಕ್ಕಿಗಳು, ಅಣ್ಣಂದಿರು, ಚಿಕ್ಕಮ್ಮಂದಿರು, ನದಿಗಳು, ಬೆಟ್ಟಗಳು, ದೊಡ್ಡಮ್ಮಂದಿರು,ಅತ್ತೆಯಂದಿರು, ತಮ್ಮಂದಿರು, ಬಾವಂದಿರು

18. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

19. ಕವಿಯು, ಬಾಳು ಹೇಗಿರಬೇಕೆಂದರೆ ಅವರ ಅರಿವು ಸರ್ವ ಸ್ವತಂತ್ರವಾಗಿ ಸಂಕುಚಿತತೆ ನಾಶವಾಗಿ , ವಿಶ್ವ ಖಂಡ ಖಂಡವಾಗದೆ ಒಂದೇ ಒಂದಾಗಿ ಚೆನ್ನಾಗಿ ಬಾಳಬೇಕು . ಅಂತಹ ನಾಡು ಎಂಬ ಸ್ವಾತಂತ್ರ್ಯ ಸ್ವರ್ಗದಲ್ಲಿರಬೇಕು ಎಂದು ಆಶಿಸುತ್ತಾರೆ .

20. ಸಂಪ್ರದಾಯದ ಅನಿಷ್ಟ ರೂಢಿ – ನಿಯಮಗಳು ನಿರ್ಜನ ಬರಿತ ಮರುಭೂಮಿಯಂತೆ , ಅಲ್ಲಿ ಸುವಿಚಾರಗಳೆಂಬ ವಾಹಿನಿಯು ( ನದಿಯು ) ಹರಿಯದಿದ್ದರೆ ಮುಂದುವರಿಯುವುದು ಹೇಗೆ ? ಎಂದಿದ್ದಾರೆ .
21. ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.
22. .ಹಕ್ಕಿ ಅಕ್ಕಿಯನ್ನು ತಿನ್ನುತ್ತದೆ.
23. ಅಣ್ಣ ಅನ್ನವನ್ನು ಉಣ್ಣುತ್ತಾನೆ.
24. ಬಾಳೆಯ ಹಣ್ಣನ್ನು ಬಾಲೆಯು ತಿಂದಳು.
25. ನಮ್ಮ ಶಾಲೆಯ ಆಶಾ ಹಸಿರು ಬಣ್ಣದ ಪುಸ್ತಕ ತಂದಿದ್ದಾಳೆ.
26. ನಮ್ಮ ಮನೆಯಲ್ಲಿ ಎಂಟು ದನಗಳು ಇವೆ.
27. ನಮ್ಮ ತರಗತಿಯಲ್ಲಿ 60 ಹುಡುಗರು ಇದ್ದಾರೆ.
28. 6ನೇ ತರಗತಿಯಲ್ಲಿ 20 ಹುಡುಗಿಯರು ಇದ್ದಾರೆ.
29. ಅಧ್ಯಕ್ಷರು ವೇದಿಕೆಯನ್ನು ಹತ್ತಿದ್ದಾರೆ.

*** *** ****

## ಪದ್ಯಪಾಠ -3

## ಭಾಗ್ಯದ ಬಳೆಗಾರ

I.

1. ನಲಿತಾವೆ
2. ಗಿಣಿ
3. ಪಗಡೆಯ
4. ಹಸಿರು
5. ಕಂಚಿನ
6. ಮುತ್ತಿನ
7. ತವರಿಗೆ
8. ಹಡೆದವ್ವ

II.

9. ತಾಯಿ
10. ಹೆಣ್ಣು
11. ಮೈಮೇಲೆ ಚುಕ್ಕೆಗಳಿರುವ ಜಿಂಕೆ
12. ಮನೆ
13. ತಾಯಿಯ ಮನೆ
14. ತೆಗೆದುಕೊಂಡು ಹೋಗು
15. ಕಬ್ಬಿನ ರಸ ತೆಗೆಯುವ ಯಂತ್ರ
16. ಸೀಬೆ

III.

17. ೧.ಕಂಚಿನದು

೨. ಮುತ್ತಿನದು

೩.ಅಚ್ಚ ಕೆಂಪಿನದು

೪.ಬಾಳೆ

೫. ಸೀಬೆ

IV.

18. ಮುತ್ತೈದೆ ಹೆಣ್ಣು ಬಳೆಗಾರನನ್ನು ತನ್ನ ತವರಿಗೆ ಹೋಗಲು ಹೇಳುತ್ತಿದ್ದಾಳೆ
19. ಹಡೆದವ್ವ ಪಗಡೆಯ ಆಟವನ್ನು ಆಡುತ್ತಾಳೆ
20. ಹಡೆದವ್ವನಿಗೆ ಅಚ್ಚ ಕೆಂಪಿನ ಬೆಳೆ ಮತ್ತು ಹಸಿರು ಗೀರಿನ ಬಳೆ ಎಂದರೆ ಇಷ್ಟ
21. ಬಾಳೆ ಮತ್ತು ಸೀಬೆ ಗಿಡಗಳ ನಡುವೆ ಹೋಗಬೇಕೆಂದು ಬಳೆಗಾರನಿಗೆ ಮುತ್ತೈದೆ ಹೇಳುತ್ತಾಳೆ.

**22.** ತವರಿಗೆ ಹೋಗಲು

**23.** ಹಂಚಿನ ಮನೆ ಹಾಗೂ ಕಂಚಿನ ಕದವಿದೆ.

**24.** ಬಾಳೆಯನ್ನು ಬಲಕ್ಕೆ ಹಾಗೂ ಸೀಬೆಯನ್ನು ಎಡಕ್ಕೆ ಬಿಟ್ಟು ತವರು ಮನೆಗೆ ದಾಟಬೇಕು.

**25.** ಮುತ್ತಿನ ಚಪ್ಪರ.

**26.** ಅರ್ಥ ಪೂರ್ಣವಾಗಿಯೂ ಹಾಗೂ ನೇರ ಮತ್ತು ಸಂಕ್ಷಿಪ್ತವಾಗಿರಬೇಕು.

**27.** ಜನಪದ

V.

**28.** ತವರು ಮನೆಯು ಹೆಂಚಿನ ಮನೆಯಾಗಿದ್ದು ಕಂಚಿನ ಕದವನ್ನು ಹೊಂದಿದೆ ಮಿಂಚಿನಂತೆ ಹೊಳೆಯುವ ಎರಡು ಗಿಳಿಗಳು ಇವೆ.

**29.** ಬಲಕ್ಕೆ ಬೆಳೆದಿರುವ ಬಾಳೆ ಮತ್ತು ಎಡಕ್ಕೆ ಬೆಳೆದಿರುವ ಸೀಬೆಯ ಮಧ್ಯದಲ್ಲಿ ಹೋಗಬೇಕು ಅಲ್ಲಿ ಆಲೆ ಮನೆಯಲ್ಲಿ ಗಾಣ ತಿರುಗುತ್ತಿರುತ್ತದೆ ನವಿಲು ಸಾರಂಗಗಳು ನಲಿಯುತ್ತಿರುತ್ತವೆ ಇವು ತವರು ಮನೆಗೆ ಹೋಗಲು ಗುರುತುಗಳು.

**30.** ಅಳಗುಳಿ ಮನೆ,ಚೌಕಬಾರ,ಆನೆ ಕುರಿ ಮುಂತಾದ ಆಟಗಳನ್ನು ಜನಪದರು ಆಡುತ್ತಿದ್ದರು.

**31.** ಉದಾಹರಣೆಗೆ, ಹಣ್ಣು ಮಾರುವವರು, ತರಕಾರಿ ಮಾರುವವರು, ಸೊಪ್ಪು ಮಾರುವವರು ಹಾಗೂ ವಿವಿಧ ವಸ್ತುಗಳನ್ನು ಮಾರುವವರು ನಮ್ಮ ಮನೆಯ ಬಳಿ ಮಾರಾಟಕ್ಕಾಗಿ ಬರುತ್ತಾರೆ. (ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.)

**32.** ಉತ್ತಮ ಪತ್ರವು ಲಿಖಿತ ರೂಪದಲ್ಲಿ ಪ್ರಥಮ ಭಾಷೆ, ಪತ್ರದ ವಿಷಯ ಮತ್ತು ಶೈಲಿ ಹಾಗೂ ಪತ್ರದ ಆರಂಭ ಮತ್ತು ಮುಕ್ತಾಯದ ಒಕ್ಕಣೆ, ವಿಳಾಸ, ದಿನಾಂಕ ಮತ್ತು ಬರೆದವರ ಸಹಿ ಇರಬೇಕು.

**33.** ಪತ್ರದ ಭಾಷೆ ಸರಳವಾಗಿರಬೇಕು, ಸ್ಪಷ್ಟವಾಗಿರಬೇಕು, ನೇರವಾಗಿರಬೇಕು, ಬರವಣಿಗೆ ಅಂದವಾಗಿರಬೇಕು ಹಾಗೂ ಕಾಗುಣಿತ ದೋಷಗಳಿಂದ ಮುಕ್ತವಾಗಿರಬೇಕು.

**34.** ತವರು ಮನೆಗೆ ಹೋಗುವ ದಾರಿಯಲ್ಲಿ ಆಲೆಮನೆ ಇದೆ. ಅಲ್ಲಿ ಕಬ್ಬಿನಿಂದ ರಸ ತೆಗೆಯುವ ಗಾಣ ತಿರುಗುತ್ತದೆ. ನವಿಲು ಮತ್ತು ಸಾರಂಗಗಳು ನಲಿಯುತ್ತಿರುತ್ತವೆ ಅದೇ ನನ್ನ ತವರೂರು ಎಂದು ಮುತ್ತೈದೆಯು ಬಳೆಗಾರನಿಗೆ ತನ್ನ ತವರು ಮನೆಗೆ ಹೋಗಲು ಗುರುತುಗಳನ್ನು ಹೇಳುತ್ತಾಳೆ. ಆದರೆ ಬಳೆಗಾರ ನನಗೆ ನಿನ್ನ ತವರೂರ ಗುರುತು ಸಿಗುತ್ತಿಲ್ಲ ನೀನೇ ಬಂದು ತೋರಿಸು ಎಂದು ಮುತ್ತೈದೆ ಹೆಣ್ಣನ್ನು ಕೇಳುತ್ತಾನೆ.

**35.** ಪದಬಂಧದ ಉತ್ತರಗಳು

| | | | | | |
|---|---|---|---|---|---|
| | | | | | 1.ಬ |
| 1.ಪ | ಗ | ಡೆ | | | ಳೆ |
| | | | 2.ಜ | | ಗಾ |
| | 2.ತೆಂ | ಗಿ | ನ | ಮ | ರ |
| | ಕ | | ಪ | | |
| 3.ಗಾ | ಣ | | ದ | | |

**36.** ವಿವರಣೆಯ ಸೂಕ್ತತೆ ಮತ್ತು ಅಭಿವ್ಯಕ್ತಿಯನ್ನು ಗಮನಿಸಿ ಮಾರ್ಗದರ್ಶನವನ್ನು ನೀಡುವುದು.

VIII.

**37.** ಮಕ್ಕಳ ವಾಕ್ಯ ರಚನಾ ಸಾಮರ್ಥ್ಯವನ್ನು ನಿರ್ಧರಿಸುವುದು.

**38.** ಮಕ್ಕಳ ವಾಕ್ಯ ರಚನಾ ಸಾಮರ್ಥ್ಯವನ್ನು ನಿರ್ಧರಿಸುವುದು.

**39.** ಮಕ್ಕಳ ವಾಕ್ಯ ರಚನಾ ಸಾಮರ್ಥ್ಯವನ್ನು ನಿರ್ಧರಿಸುವುದು.

**40.** ಮಕ್ಕಳ ವಾಕ್ಯ ರಚನಾ ಸಾಮರ್ಥ್ಯವನ್ನು ನಿರ್ಧರಿಸುವುದು.

**41.** ಮಕ್ಕಳ ವಾಕ್ಯ ರಚನಾ ಸಾಮರ್ಥ್ಯವನ್ನು ನಿರ್ಧರಿಸುವುದು.

IX.

**42.** ಅ. ಖಾಸಗಿ ಪತ್ರ ಆ. ವ್ಯವಹಾರಿಕ ಪತ್ರ

**43.** ಮಗುವಿನ ಬರವಣಿಗೆಯನ್ನು ಪ್ರಶಂಸಿಸಿ ತಿದ್ದುವುದು.

**44.** ಅಭಿನಯಕ್ಕೆ ಪ್ರೇರಣೆ ನೀಡುವುದು.

X.

**45.** ನಿಪುಣನಾದವನು.

**46.** ಈಗಿದ್ದದ್ದು ಈಗಲೇ ಕಾಣದಾಗುವುದು.

**47.** ಯಾಮಾರುವುದು.

**48.** ಅತಿಯಾಗಿ ಹೊಗಳುವುದು.

**49.** ಹಾಳುಮಾಡುವುದು.

**ಪದ್ಯಪಾಠ – 4**

## ವಚನಗಳ ಭಾವ ಸಂಗಮ

**I.**

**1.** ೧.ಜೇಡರ ದಾಸಿಮಯ್ಯ

೨.ಸತ್ಯಕ್ಕ

೩.ಕ್ರಿಯಾಪದ

೪.ಮಡಿವಾಳ ಮಾಚಯ್ಯ

II.

**2.** ತೆರಿಗೆ

**3.** ಜೇಡರ ದಾಸಿಮಯ್ಯ

**4.** ಮುಕ್ತಾಯಕ್ಕ

**5.** ಹೇಳಿದರು

**6.** ರೈತ

**7.** ಪಾಠ

III

**8.** ಹರಿದ ಗೋಣಿಯಲೊಬ್ಬ ಇರುಳೆಲ್ಲ ಸುಂಕಕಂಜಿ ನಡೆದನು.

**9.** ಶಿವನ ಮೇಲಿನ ಭಕ್ತಿ ನಿಂದಕರ ನುಡಿಯಿಂದ ಛೇಡಿಸಿದಾಗ ಪ್ರಭೆಯಾಯಿತು .

**10.** ಹಿಡಿದ ವ್ರತವನ್ನು ಬಿಡದಿದ್ದರೆ ಮಹಾಜ್ಞಾನದಾಚರಣೆಯಾಗುತ್ತದೆ .

**11.** ಪರದ್ರವ್ಯಕ್ಕೆ ಆಸೆ ಮಾಡಿದರೆ ನರಕದಲ್ಲಿ ಅದ್ದಬೇಕು .

**12.** ನನ್ನ ದಾರಿಯಲ್ಲಿಯೇ ( ಸಮೀಪವೇ ) ಹೊನ್ನು ಮತ್ತು ವಸ್ತ್ರ ಬಿದ್ದಿದ್ದರೂ , ಅದನ್ನು ನಾನು ಮುಟ್ಟುವುದಿಲ್ಲ. ( ತೆಗೆದುಕೊಳ್ಳುವುದಿಲ್ಲ ) .

**13.** ಅಂಧಕಾರದ ದೆಸೆಯಿಂದ ಚಂದ್ರನ ಪ್ರಭೆಯಾಯಿತು.

IV.

**14.** ಸುಂಕಗಂಜಿ,

**15.** ಯಮಗತಿಗರ

**16.** ನುಡಿಗಳ.

**17.** ಅಳಿಮನವ

V.

**18.** ತೆರಿಗೆ

**19.** ಕೆಟ್ಟ ನಡೆಗಳ.

**20.** ನಿಯಮ.

**21.** ಶಂಬಕೇಶ್ವರ

VI.

**22.** ಬೇರೆಯವರ ಹತ್ತಿರ ( ಕುತರ್ಕ ಶಾಸ್ತ್ರದಿಂದ ) ನ್ಯಾಯವಲ್ಲದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ, ಅನ್ಯಾಯವನ್ನು ಮಾಡದಿದ್ದರೆ, ಶಿವಾಚಾರದ ಪಥವನ್ನು ತೋರಿಸು ಎಂದು ಬೇಡಿಕೊಳ್ಳಬೇಕು .

**23.** ಕೆಟ್ಟ ( ನುಡಿ ) ಮಾತುಗಳನ್ನಾಡಬಾರದು , ಕೆಟ್ಟ ( ನಡ ) ನಡವಳಿಕೆಯನ್ನು ನಡೆಯಬಾರದು . ಹಿಡಿದ ವ್ರತವನ್ನು ಬಿಡಬಾರದು ಎಂಬುದು ಮುಕ್ತಾಯಕ್ಕನ ಅಭಿಪ್ರಾಯದ , ಪ್ರಶ್ನೆಯಾಗಿದೆ.

**24.** ಬಸವಣ್ಣನವರು ,ಅಕ್ಕಮಹಾದೇವಿ , ಜೇಡರ ದಾಸಿಮಯ್ಯ, ಅಲ್ಲಮಪ್ರಭು ಮತ್ತು ಮಡಿವಾಳ ಮಾಚಯ್ಯ.

**25.** ವಚನಕಾರರು ಪ್ರಪಂಚದ ಏಳು ಬೀಳುಗಳ ನಡುವೆ ನಡೆವ ಆಗುಹೋಗುಗಳ ಬಗ್ಗೆ ಹಾಗೂ ಮನುಷ್ಯನ ನಡತೆಗಳ ಕುರಿತಂತೆ ತಮ್ಮ ವಚನಗಳ ಮೂಲಕ ಜನಸಾಮಾನ್ಯರಿಗೆ ತಿಳಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಜನಸಾಮಾನ್ಯರಿಗೆ ತಮ್ಮ ನಡವಳಿಕೆಗಳ ಬದಲಾವಣೆಗೆ ವಚನಕಾರರ ಮಾತುಗಳು ಬಹಳ ಮುಖ್ಯವಾಗಿದೆ.

**26.** ವಚನಕಾರರು ತಾವು ಬರೆದ ಬರಹಗಳು ಅಥವಾ ಹೇಳಿದ ಹೇಳಿಕೆಗಳು/ವಚನಗಳು ಅವರದೇ ಎಂಬ ದೃಢೀಕರಣಕ್ಕಾಗಿ ತಮ್ಮ ತಮ್ಮ ಆರಾಧ್ಯ ದೈವಗಳ ಹೆಸರುಗಳನ್ನು ಅಂಕಿತನಾಮಗಳಾಗಿ ಬಳಸುತ್ತಾರೆ.

**27.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**28.** ಚಂದನವನ್ನು ತೀಡಿದಷ್ಟು ಸುಗಂಧ ಭರಿತವಾದ ಪರಿಮಳ ಹೊರ ಸೂಸುತ್ತದೆ. ಹಾಗೆಯೇ ಒಳ್ಳೆಯವರ ಸಹವಾಸದಿಂದ ಉತ್ತಮವಾದ ನಡವಳಿಕೆಯನ್ನು ಹಾಗೂ ಉತ್ತಮ ವಿಚಾರಗಳನ್ನು ತಿಳಿದುಕೊಳ್ಳಬಹುದು. ಹಾಗಾಗಿ ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂದು ಹೇಳಿದ್ದಾರೆ.

**29.** ಮಾನವನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಮಾನವನಿಗೆ ಯೋಚಿಸುವ ಶಕ್ತಿ ಇರುತ್ತದೆ. ಸರಿ ತಪ್ಪುಗಳ ಅರಿವು ಕೂಡ ಇರುತ್ತದೆ. ಆದರೂ ಕೆಲವೊಮ್ಮೆ ತಪ್ಪು ಮಾಡುತ್ತಾನೆ ಯೋಚಿಸುವಂತಹ ಶಕ್ತಿ ಇರುವುದರಿಂದ ತಪ್ಪುಗಳನ್ನು ಮಾಡದಂತೆ ತನ್ನ ನಡೆ ನುಡಿಗಳ ಬಗ್ಗೆ ಗಮನವಿಟ್ಟುಕೊಂಡು ಉತ್ತಮ ಮಾರ್ಗದಲ್ಲಿ ನಡೆಯಲು ಮಾನವನ ನಡೆ ಉತ್ತಮವಾಗಿರಬೇಕು.

**30.** ಶಿವಶರಣರು ಎಂದರೆ ಸಕಲವೂ ಶಿವನೇ ಎಂದು ನಂಬಿದವರು ಹಾಗೂ ಭಕ್ತಿಗೆ ಹೆಸರಾದವರು. ಮಾನವೀಯತೆ ಗುಣಗಳನ್ನು ಬೆಳಸಿಕೊಂಡವರು. ತಾವು ತಿಳಿದು ಇತರರಿಗೆ ತಿಳಿಯನ್ನು ಸಾರುವವರು. ಶಿವ ಒಪ್ಪುವಂತಹ ಗುಣಗಳನ್ನು ಜನರಲ್ಲಿ ತಮ್ಮದೇ ಮಾತುಗಳ ಮೂಲಕ ವರ್ಣಿಸುವವರು.

**31.** ರಾಮನು ಸುಂದರವಾದ ಬರೆಹ ಬರೆಯುತ್ತಾನೆ.

ಸಹನಾಳು ಉತ್ತಮವಾದ ನೃತ್ಯ ಮಾಡುತ್ತಾಳೆ.

V.

**32.** ಜೇಡರ ದಾಸಿಮಯ್ಯನು ಪರಮ ಶಿವಭಕ್ತ ಶಿವನು ತನ್ನ ಭಕ್ತರ ನಾನಾ ವಿಧಗಳಲ್ಲಿ ಪರೀಕ್ಷಿಸುತ್ತಾನೆ ಎಂದರೆ ಕಷ್ಟಕೊಟ್ಟು ಭಿಕ್ಷೆ ಬೇಡುವಂತೆ ಮಾಡುತ್ತಾನೆ . ಚಿನ್ನವನ್ನು ಪರೀಕ್ಷಿಸುವಂತೆ ಉಜ್ಜಿ ನೋಡುತ್ತಾನೆ . ಚಂದನದಂತೆ ಅರೆಯುತ್ತಾನೆ . ಕಬ್ಬಿನ ಕೋಲಿನಂತೆ ಕತ್ತರಿಸಿ ಹಿಂಡುತ್ತಾನೆ . ಇವೆಲ್ಲಕ್ಕೂ ಹೆದರದೆ ಇದ್ದರೆ ತಾನಿದ್ದೇನೆ ಎಂದು ಬಂದು ಕೈಹಿಡಿದು ಕಾಪಾಡುತ್ತಾನೆ . ಶಿವನ ಮೇಲೆ ಅಂತಹ ದೃಢವಾದ ಭಕ್ತಿಯಿರಬೇಕು , ಕಷ್ಟಗಳು ತಮ್ಮ ಉದ್ಧಾರಕ್ಕೆ ಬಂದಿರುವುದು ಎಂದು ದೇವರು ಕೊಟ್ಟ ಪರೀಕ್ಷೆಯಲ್ಲಿ ಗೆಲ್ಲಬೇಕು.

**33.** ಶಿವಭಕ್ತರಿಗೆ ಆಸೆ ಆಮಿಷಗಳು ಇರಬಾರದು . ಪರರ ಧನ ಪರಿಶ್ರಮವಿಲ್ಲದೆ ದೊರಕುವ ಯಾವುದೇ ಸೌಲಭ್ಯ ಅಥವಾ ವಸ್ತುಗಳಿಗೆ ಆಸೆ ಪಡಬಾರದು . ನಮ್ಮ ದಾರಿಯಲ್ಲಿ ಚಿನ್ನವೇ ಬಿದ್ದಿದ್ದರೂ ಅದನ್ನು ಕೈ ಮುಟ್ಟಿ ಎತ್ತಿಕೊಳ್ಳಬಾರದು, ಹಾಗಿಲ್ಲದಿದ್ದರೆ ಶಿವನು ನಮ್ಮನ್ನು ಮೆಚ್ಚುವುದಿಲ್ಲ, ಅದರ ಬದಲು ನಮಗೆ ಕಷ್ಟ ಎನ್ನುವ ನರಕದಲ್ಲಿ ಅದ್ದಲಿ ಈ ಆಸೆಗಳಿಂದ ಮುಕ್ತರಾಗಬೇಕಾದರೆ ನಾವು ಶಿವನ ಪೂಜಿಸಬೇಕು, ಧ್ಯಾನಿಸಬೇಕು ಎಂದು ಸತ್ಯಕ್ಕ ತನ್ನ ವಚನದಲ್ಲಿ ಹೇಳಿದ್ದಾರೆ.

**34.** ಉದಾಹರಣೆ,

(ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.)





**35.** ಸಜ್ಜನರು ಎಂದರೆ ಒಳ್ಳೆಯವರು .ಯಾವ ಮನುಷ್ಯ ತನ್ನ ಜೀವನದಲ್ಲಿ ಇನ್ನೊಬ್ಬರಿಗೆ ತೊಂದರೆಯಾಗದಂತೆ ಹಾಗೂ ಮಾನವೀಯ ಗುಣಗಳನ್ನು ಬೆಳಸಿಕೊಂಡಿರುವನೋ ಅವನ ಸಹವಾಸ ಮಾಡಬೇಕು. ಅದು ಜೇನನ್ನು ಸವಿದಂತೆ ಸಿಹಿಯಾಗಿರುತ್ತದೆ. ನಾವು ಕೂಡ ನಮ್ಮ ನಡವಳಿಕೆಯಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬಹುದು ಎಂಬುದು ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬ ಪದದ ಅರ್ಥವಾಗಿದೆ.

**36.** ಬಸವನ ಬಾಗೇವಾಡಿ ಕರ್ನಾಟಕದ ವಿಜಯಪುರ ಜಿಲ್ಲೆಯ ಒಂದು ತಾಲೂಕು. ಈ ನಗರವು ಸುಪ್ರಸಿದ್ಧ ಶರಣರಾದ ಬಸವಣ್ಣನವರ ಹುಟ್ಟುರಾಗಿದೆ. ಇದೊಂದು ಪುಣ್ಯಕ್ಷೇತ್ರ. ಈ ನಗರವು ಭಕ್ತಿಯ ಭಂಡಾರವಾಗಿದೆ. ಇಲ್ಲಿಗೆ ಬರುವ ಜನರು ಶರಣರ ಕುರಿತು ಮಾಹಿತಿಗಳನ್ನು ತಿಳಿಯಬಹುದಾಗಿದೆ.

**37.** ಬಾವಿ-ಭಾವಿ

ಕರೆ–ಖರೆ

ದನ - ಧನ,

ಅನ್ನ- ಅಣ್ಣ

ಘನ- ಗಾನ

ಸರ- ಶರ

ಪ್ರಧಾನ – ಪ್ರದಾನ

ಜರಿ- ಝರಿ

ಪಲ -ಫಲ

ಭಾನು- ಬಾನು .

**38.** ಉದಾಹರಣೆ :

ಇದು ನನ್ನ ಶಾಲೆ,

ನಮ್ಮೂರ ಶಾಲೆ

ತಿದ್ದಿ ತೀಡುವ ನೆಲೆ

ಬದುಕು ಕೊಡುವ ನೆಲೆ

ನನ್ನ ಎರಡನೇ ಮನೆ

ನನ್ನ ಜೀವನ ನೀನೆ. ( ಸೂಚನೆ; ಮಕ್ಕಳ ಪದಗಳ ಬಳಕೆ, ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಮಾರ್ಗದರ್ಶಿಸಿ )

VI

**39.** ಮಾತು ಬೆಳ್ಳಿ ಮೌನ ಬಂಗಾರ ಗಾದೆಯ ವಿವರಣೆ

"ಮಾತು ಬೆಳ್ಳಿ, ಮೌನ ಬಂಗಾರ" ಎಂಬ ಗಾದೆಯು ನಮ್ಮ ಜೀವನದಲ್ಲಿ ಮಾತಿನ ಮಹತ್ವವನ್ನು ಮತ್ತು ಮೌನದ ಶಕ್ತಿ ಮತ್ತು ಮೌಲ್ಯವನ್ನು ತಿಳಿಸುತ್ತದೆ. ಮಾತು ಬೆಳ್ಳಿ ಹೋಲಿಕೆಯಂತೆ ಅಮೂಲ್ಯವಾದದ್ದು. ನಾವು ಮಾತನಾಡುವಾಗ ನಮ್ಮ ಮಾತುಗಳು ಸತ್ಯ, ಸೌಮ್ಯ ಮತ್ತು ಪ್ರಾಮಾಣಿಕವಾಗಿರಬೇಕು. ಮಾತುಗಳು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ ಮತ್ತು ಇತರರ ಮೇಲೆ ಒಳ್ಳೆಯ ಪ್ರಭಾವ ಬೀರುತ್ತವೆ.

ಆದರೆ, ಮೌನವು ಬಂಗಾರದಂತೆ ಅಮೂಲ್ಯವಾಗಿದೆ. ಕೆಲವೊಮ್ಮೆ ಮಾತಾಡದೆ ಇರುವುದೇ ಉತ್ತಮ. ಮೌನದಿಂದ ನಾವು ಆಲೋಚನೆ ಮಾಡಬಹುದು, ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಶಾಂತಿಯನ್ನು ಅನುಭವಿಸಬಹುದು. ಮೌನವು ನಮ್ಮ ಮನಸ್ಸಿಗೆ ಶಾಂತಿ ನೀಡುತ್ತದೆ ಮತ್ತು ಸಮಸ್ಯೆಗಳನ್ನು ಶಾಂತವಾಗಿ ಪರಿಹರಿಸಲು ಸಹಾಯ ಮಾಡುತ್ತದೆ.

ಹೀಗಾಗಿ, ಮಾತು ಮತ್ತು ಮೌನ ಎರಡೂ ನಮ್ಮ ಜೀವನದಲ್ಲಿ ಸಮತೋಲನವಾಗಿರಬೇಕು. ಅನಗತ್ಯವಾಗಿ ಹೆಚ್ಚು ಮಾತಾಡದೆ, ಸಮಯಕ್ಕೆ ಸರಿಯಾಗಿ ಮಾತಾಡುವುದು ಮತ್ತು ಮೌನವನ್ನು ಪಾಲಿಸುವುದು ನಮ್ಮ ಜೀವನವನ್ನು ಸುಂದರವಾಗಿಸುತ್ತದೆ. ಮಾತು ಬೆಳ್ಳಿ ಹೋಲಿಕೆಯಂತೆ ಅಮೂಲ್ಯವಾದದ್ದು, ಆದರೆ ಮೌನ ಬಂಗಾರದಂತೆ ಅಮೂಲ್ಯವಾದ ಶಕ್ತಿ ಹೊಂದಿದೆ.

ಈ ಗಾದೆ ನಮಗೆ ಹೇಳುವುದು, ಮಾತು ಮತ್ತು ಮೌನ ಎರಡೂ ಜೀವನದಲ್ಲಿ ಮಹತ್ವಪೂರ್ಣವಾಗಿವೆ. ನಾವು ಯಾವಾಗಲೂ ಸತ್ಯ ಮತ್ತು ಸೌಮ್ಯವಾಗಿ ಮಾತಾಡಬೇಕು ಮತ್ತು ಕೆಲವೊಮ್ಮೆ ಮೌನದಿಂದ ಶಾಂತಿಯನ್ನು ಕಾಪಾಡಿಕೊಳ್ಳಬೇಕು.(ವಿದ್ಯಾರ್ಥಿಗಳು ಅವರದೇ ಮಾತುಗಳಲ್ಲಿ ಗಾದೆಗಳನ್ನ ವಿಸ್ತರಿಸಲು ಅನುಕೂಲ ಮಾಡಿಕೊಡುವುದು ಹಾಗೂ ಸುಗಮಕಾರರಾಗಿ ಶಿಕ್ಷಕರು ಕಾರ್ಯ ನಿರ್ವಹಿಸುವುದು.)

**ಗಾದೆಯ ಅರ್ಥ ಮತ್ತು ವಿವರಣೆ:**ಹನಿ ಹನಿ ಗೂಡಿದರೆ ಹಳ್ಳ:ಪ್ರತಿಯೊಂದು ಸಣ್ಣ ನೀರಿನ ಹನಿಯೂ ಸೇರಿದಾಗ ಕೊನೆಗೆ ಅದೊಂದು ದೊಡ್ಡ ಹಳ್ಳ ಅಥವಾ ನದಿಯಾಗಿ ಮಾರ್ಪಡುತ್ತದೆ. ಹಾಗೆಯೇ, ದಿನನಿತ್ಯ ನಾವು ಮಾಡುವ ಸಣ್ಣ ಪ್ರಮಾಣದ ಉಳಿತಾಯವು ಭವಿಷ್ಯದಲ್ಲಿ ದೊಡ್ಡ ಮೊತ್ತದ ಸಂಪತ್ತಾಗಿ ಬದಲಾಗುತ್ತದೆ.ತೆನೆ ತೆನೆ ಗೂಡಿದರೆ ಬಳ್ಳ:ಕೃಷಿಯಲ್ಲಿ ಪ್ರತಿಯೊಂದು ಭತ್ತದ ತೆನೆಯನ್ನು ಕಟಾವು ಮಾಡಿ ಒಟ್ಟುಗೂಡಿಸಿದಾಗ, ಅದು ರಾಶಿ ರಾಶಿ ಧಾನ್ಯವಾಗುತ್ತದೆ (ಬಳ್ಳ). ಸಣ್ಣ ಸಣ್ಣ ವಸ್ತುಗಳ ಅಥವಾ ಪ್ರಯತ್ನಗಳ ಒಟ್ಟುಗೂಡಿಸುವಿಕೆಯ ಶಕ್ತಿಯನ್ನು ಇದು ಸೂಚಿಸುತ್ತದೆ.

**ಬದುಕಿಗೆ ಅನ್ವಯಿಸುವಿಕೆ**:ಸಂಪತ್ತಿನ ಸಂಚಯ: ಯಾವುದೇ ದೊಡ್ಡ ಸಾಧನೆ ಅಥವಾ ಸಂಪತ್ತು ಒಂದೇ ದಿನದಲ್ಲಿ ನಿರ್ಮಾಣವಾಗುವುದಿಲ್ಲ. ಅದಕ್ಕೆ ದೀರ್ಘಕಾಲದ ತಾಳ್ಮೆ ಮತ್ತು ಸತತ ಪ್ರಯತ್ನದ ಅಗತ್ಯವಿರುತ್ತದೆ.ಉಳಿತಾಯದ ಪಾಠ: ಪ್ರತಿದಿನ ನಾವು ಉಳಿಸುವ ಚಿಕ್ಕ ಮೊತ್ತದ ಹಣವೂ ಮುಂದೆ ಆಪತ್ತಿಗೆ ಆಸರೆಯಾಗುವ ದೊಡ್ಡ ನಿಧಿಯಾಗುತ್ತದೆ.

**ಜ್ಞಾನಾರ್ಜನೆ:** ಪ್ರತಿದಿನ ಕಲಿಯುವ ಸಣ್ಣ ಅಕ್ಷರಗಳು ಅಥವಾ ವಿಚಾರಗಳು ಮುಂದೆ ನಮ್ಮ ಜ್ಞಾನದ ಭಂಡಾರವನ್ನೇ ವಿಸ್ತರಿಸುತ್ತವೆ.ಸಣ್ಣ ವಿಷಯಗಳನ್ನು ನಿರ್ಲಕ್ಷಿಸದೆ, ಅವುಗಳನ್ನು ಸರಿಯಾಗಿ ಬಳಸಿಕೊಂಡು ಶ್ರಮಿಸಿದರೆ ದೊಡ್ಡ ಮಟ್ಟದ ಯಶಸ್ಸನ್ನು ಕಾಣಬಹುದು ಎಂಬುದೇ ಈ ಗಾದೆಯ ಮುಖ್ಯ ಸಾರವಾಗಿದೆ.

**40. ೧.ಜೇಡರ ದಾಸಿಮಯ್ಯ :**

11ನೆಯ ಶತಮಾನದ ಹಿರಿಯ ಶಿವಶರಣ, ಯಾದಗಿರಿ ಸಮೀಪದ ಮುದೇನೂರಿ ಸಮೀಪದವನು, ದಾಸಿಮಯ್ಯ ಪ್ರಥಮ ವಚನಕಾರರೆಂದೇ ಮಾನ್ಯನಾಗಿದ್ದಾನೆ. ರಾಮನಾಥ ಎಂಬ ಅಂಕಿತದಿಂದ ರಚಿಸಿರುವ ಇವರ 150 ವಚನಗಳು ದೊರೆತಿವೆ, ಸರಳ ಮತ್ತು ನೇರ ನಿರೂಪಣೆಯಿಂದ ಕೂಡಿದ ದಾಸಿಮಯ್ಯನವರ ವಚನಗಳು ಸಾಮಾಜಿಕ ಮೌಲ್ಯದಿಂದ ಜನಮಾನ್ಯವಾಗಿದೆ. ಜೇಡರ ದಾಸಿಮಯ್ಯನವರ ಈ ವಚನದಲ್ಲಿ ಶಿವನು ತನ್ನ ಭಕ್ತರನ್ನು ಹೇಗೆ ಪರೀಕ್ಷೆಗೆ ಒಳಪಡಿಸಿ ಪರಿಶುಧ್ದರನ್ನಾಗಿ ಮಾಡಿ ಕೈ ಹಿಡಿದು ಕಾಯುತ್ತಾನೆಂಬುದನ್ನು ಉಪಮೆಗಳ ಮೂಲಕ ತಿಳಸಿದ್ದಾನೆ

**೨.ಮಡಿವಾಳ ಮಾಚಯ್ಯ :**

12 ನೇ ಶತಮಾನದ ಪ್ರಮುಖ ವಚನಕಾರರಲ್ಲಿ ಒಬ್ಬರು . ಇವರ ಜನ್ಮಸ್ಥಳ ವಿಜಯಪುರ ಜಿಲ್ಲೆಯ ಹಿಪ್ಪರಗಿ , ಇವರ 353 ವಚನಗಳು ಉಪಲಬ್ಧವಾಗಿವೆ . ಇವರ ವಚನಾಂಕಿತ ನಾಮ ' ಕಲಿದೇವರ ದೇವ ' .

**ಓ.ಮುಕ್ತಾಯಕ್ಕ :**

12 ನೇ ಶತಮಾನದ ಅನುಭಾವಿ ಶಿವಶರಣೆ , ಜನ್ಮಸ್ಥಳ ಲಕ್ಕುಂಡಿ , ಅಜಗಣ್ಣ ಅಂಕಿತವಿರುವ 27 ವಚನಗಳು ದೊರೆತಿವೆ . ಅಧ್ಯಾತ್ಮ ಸಾಧನೆಯ ಗುಪ್ತಭಕ್ತಿ ಅಜಗಣ್ಣನು ಮುಕ್ತಾಯಕ್ಕನ ಸಹೋದರ ಮತ್ತು ಗುರು.

**ಔ.ಸತ್ಯಕ್ಕ :**

12 ನೆಯ ಶತಮಾನದ ಶಿವಶರಣೆಯರಲ್ಲೊಬ್ಬಳು , ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರು ಸತ್ಯಕ್ಕನ ಜನ್ಮಸ್ಥಳ. ' ಶಂಭುಕೇಶ್ವರ ' ಎಂಬುದು ಇವರ ವಚನಗಳ ಅಂಕಿತನಾಮ.ಇವರ 27 ವಚನಗಳು ದೊರಕಿವೆ.

**41.** ಅಕ್ಕ ಮಹಾದೇವಿಯವರು ಕನ್ನಡದ ಮೊದಲ ಕವಿಯತ್ರಿ ಆಗಿರುತ್ತಾರೆ. ಇವರು ತಮ್ಮ ಚಿಕ್ಕ ವಯಸ್ಸಿನಲ್ಲೇ ಲೌಕಿಕ ಜೀವನವನ್ನು ತ್ಯಜಿಸಿ, ಆ ಶಿವನನ್ನೇ ಅಂದರೆ ಮಲ್ಲಿಕಾರ್ಜುನನನ್ನೇ ತನ್ನ ಪತಿ ಎಂದು ತಿಳಿದು ಬದುಕಿದರು. ಅಕ್ಕಮಹಾದೇವಿಯವರು ಶರಣರ ಚಳುವಳಿಯಲ್ಲಿ ಪ್ರಮುಖರಾದವರು. ಬದುಕಿನಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಎಲ್ಲರಿಗೂ ಮಾದರಿಯಾಗಿ ಬದುಕಿದವರು.

(ವಿದ್ಯಾರ್ಥಿಗಳ ಸಂಗ್ರಹಿಸಿ ತರುವ ಉಳಿದ ಶರಣರ ಮಾಹಿತಿಯನ್ನು ಗಮನಿಸಿ ಮಾರ್ಗದರ್ಶಿಸುವುದು.

**42.**

| ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|
| ಸುಮಾಳು | ನೃತ್ಯವನ್ನು | ಮಾಡಿದಳು |
| ರವಿಯು | ಗೋಡೆಯನ್ನು | ಒಡೆದನು. |
| ಉಮಾ | ಹಾಡನ್ನು | ಹಾಡಿದಳು |
| ಕೇಶವ | ಕುಂಬಳಕಾಯಿಯನ್ನು | ಕೊಯ್ದನು. |
| ಗಣೇಶನು. | ಗಡಿಗೆ | ಹೊಡೆದನು |
| ಹಸಿನಾ | ಕೊಡೆಯನ್ನು | ಬಿಡಿಸಿದಳು |
| ರಜನಿಯ | ಸಿನಿಮಾವನ್ನು. | ನೋಡಿದಳು |
| ಅಧ್ಯಾಪಕರು | ಪಾಠವನ್ನು | ಬೋಧಿಸಿದರು |

**43.** ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸ್ವಯಂ ಭಾಗವಹಿಸುವಿಕೆ ಹಾಗೂ ಪರಿಶೀಲಿನೆ.

*** *** ***

**ಪದ್ಯಪಾಠ – 5**

**ಹಚ್ಚೇವು ಕನ್ನಡದ ದೀಪ**

I.

**1.** ಕುವೆಂಪು

**2.** ನಕ್ಷತ್ರ ಗಾನ

**3.** ಗುಣ ಸಂಧಿ

**4.** ರವೀಂದ್ರ

**5.** ಜಾತ್ಯಾತೀತ

II.

**6.** ಹಗಲು

**7.** ತಂದೆ

**8.** ಗಡಿ ನಾಡು

**9.** ಅನುನಾಸಿಕ ಸಂಧಿ

**10.** ಕರ್ನಾಟಕ

III.

**11.** ಕನ್ನಡದ ಕಂಪನ್ನು ಸೂಸುವಲ್ಲಿ ಕರಣವನ್ನು ಚಾಚುತ್ತೇವೆ.

**12.** ಕಲ್ಪನೆಯ ಕಣ್ಣು ಹರಿವತನಕ ಸಾಲು ದೀಪಗಳನ್ನು ಹಚ್ಚುತ್ತೇವೆ.

**13.** ನಮ್ಮವರು ಗಳಿಸಿದ ಹೆಸರುಳಿಸಲು ಎಲ್ಲರು ಒಂದುಗೂಡುತ್ತೇವೆ.

**14.** ನಮ್ಮುಸಿರು ತೀಡುವನ ಈ ನಾಡಿನಲ್ಲಿ ಮಾಂಗಲ್ಯ ಗೀತೆಯನ್ನು ಹಾಡುತ್ತೇವೆ.

**15.** ಕರುಳೆಂಬ ಕುಡಿಗೆ ಮಿಂಚನ್ನು ಮುಡಿಸುತ್ತೇವೆ.

**16.** ಹಂಚಿವು ಕೊಚ್ಚೆವು, ಚಾಚೆವು ಕೆಚ್ಚೆವು, ಮರೆವ ಮನವ, ಬೀರೇವು ತೋರೇವು.

**17.** ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು, ಹಿರೆಕೊಪ್ಪ.

**18.** ಬಹುದಿನಗಳಿಂದ ಮೈಮರೆತು ಕೂಡಿರುವ ಕೊಳೆಯನ್ನು

**19.** ಕನ್ನಡದ ಕಂಪು ಸೂಸಿದೆಡೆಯಲ್ಲ

**20.** ನಕ್ಷತ್ರ ಗಾನ

IV.

**21.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**22.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**23.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**24.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

V.

**25.** ಕವಿ ಡಿಎಸ್ ಕರ್ಕಿ ಅವರು 1907ರ ಡಿಸೆಂಬರ್ 15ರಂದು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಹಿರೇ ಕೊಪ್ಪದಲ್ಲಿ ಜನಿಸಿದರು ನಕ್ಷತ್ರ ಗಾನ ಭಾವ ತೀರ್ಥ ಗೀತ ಗೌರವ ನಮನ ಬಣ್ಣದ ಚೆಂಡು ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ.

VI.

**26.** ಕನ್ನಡಿಗರು ತಮ್ಮಲಿರುವ ಭೇದ-ಭಾವವನ್ನು ಮರೆತು ,ಒಲವನ್ನು ಎರೆದು, ನರಗಳನ್ನು ದಾರದಂತೆ ಮಾಡಿ ಅದನ್ನು ದೀಪದಲ್ಲಿಟ್ಟು ಕನ್ನಡದ ದೀಪ ಹಚ್ಚುತ್ತಾರೆ.

**27.** ಕವಿಯು ವಿವಿಧತೆಗಳಲ್ಲಿ ಏಕತೆಯನ್ನು ಕಂಡ ನಾಡು ನಮ್ಮದು. ಜನರು ತೊಡುವ ಉಡುಗೆ-ತೊಡುಗೆ, ಆಹಾರ - ವಿಹಾರ, ನಡೆ- ನುಡಿಗಳಲ್ಲಿ ವಿವಿಧತೆಯೊಂದಿಗೆ ನಾವೆಲ್ಲ ಒಂದು ಎಂಬ ಒಗ್ಗಟ್ಟಿನಿಂದ ಬದುಕಿ ಬಂದವರು. ನಮ್ಮ ನಾಡಿನ ಭಾಷೆ ಕನ್ನಡ.  ನಾಡ ಭಾಷೆಯಾದ ಕನ್ನಡ ಇಂದು  ವಿವಿಧ ಕಾರಣಗಳಿಂದ ನಾಡಿನವರಿಂದ ದೂರವಾಗುತ್ತಿದೆ. ಭಾಷೆ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ. ಇಂತಹ ಸುಂದರ ಭಾಷೆಯನ್ನು ನಮ್ಮ ನಾಡಿನಲ್ಲಿ, ಜೊತೆಗೆ ನಮ್ಮ ನಾಡಿನ ಹೊರಗೂ  ಪಸರಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಮ್ಮವರು ಗಳಿಸಿದ ಹೆಸರು ಉಳಿಸಬೇಕು ಕನ್ನಡ ಮಾತೆಯನ್ನು ನಮ್ಮ ಎದೆಯಲ್ಲಿ ಮಿಡಿಯುವ ಭಾಷೆಯನ್ನು  ಆಡುವುದರ ಮೂಲಕ ಪೂಜಿಸಬೇಕು. ನಮ್ಮ ಭಾಷೆಯ ಬೆಳಕು ಪ್ರಪಂಚದಲ್ಲೆಡೆ ಪಸರಿಸಬೇಕು.  ಹೀಗೆ ಕನ್ನಡ ಮಾತೆಯನ್ನು ನಾವು ಆದರಿಸಬೇಕು ಎಂದಿದ್ದಾರೆ.

**28.** ನೃತ್ಯ ಮಾಡಲು ಸಹಕರಿಸುವುದು.

**29.** ಬರವಣಿಗೆ ಮನ್ನಣೆ ನೀಡಿ, ಸರಿಗಳನ್ನು ಪ್ರಶಂಸಿಸಿ, ತಪ್ಪುಗಳನ್ನು ತಿದ್ದುವುದು.

VII.

**30.** ನಮ್ಮವರು ಗಳಿಸಿದಾ ಹೆಸರ ಉಳಿಸ- ಲೆಲ್ಲಾರು ಒಂದುಗೂಡೇವು ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ ಮಾತೆಯನು ಪೂಜೆ ಮಾಡೇವು ನಮ್ಮುಸಿರು ತೀಡುವೀ ನಾಡಿನಲ್ಲಿ ಮಾಂಗಲ್ಯಗೀತ ಹಾಡೇವು .

VIII.

**31.** ಹರಡು

**32.** ಸುಗಂಧ

**33.** ಹರಡು

**34.** ಹೊಟ್ಟೆ

**35.** ಎಸೆ

## ಪದ್ಯಪಾಠ – 6

## ಬಿಡುಗಡೆಯ ಹಾಡು

**I.**

**1.** ನರಕ

**2.** ಮುದೇನೂರು ಸಂಗಣ್ಣ

**3.** ಸಿಂಹ

**4.** ತ್ರಿವರ್ಣ ಧ್ವಜ

**5.** ಹಕ್ಕಿ

**6.** ಮುನ್ನಡೆವ

**7.** ಜಿಗಿದು

**8.** ಕಡಲುಗಳ

**9.** ಒಕ್ಕೊರಲ

II.

**10.** ನಮ್ಮ ರಾಷ್ಟ್ರ ಪಿತ ಮಹಾತ್ಮ ಗಾಂಧೀಜಿಯವರು.

**11.** ಪಕ್ಷಿಯು ಪಂಜರದ ಕದ ಮುರಿದು ಹೊರ ಬರಬೇಕು.

**12.** ಕಡಲುಗಳ ರಾಣಿ ಇಂಗ್ಲೆಂಡ್.

**13.** ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಮ್ಮ ಸ್ವಾತಂತ್ರ ಹೋರಾಟಗಾರರೇ ಸಿಡಿಲ ಮರಿಗಳು.

**14.** ನಾವು ಬಿಡುಗಡೆಯ ಹಾಡನ್ನು ಹಾಡಬೇಕು.

**15.** ಪಂಜರದ ಪಕ್ಷಿ ಭಾರತೀಯರ ( ಬಂಧನದಲ್ಲಿರುವವರ ) ಸಂಕೇತವಾಗಿದೆ .

**16.** ಹಂಗಿನರಮನೆಯಲ್ಲಿ ರೆಕ್ಕೆಗಳ ಬಿಗಿ ಹಿಡಿದು ನರಳುತ್ತಿದೆ

**17.** ಮೃಗರಾಜ ಇನ್ನು ಈ ಬಂಧನ ಸಾಕು ಎಂದು ಗೊಣಗುತ್ತಿದೆ .

**18.** ಕಾರಿರುಳು ತನ್ನ ಸೆರೆಯೊಳಗೆ ರವಿಕಿರಣಗಳನ್ನು ಅಡಗಿಸಿಟ್ಟುಕೊಂಡಿದೆ.

**19.** ನಮ್ಮ ಬಾವುಟವು ಮೂರು ಬಣ್ಣಗಳನ್ನು ಹೊಂದಿದೆ .

III.

**20.** ಪಂಜರದ ಪಕ್ಷಿ ಎಂಬುದು ಭಾರತೀಯರು ಮತ್ತು ಅವರ ದಾಸ್ಯದ ಬದುಕಿನ ಚಿತ್ರಣವಾಗಿದ್ದು, ಕಡಲುಗಳ ರಾಣಿ ಅಂದರೆ ಭಾರತೀಯರನ್ನು ಪಾಪದ ಬದುಕಿಗೆ ತಳ್ಳಿದ ಇಂಗ್ಲೆಂಡ್ ದೇಶ ಹಾಗೂ ಅದರ ಆಡಳಿತ ನೀತಿಯಾಗಿದೆ.

**21.** ನೀರು ಹರಿಯದೆ ಮಡುಗಟ್ಟಿ ನಿಂತಾಗ ಕೊಳಕಾಗುತ್ತದೆ ಎಂದು ತಿಳಿಸಲಾಗಿದೆ.

**22.** ಪಂಜರದ ಪಕ್ಷಿ ಸ್ವತಂತ್ರವಾಗಲು ಹಂಗಿನರಮನೆಯ ಮುಳ್ಳಿನ ಪಂಜರದ ಕದ ಮುರಿದು ಹೊರಬಂದು ಬಾನಾಡಿಯಾಗಬೇಕು.

**23.** ನಮ್ಮ ಗುಡಿ ಎಂಬುದು ನಮ್ಮ ರಾಷ್ಟ್ರಧ್ವಜವಾಗಿದ್ದು ಮೂರು ಬಣ್ಣದ ಗುಡಿಯ ಹಿಡಿದು ಸರ್ವರಿಗೂ ಸಮ ನಾವು ಎಂದು ಮನದುಂಬಿ ಬಿಡುಗಡೆಯ ಒಕ್ಕೊರಲ ಗೀತೆಯನ್ನು ಹಾಡಬೇಕೆಂದು ವರ್ಣಿಸಲಾಗಿದೆ.

**24.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**25.** ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಬಾಲಗಂಗಾಧರನಾಥ ತಿಲಕ್, ಬಿಪಿನ್ ಚಂದ್ರಪಾಲ್, ಗೋಪಾಲಕೃಷ್ಣ ಗೋಖಲೆ, ದಾದಾಬಾಯಿ ನವರೋಜಿ, ಭಗತ್ ಸಿಂಗ್, ಲಕ್ಷ್ಮೀಬಾಯಿ, ಕಿತ್ತೂರ್ ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು.

**26.** ಸ್ವಾತಂತ್ರ್ಯವನ್ನು ಪಡೆಯಲು ಪ್ರತಿಯೊಬ್ಬ ಭಾರತೀಯನ ಮೈ ಮನದಲ್ಲಿರುವ ಭಯ, ಆತಂಕ, ಬೇಜವಾಬ್ದಾರಿ, ಸೋಮಾರಿತನ ಎಂಬ ಕೊಳೆ ತೊಳೆದು ಹೋಗಿ ಅವರ ಮೈಮನಸ್ಸು ತಿಳಿ ನೀರಿನಂತೆ ತಿಳಿಯಾಗಬೇಕಾದರೆ ತಿಳಿನೀರ ಮಳೆ ಎಂಬ ಸ್ವಾತಂತ್ರ್ಯದ ರಕ್ಷಣೆ, ರಾಷ್ಟ್ರ ಅಭಿಮಾನ ಎಲ್ಲರಲ್ಲೂ ಮೂಡಬೇಕು.

**27.** ಪಂಜರದಲ್ಲಿ ನರಳುತ್ತಿರುವ ಹಕ್ಕಿ ಪಂಜರದ ಬಾಗಿಲನ್ನು ಮುರಿದು ಹೆಣೆದ ಬಂಧನದಿಂದ ಮುಕ್ತಿ ಹೊಂದುತ್ತದೆ . ಬಾನಾಡಿಯಾಗಿ ( ಪಕ್ಷಿಯಾಗಿ ) ಆಕಾಶದಲ್ಲಿ ವಿಹರಿಸುತ್ತಾ ಹರ್ಷಿಸಲಿ ಎಂದು ಕವಿ ಹಾರೈಸುತ್ತಾರೆ .

**28.** ಶತ ಶತಮಾನಗಳಿಂದ ಮೆರೆದ ಕಡಲುಗಳ ರಾಣಿಗೆ ಇನ್ನು ಮುಂದೆ ಉಳಿಗಾಲವಿಲ್ಲ ಏಕೆಂದರೆ ಭಾರತೀಯರಲ್ಲಿ ಇಂದು ಐಕ್ಯತೆಯಿದೆ . ಅವರೆಲ್ಲ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಿಡಿಲ ಹೋರಾಟ ಮಾಡುತ್ತಿದ್ದಾರೆ . ಅದೂ ತಾಯಿ ಭಾರತೀಯ ಮೇಲೆ ಆಣೆ ಹಾಕಿ, ಬ್ರಿಟಿಷರನ್ನು ನಮ್ಮ ದೇಶದಿಂದ ತೊಲಗಿಸಿ ಧೈಯದಿಂದ ಹೋರಾಡುತ್ತಿರುವುದರಿಂದ ಕಡಲ ರಾಣಿಗೆ ಉಳಿಗಾಲವಿಲ್ಲ .

**29.** ಜಾತಿ ಮತಗಳ ಬೇಧವಿಲ್ಲದೆ ನಾವೆಲ್ಲಾ ಒಂದೇ ಎಂಬ ಮನೋಭಾವದಿಂದ ಮನುಜಮತವನ್ನು ಎತ್ತಿ ಹಿಡಿದಿದ್ದೇವೆ . ನಮ್ಮ ಮೂರು ಬಣ್ಣದ ಬಾವುಟವನ್ನು ಹಾರಿಸುತ್ತಾ ಸರ್ವರಿಗೂ ನಾವು ಸಮ ಎಂದು ಮನದುಂಬಿ ದನಿಯೆತ್ತಿ ಒಕ್ಕೊರಲ ಹಾಡನ್ನು ಹಾಡಬೇಕು ಎಂದು ಕವಿ ಬಯಸುತ್ತಾರೆ .

IV.

**30.** ಮಡುಗಟ್ಟಿ ನಿಲ್ಲಿಸಿದ ನೀರು ತಾ ಕೊಳೆಗೊಂಡು
ಚಡಪಡಿಸುತಿದೆ ಮುನ್ನಡೆವ ಹಾದಿ ಹುಡುಕಿ
ಹಸಿದ ನೆಲವನು ತಣಿಸಿ ಹಸಿರು ವಸನವನುಡಿಸಿ
ಅಡೆತಡೆಯ ಗೋಡೆಗಳು ಕೆಡಹಲ್ಕೆ ದುಡುಕಿ.

ಜಾತಿ ಮತಗಳ ಹುಟ್ಟು ರುಹಿ ಮನುಜಮತ
ಮೆರೆಸುವೆವು ಮೂರು ಬಣ್ಣದ ಗುಡಿಯ ಹಿಡಿದು,
ಸರ್ವರಿಗೂ ಸಮ ನಾವು ಮನದುಂಬಿ ದನಿಯೆತ್ತಿ
ಹಾಡುವೆವು ಬಿಡುಗಡೆಯ ಒಕ್ಕೊರಲ ಹಾಡು.

**31.** ವಿದ್ಯಾರ್ಥಿಗಳ ಉತ್ತರಗಳ ಸಮರ್ಪಕತೆಯನ್ನು ಗಮನಿಸಿ ಮಾರ್ಗದರ್ಶಿಸುವುದು.

**32.** ೧,ಚಡಪಡಿಸು=ಒದ್ದಾಡು, ಕಳವಳಗೊಳ್ಳು

೨.ಪಣ=ಒತ್ತೆ ಇಡು, ಬಾಜಿ ಕಟ್ಟು

**33.** ೧.ಹದ್ದು=ಒಂದು ವಿಧದ ಪಕ್ಷಿ, ಎಲ್ಲೆ, ಗಡಿ, ಮಿತಿ

೨.ಸೆರೆ=ಬಂಧನ, ಕೂಡಿ ಹಾಕು, ಹೆಂಡ

**34.** ೧.ಸೆರೆಯಿಂದ = ಸೆರೆ + ಇಂದ = ' ಯ 'ಕಾರಾಗಮ ಸಂಧಿ

೨.ಉಳಿಗಾಲ = ಉಳಿ + ಕಾಲ = ಆದೇಶಸಂಧಿ

೩.ಹತ್ತಡಿಯ = ಹತ್ತು + ಅಡಿಯ = ಲೋಪಸಂಧಿ

೪.ಮನದುಂಬಿ = ಮನ + ತುಂಬಿ = ಆದೇಶಸಂಧಿ

**35.** ರಾಜ = ರಾಯ

ಬಣ್ಣ = ವರ್ಣ

ಪ್ರಾಣ = ಹರಣ

ವಸನ = ಬೆಸನ

ಹಕ್ಕಿ = ಪಕ್ಷಿ

**36.** ಮುದೇನೂರು ಸಂಗಣ್ಣ :

ಸಂಗಣ್ಣನವರು ಬಳ್ಳಾರಿ ಜಿಲ್ಲೆಗೆ ಸೇರಿದ ಹರಪ್ಪನಹಳ್ಳಿ ತಾಲೂಕಿನ ಚಿಗಟೇರಿಯಲ್ಲಿ ದೊಡ್ಡ ವ್ಯಾಪಾರಿ ಜಮೀನ್ದಾರಿ ಕುಟುಂಬದಲ್ಲಿ 17 ನೇ ಮಾರ್ಚ್ 1927 ರಲ್ಲಿ ಜನಿಸಿದರು . ಇವರು ಬಾಳ ಭಿಕ್ಷುಕ , ಚಿತ್ರಪಟ ರಾಮಾಯಣ ' ಮೊದಲಾದ ನಾಟಕಗಳನ್ನು ರಚಿಸಿದ್ದಾರೆ . ' ನವಿಲು ಕುಣಿದಾವ , ಜನಪದ ಮುಕ್ತಕಗಳು , ಆ ಅಜ್ಜ ಈ ಮೊಮ್ಮಗ , ಗೊಂದಲಿಗ ದೇವೇಂದ್ರಪ್ಪನ ಹಾಡುಗಳು , ಚಿಗಟೇರಿ ಪದಕೋಶ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ . ಇವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ , ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ , ನಾಡೋಜ ಪ್ರಶಸ್ತಿ , ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ.

**37.** ಸಂಸ್ಕೃತ ಸಂಧಿಗಳ ಚಾರ್ಟ್



**38.** ರಾಷ್ಟ್ರಧ್ವಜದ ಚಿತ್ರ ಬಿಡಿಸಿ, ಬಣ್ಣ ಹಚ್ಚುವರು.

ವಿವರಣೆ: ನಮ್ಮ ರಾಷ್ಟ್ರಧ್ವಜವು ಕೇಸರಿ, ಬಿಳಿ, ಹಸಿರು ಬಣ್ಣಗಳನ್ನೊಳಗೊಂಡಿದ್ದು, ನಡುವೆ ನೀಲಿ ಬಣ್ಣದ ಚಕ್ರವಿರುತ್ತದೆ .ಕೇಸರಿ ಬಣ್ಣವು ತ್ಯಾಗದ ಸಂಕೇತವಾಗಿದ್ದು, ಬಿಳಿ ಬಣ್ಣವು ಶಾಂತಿಯ ಸಂಕೇತವಾಗಿದ್ದು, ಹಸಿರು ಬಣ್ಣವು ಸಮೃದ್ಧಿಯ ಸಂಕೇತವಾಗಿರುತ್ತದೆ. ನಡುವೆ ನೀಲಿ ಬಣ್ಣದ ಚಕ್ರವು ಅಶೋಕ ಚಕ್ರ ವಾಗಿದ್ದು, ಇದರಲ್ಲಿ 24 ಗೆರೆಗಳು ದಿನದ 24 ಗಂಟೆಗಳನ್ನು ಸೂಚಿಸುತ್ತದೆ.

*** *** ***

## ಪದ್ಯಪಾಠ – 7

## ತಿರುಕನ ಕನಸು

### (ಉತ್ತರಗಳು)

**1.** ವಿಷಯದ ಆಯ್ಕೆ, ಮಾಹಿತಿ ಸಂಗ್ರಹಣೆ , ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ,ಪರಿಶೀಲನೆ.

**2.** ಅಶಾಂತಿ

**3.** ರಾಯ,ಅರಸ,ದೊರೆ

**4.** ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದರಂತೆ

**5.** ಉದಾಹರಣೆ ಘಟ್ಟ. ಗಲ್ಲ, ವೇಗ

**6.** ತಿರುಕ

**7.** ಹೆಂಗಸರು.

**8.** ಭಾವಸೂಚಕ ಚಿನ್ಹೆ.

**9.** ಇ)ಮುರುಕು ಧರ್ಮಶಾಲೆಯಲ್ಲಿ

**10.** ಆ)ವರಕುಮಾರರು

**11.** ಆ)ಆನೆ

**12.** ಇ)ತಿರುಕನ

**13.** ಆ) ಕನ್ಯೆಯರನ್ನು

**14.** ಈ) ಚತುರಂಗ ಬಲ

**15.** ಅ) ಮದುವೆ

**16.** ಇ) ರಾಜರ ದಂಡು ಮುತ್ತಿದ್ದರಿಂದ

**17.** ಕೊಳ್ಳೇಗಾಲ

**18.** ದೊರೆ, ಮುಖಂಡ, ಅರಸು, ರಾಜ

**19.** ತಿರುಕ

**20.** ಕುಸುಮ ಮಾಲೆ

**21.** ಪುರದ ರಾಜ

**22.** ಕನಸಿನಲ್ಲಿ

**23.** ಮಗ

**24.** ಛತ್ರಿ ,, ಕೊಡುವುದು

**25.** ರಾಯ

**26.** ಅಧರ್ಮ

**27.**

೧. ಆನೆ

೨. ಧರ್ಮಶಾಲೆ

೩.ಸುಭೋದ ಸಾರ

೪.ಮದುವೆ

೫.ರಾಯ

೬.ಸೈನ್ಯದ ನಾಲ್ಕು ಭಾಗ

೭.ಧನ,ರಾಜ್ಯ, ತನುಜ,ಯುವತಿ

೮.ಸೈನ್ಯ

**28.** ಮೆಚ್ಚುವ+ಅಂದದಿ

**29.** ಬಂದೆವು+ಎನಲು

**30.** ಮಕ್ಕಳು+ಆದುವು+ಆಗಲೇ

**31.** ನುಡಿದನು+ಅನಿತು

**32.** ಬಿಟ್ಟರು+ಅಲ್ಲಿಯೇ

**33.** ತಿರುಕ ಊರಿನ ಹೊರಗೆ ಮುರುಕು ಧರ್ಮ ಶಾಲೆಯಲ್ಲಿ ವಾಸಿಸುತ್ತಿದ್ದನು.

**34.** ತಿರುಕನ ಕನಸಿನಲ್ಲಿ ಪುರದ ರಾಜನು ಸತ್ತಿದ್ದನು.

**35.** ಆನೆಯ ಕೈಯಲ್ಲಿ ತಿರುಕನು ಮಾಲೆ ಹಾಕಿಸಿಕೊಂಡನು.

**36.** ಕನಸಿನಲ್ಲಿ ರಾಜ ಸುಖವಾಗಿ ರಾಜ್ಯವಾಳುತ್ತಿದ್ದನು.

**37.** ಲೋಲನಾದ ರಾಜ ಮಂತ್ರಿಗೆ ಕನ್ಯೆಯರನ್ನು ಹುಡುಕಿ ಮಕ್ಕಳಿಗೆ ಮದುವೆ ಮಾಡಬೇಕು ಎಂದನು.

**38.** ಉಳಿದ ರಾಯರೆಲ್ಲರು ಮೆಚ್ಚುವಂತೆ ರಾಜನು ಮಕ್ಕಳಿಗೆ ಮದುವೆ ಸಂಭ್ರಮಗಳನ್ನು ಮಾಡಿದನು.

**39.** ಧನದ ಮದ, ರಾಜ್ಯ ದ ಮದ, ತನುಜಮದ, ಯುವತಿಯರ ಮದದಿಂದ ರಾಜನು ಹಿಗ್ಗುತ್ತಿದ್ದನು.

**40.** ತಿರುಕರಾಜನಿಗೆ ನೃಪರ ದಂಡು ಮನೆಯನ್ನು ಮುತ್ತಿದಂತೆ ಆಯಿತು.

**41.** ತಿರುಕನಿಗೆ ಪಟ್ಟವನ್ನು ಕಟ್ಟಿದವರು ನೃಪರು.

**42.** ಮುಪ್ಪಿನ ಷಡಕ್ಷರಿ

**43.** ಪುರದ ರಾಜನು ಸತ್ತಾಗ ಅವನಿಗೆ ಗಂಡು ಮಕ್ಕಳಿಲ್ಲದಿದ್ದರಿಂದ, ಆ ಪುರಕ್ಕೆ ಹೊಸ ನಾಯಕನನ್ನು ಆಯ್ಕೆ ಮಾಡಿ ತರಲು ಕರಿಯನ ಕೈಗೆ ಕುಸುಮ ಮಾಲೆಯನ್ನು ಕೊಡುತ್ತಾರೆ.

**44.** ಪುರದ ರಾಜನು ಮರಣ ಹೊಂದಿದ ನಂತರ ಹೊಸ ನಾಯಕನನ್ನು ಆಯ್ಕೆ ಮಾಡಲು ಕರಿಯನ ಕೈಗೆ ಕುಸುಮ ಮಾಲೆಯನ್ನು ಕೊಟ್ಟಿರುತ್ತಾರೆ. ಕರಿಯು ಎಲ್ಲಾ ಕಡೆ ಸುತ್ತಿ ತಿರುಕನಿಗೆ ಕುಸುಮ ಮಾಲೆಯನ್ನು ಹಾಕುತ್ತದೆ. ಆಗ ತಿರುಕನನ್ನು ರಾಜ್ಯದ ರಾಜನನ್ನಾಗಿ ಮಾಡುತ್ತಾರೆ. ಹೀಗೆ ತಿರುಕ ರಾಜನಾಗುತ್ತಾನೆ.

**45.** ಅತಿಯಾದ ಸಂಪತ್ತಿನಿಂದ ಮೆರೆಯುತ್ತಿದ್ದ  ರಾಜನು,ಮಂತ್ರಿಗಳಿಗೆ ಗಂಡು ಮಕ್ಕಳಿಗೆ ಮದುವೆ ಮಾಡಬೇಕು ಅವರಿಗೆ ತಕ್ಕ ವಧು ವನ್ನು ಹುಡುಕಿ ತರುವ ಜವಾಬ್ದಾರಿ ವಹಿಸಿದನು

**46.** ರಾಜನಿಗೆ ಹಣದ ಮದವು,ಗಂಡು ಮಕ್ಕಳು ಎಂಬ ಮದವು,ರಾಜ್ಯ ಮದವು ಹಾಗು ತನ್ನ ಸುತ್ತ ಹೆಂಗಳೆಯರು ಸುತ್ತುವರು ಎಂಬ ಅಂಹಕಾರಗಳು ಏರಿದವು.

**47.** ಪುರದ ರಾಜನಿಗೆ ಪುತ್ರ ಸಂತಾನವಿಲ್ಲದೆ ಮುಂದಿನ ಪಟ್ಟ ಯಾರಿಗೆ ಕಟ್ಟಬೇಕೆಂಬ ಸಮಸ್ಯೆ ಉಂಟಾಯಿತು. ಆದ್ದರಿಂದ ಪಟ್ಟದಾನೆಗೆ ಕುಸುಮಮಾಲೆ ನೀಡಿ ಅದು ಯಾರ ಕೊರಳಿಗೆ ಹಾಕುವುದು ಅವರನ್ನೇ ರಾಜನನ್ನಾಗಿ ಆಯ್ಕೆ ಮಾಡಲು ಕರಿಯ ಕೈಗೆ ಮಾಲೆ ನೀಡಿದರು

**48.** ಪಟ್ಟದ ಆನೆಯು ಯಾರ ಕೊರಳಿಗೆ ಹಾರ ಹಾಕುತ್ತದೆಯೋ ಅವರೇ ಪುರದರಾಜ ಆಗುವರು ಎಂದು ನಿರ್ಧರಿಸಲಾಗಿತ್ತು.  ಆನೆಯೂ ಕೂಡ ತಿರುಕನಿಗೆ ಮಾಲೆ ಹಾಕಿತು ಇದರಿಂದ ತಿರುಕನಿಗೆ ರಾಜನಾಗುವ ಅದೃಷ್ಟ ಬಂತು

**49.** ನೃಪರೆಲ್ಲರೂ ತಿರುಕನಿಗೆ ಪಟ್ಟವನ್ನು ಕಟ್ಟಿ, ಕನ್ಯೆಯರನ್ನು ನೋಡಿ ವಿವಾಹ ಮಾಡಿದರು. ತಿರುಕನು ಅರಮನೆಯಲ್ಲಿ ಮಂತ್ರಿಗಳು, ಸೈನಿಕರು, ಮಕ್ಕಳು ಎಲ್ಲರೊಂದಿಗೆ ಸಂತೋಷದಿಂದಿದ್ದನು.

**50.** ರಾಜನಾದ ತಿರುಕನು ಮದುವೆ ಮಾಡಿಕೊಂಡು ಗಂಡು ಹೆಣ್ಣು ಮಕ್ಕಳು ಹುಟ್ಟಿ ಅತ್ಯಂತ ಸಂತೋಷದಿಂದ , ರಾಜ ವೈಭೋಗದಿಂದ ಜೀವನ ನಡೆಸುತ್ತಿದ್ದನು

**51.** ತಿರುಕ ರಾಜನು ಸಂತೋಷದಿಂದ ಮಕ್ಕಳೊಡನೆ ಆಡುತ್ತಾ ಆನೆ, ಕುದುರೆ,  ರಥ,  ಕಾಲಾಳಿನ ಬಲದೊಂದಿಗೆ ಲೋಲನಾಗಿರಲು ಸುತರುಗಳ ಮದುವೆಯನ್ನು ಮಂತ್ರಿಗೆ ಹೇಳಿ, ವಧು  ಹುಡುಕಿಸಿ ಸಕಲ ಕಾರ್ಯವನ್ನು ರಾಜರೆಲ್ಲರೂ ಮೆಚ್ಚುವ ರೀತಿ ಮಾಡಿದನು.

**52.** ತಿರುಕರಾಜನು ಮಂತ್ರಿಗಳಿಗೆ ಮಕ್ಕಳಿಗೆ ಬಾಲೆಯರನ್ನು ನೋಡಿ ಮದುವೆ ಮಾಡಬೇಕು ಎನ್ನಲು ಅದನ್ನು ಸ್ವೀಕರಿಸಿದ ಮಂತ್ರಿಗಳು  ಮದುವೆಗೆ ಸಿದ್ಧತೆಯನ್ನು   ಅತ್ಯಂತ ಸಂಭ್ರಮದಲ್ಲಿ ಮಾಡಿದರು.ತಿರುಕರಾಜನು ಎಲ್ಲಾ ರಾಜರು ಮೆಚ್ಚುವಂತೆ  ಮದುವೆ ಕಾರ್ಯ ಮಾಡಿದನು.

**53.** ರಾಜನು ಆನೆ, ಕುದುರೆ, ರಥ, ಕಾಲಾನುಗಳ ಸೇನಾ ಬಲದೊಂದಿಗೆ ಸಂತುಷ್ಟನಾಗಿ, ರಾಜ್ಯವೆಲ್ಲ ಗೆದ್ದು, ಇದರ ಮದದೊಂದಿಗೆ ಧನದ ಮದ,  ಸುತರ ಮದ ಹಾಗೂ ಸಖಿಯರು ಮದದಲ್ಲಿ ಸುಖವಾಗಿದ್ದನು.

**54.** ವಿದ್ಯಾರ್ಥಿಗಳ ಅಭಿವ್ಯಕ್ತಿಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**55.** ಅ) ಎಳೆದುಕೊಂಡು ಹೋಗುತ್ತಿರಿ

ಆ) ಆದರೂ

ಇ)ಸಿಂಹಾಸನದ

**56.** ವಿದ್ಯಾರ್ಥಿಗಳ ಅಭಿವ್ಯಕ್ತಿಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**57.** ವಿದ್ಯಾರ್ಥಿಗಳ ಅಭಿವ್ಯಕ್ತಿಯನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**58.** ತಪ್ಪು

**59.** ಸರಿ

**60.** ತಪ್ಪು

**61.** ಸರಿ

**62.** ತಪ್ಪು

**63.** ಸರಿ.

*** *** ***

**ಪದ್ಯಪಾಠ – 8**

**ಅಭಿಮನ್ಯು ಪರಾಕ್ರಮ**

**1.** ಅಗ್ನಿ ಜ್ವಾಲೆ ಮಂಜಿಗೆ ಹೆದರುವುದೇ?

**2.** ಗಾಳಿಯು ಬೆವರುವುದೇ?

**3.** ಲೋಹದ ಹಾವನ್ನು ಹಿಡಿಯಲು ಗರುಡ ಮಂತ್ರವು ಏಕೆ?

**4.** ಮರೀಚಿಕೆಯ ನದಿಯಲ್ಲಿ ದೋಣಿಯನ್ನು ನಡೆಸಲು ಸಾಧ್ಯವೇ?

**5.** ಕಡು ಬೇಸಿಗೆಯಲ್ಲಿ ಮಂಜಿನ ಸ್ಪರ್ಧೆ( ಯುದ್ಧ)

**6.** ಅರ್ಜುನ ಸುಭದ್ರೆಯ ಮಗ

ದ್ರೋಣಾಚಾರ್ಯ

ಪಾಂಡವ ಕೌರವರಿಗೆ ಬಿಲ್ವಿದ್ಯೆ ಕಲಿಸಿದ ಗುರು

ಕರ್ಣ

ಪಾಂಡವರಲ್ಲಿ ಹಿರಿಯವ

**7.** ಯುದ್ಧ

**8.** ಕುಮಾರವ್ಯಾಸ

**9.** ಕುರುಕ್ಷೇತ್ರ ಯುದ್ಧ

**10.** U

**11.** ಗುರು

**12.** ಚಕ್ರವ್ಯೂಹ

**13.** ಕರ್ಣಾಟ ಭಾರತ ಕಥಾಮಂಜರಿ

**14.** ಅರ್ಜುನ

**15.** ಧೈರ್ಯ ಮತ್ತು ಕರ್ತವ್ಯ ಪಾಲಿಸಬೇಕು

**16.** ಈ ಮಾತನ್ನು ಅಭಿಮನ್ಯು ಧರ್ಮರಾಯನಿಗೆ ಹೇಳಿದನು.

ಸಂದರ್ಭ: ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಲು ಧರ್ಮರಾಯನ ಬಳಿ ಅಪ್ಪಣೆ ಕೇಳುವಾಗ ಈ ಮಾತನ್ನು ಹೇಳುತ್ತಾನೆ.

**17.** ಈ ಮಾತನ್ನು ಧರ್ಮರಾಯನು ಅಭಿಮನ್ಯುವಿಗೆ ಹೇಳಿದನು.

ಯುದ್ಧ ಮಾಡಲು ಹೋಗುತ್ತೇನೆ ಎಂದ ಅಭಿಮನ್ಯುವಿಗೆ ನೀನಿನ್ನು ಚಿಕ್ಕವನು ಯುದ್ಧ ಬೇಡ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**18.** ಈ ಮಾತನ್ನು ಅಭಿಮನ್ಯು ಧರ್ಮರಾಯನಿಗೆ ಹೇಳಿದನು.

ದ್ರೋಣಾಚಾರ್ಯರು ಹೂಡಿರುವ ಚಕ್ರವ್ಯೂಹವೆಂಬ ಕಡಿತಕ್ಕೆ ನಾನು ಹೆದರುವುದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ

**19.** ಈ ಮಾತನ್ನು ಧರ್ಮರಾಯನು ಅಭಿಮನ್ಯುವಿಗೆ ಹೇಳಿದನು.ಯುದ್ಧ ದಲ್ಲಿ ಗೆಲ್ಲುವುದು ಸಾಮಾನ್ಯವಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ

**20.** ಈ ಮಾತನ್ನು ಅಭಿಮನ್ಯು ಧರ್ಮರಾಯನಿಗೆ ಹೇಳಿದನು.

ಯುದ್ಧ ಮಾಡುವ ಧೈರ್ಯ ಸಾಹಸ ನನ್ನಲ್ಲೂ ಇದೆ ಚಿಕ್ಕವನು ಎಂದು ಅಲ್ಲಗಳೆಯಬೇಡ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ

**21.** ಪರಾಕ್ರಮ

ತಡೆದುಕೊಳ್ಳಲು ಸಾಧ್ಯ

ಸಾಧ್ಯವಾಗುವುದಿಲ್ಲ

ಅಸಾಧ್ಯ

ನಾಶಮಾಡು

ಅಪ್ಪಣೆ

**22.** - U - U U U U U U U U U

ಕೋ ಳಿ ಕೂ ಗಿ ತು ಬೆ ಳ ಕು ಹ ರಿ ಯಿ ತು

U U U - U U U U -- U

**23.** ರಜೆಯ ಗೌಜಿ ಮುಗಿಯಿತಲ್ಲ

--U -- U UUU -- U

ಗುಲ್ಲು ಸೊಲ್ಲು ನಿಲಿಸಿ ಮೆಲ್ಲ

-- U-- U -- U - U - U - U U

ಮಕ್ಕಳೆಲ್ಲ ಸಿದ್ದರಾಗಿ ಮತ್ತೆ ಓದಿಗೆ

_ U U U U U U

**24.** ಬೇಸಿಗೆ ರಜೆಯಲಿ

- U U _ U U

ಅಜ್ಜಿ ಯ ಊರಿಗೆ

_ U U _ U U _

ಹೋಗುವುದೆಂಥ ಮಜಾ

_ U U _ U U

**25.** ಬಾಳೆಯ ತೋಟದ

_ U U _ U U

ಪಕ್ಕದ ಕಾಡೊಳು

_ U _ __ U U __ U U U

ವಾಸಿಸುತ್ತಿದ್ದವು ಮಂಗಗಳು

**26.** ಶರ ,ಕುಸುಮ ,ಭೋಗ, ಭಾಮಿನಿ ,ಪರಿವರ್ದಿನಿ,ವಾರ್ಧಕ

**27.** ಭಾಮಿನಿ ಷಟ್ಪದಿ ಸ್ವರೂಪ

**28.** ಮೇಣದ ಹಾವು ಅಂದರೆ ಜೀವ ಇರದ ಹಾವನ್ನು ಹಿಡಿಯಲು ಯಾವ ಮಂತ್ರದ ಅವಶ್ಯಕತೆಯು ಇರುವುದಿಲ್ಲ.. ಎಂಬುದೇ ಇದರ ಸಾರಾಂಶ.

**29.** ಚಕ್ರವ್ಯೂಹವನ್ನು ನಿರ್ಮಿಸಿ ಮೋಸದಿಂದ ಗೆಲ್ಲಲು ಹೊರಟ ಕೌರವರನ್ನು ಸದೆ ಬಡಿದು ಅವರನ್ನೆಲ್ಲ ತನ್ನ ದೊಡ್ಡಪ್ಪನ ಪಾದಗಳಿಗೆ ಬೀಳಿಸುವೆ ಎಂದು ಹೇಳುತ್ತಾನೆ.

**30.** ವೈರಿವ್ಯೂಹದೊಳಗೆ ಕೃಪರು, ನಂದನರು, ರಾಧೇಯ ಭೂರೀಶ್ರವ ,ಜಯದ್ರಥರು ಮುಖ್ಯವಾಗಿ ದ್ರೋಣಚಾರ್ಯರು ಇದ್ದಾರೆ.

**31.** ವೈರಿವ್ಯೂಹದೊಳಗಿನ ವೀರರು ಎಂಥಹ ಶಕ್ತಿವಂತರು ಎಂದರೆ ಸ್ವತಃ ಶಿವನೇ ಎದರು ಬಂದರು ಸಹ ಅವನನ್ನೆ ಹಿಂದು ಮುಂದು ನೋಡದೆ ಸೋಲಿಸುವಂತಹವರು ಎಂದು ಧರ್ಮರಾಯನು ಹೇಳುತ್ತಾನೆ.

**32.** ಗಾಳಿಯು ಎಂದಿಗೂ ಬೆವರುವುದಿಲ್ಲ ,ಉರಿಯುತ್ತಿರುವ ಬೆಂಕಿಯು ಎಂದಾದರೂ ಮಂಜಿಗೆ ಹೆದರುವುದೇ, ಹಿಮದ ಮಸುಕಿನ ಜೊತೆ ಯುಧ್ದ ಮಾಡಲಾಗುತ್ತದೆಯೆ.ಹಾಗಯೇ ನಾನು ಯಾವುದಕ್ಕೂ ಹೆದರುವುದಿಲ್ಲ ಎಂದು ಹೇಳುತ್ತಾನೆ.

**33.** ವೈರಿಗಳನ್ನು ಯಮನ ಮನೆಗೆ ಕಳುಹಿಸುತ್ತೇನೆ ಎಂದು ಅಭಿಮನ್ಯುವು ಹೇಳುತ್ತಾನೆ.

**34.** ಶತ್ರುಗಳು ಬಿಡುವ ಬಾಣಗಳು ಅಭಿಮನ್ಯುವಿಗೆ ಸೈರಿಸಲಾಗದು ಎಂದು ಧರ್ಮರಾಯ ಹೇಳುತ್ತಾನೆ.

**35.** ಹಾವುಗಳಿಂದ ರಕ್ಷಣೆ ಪಡೆಯಲು, ಅದರಿಂದಾಗುವ ತೊಂದರೆಯನ್ನು ನಿವಾರಿಸಲು ಗರುಡ ಮಂತ್ರವನ್ನು ಬಳಸುತ್ತುದ್ದರು.

**36.** ದ್ರೋಣಾಚಾರ್ಯರು

**37.** ಶತ್ರುಗಳ ಹೆಣಗಳು,ಧರ್ಮರಾಯನ ಪಾದಕ್ಕೆ ಔತಣವಾಗುವುದು.

**38.** ಚಿಕ್ಕವನು ಎಂದು ಅಲ್ಲಗಳೆಯದಿರಿ,ನಾನು ಹೆದರದೆ ಧೈರ್ಯದಿಂದ ಹೋರಾಡುತ್ತೇನೆ ಎಂದು ಹಲವು ಉದಾಹರಣೆ ನೀಡುತ್ತಾನೆ.

**39.** ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**40.** ಅಮ್ಮನಿಗೆ ಅರಿವು ಮೂಡಿಸಿ ಹಬ್ಬ ಮಾಡುವುದು.

**41.** ಮೇಲಿನ ಎಲ್ಲವೂ

**42.** ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

**43.** ವಿದ್ಯಾರ್ಥಿಗಳ ಉತ್ತರವನ್ನು ಪರಿಶೀಲಿಸಿ ಮಾರ್ಗದರ್ಶಿಸುವುದು.

*** *** ***